# ತಾಂಬೂಲ ಮಂಜರಿ

ಅನುವಾದಕರು

ಜಿ. ವಿ. ಬಿ. ನಾಯುಡು, ಬಿ.ಎಸ್‌ಸಿ. (ಆನರ್ಸ್)

★

ಉಷಾ ಸಾಹಿತ್ಯ ಮಾಲೆ

ಮೈಸೂರು

# ತಾಂಬೂಲ ಮಂಜರಿ

ಅನುವಾದಕರು

ಜಿ. ವಿ. ಬಿ. ನಾಯುಡು, ಬಿ.ಎಸ್‌ಸಿ. (ಆನರ್ಸ್)
ಅಡಿಕೆ ಸಂಶೋಧನಾಧಿಕಾರಿಗಳು
ಹಿರೇಹಳ್ಳಿ, ತುಮಕೂರು ಜಿಲ್ಲೆ

ಉಷಾ ಸಾಹಿತ್ಯಮಾಲೆ
ಮೈಸೂರು

Rarest Archiver

ಮೊದಲ ಮುದ್ರಣ: ೧೯೬೩

ಮುದ್ರಕರು, ಪ್ರಕಾಶಕರು

ಆರ್. ಎನ್. ಹಬ್ಬು

ಉಷಾ ಪ್ರೆಸ್, ಮೈಸೂರು - 1

Rarest Archiver

# ಅ ರ್ಪ ಣೆ

ಶ್ರೀ ತಿರುಪತಿ ಶ್ರೀ ವೆಂಕಟರಮಣಸ್ವಾಮಿಯ
ದಿವ್ಯ ಸನ್ನಿಧಾನಕ್ಕೆ.

ಜಿ. ವಿ. ಬಿ. ನಾಯುಡು

Rarest Archiver

# ಮುನ್ನುಡಿ

ತಾಂಬೂಲ ಸೇವನೆಯು ನಮ್ಮ ಸಮಾಜದಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಪಡೆದಿದೆ. ಮಹಾಭಾರತಕಾಲಕ್ಕಿಂತಲೂ ಹಿಂದಿನಿಂದ ತಾಂತ್ರಿಕ ಪಂಗಡದವರಲ್ಲಿ ವಿಶೇಷ ಬಳಕೆಯಲ್ಲಿದ್ದು ಸುಮಾರು ಕ್ರಿ. ಪೂ. ೨೦೦ರ ಹೊತ್ತಿಗೆ ಸರ್ವರೂ ಉಪಯೋಗಿಸುವಂತಾಯಿತು. ಮದುವೆಯು ಪ್ರಾರಂಭವಾಗಿ ಮುಕ್ತಾಯವಾಗುವುದಕ್ಕೂ, ಎಲ್ಲಾ ಶುಭಕಾರ್ಯಗಳಿಗೂ, ದೇವತಾರಾಧನೆಗೂ, ಅತಿಥಿ ಸತ್ಕಾರಕ್ಕೂ, ದಾನಧರ್ಮಗಳಿಗೂ ಅಥವ ದೊಡ್ಡವರನ್ನು ಗೌರವಿಸುವುದಕ್ಕೂ ತಾಂಬೂಲವೇ ಪ್ರಧಾನ. ತಾಂಬೂಲವಿಲ್ಲದ ಊಟವು ಎಷ್ಟೇ ಮಹತ್ವದ್ದಾಗಿದ್ದರೂ ಪೂರ್ಣವಲ್ಲವು. ಅಷ್ಟೇಕೆ, ತಾಂಬೂಲಕೊಡದಿದ್ದವರಿಗೆ ನಮ್ಮ ಸಮಾಜದಲ್ಲಿ ಹೆಚ್ಚಿನ ಗೌರವವಿಲ್ಲ. ಹೀಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚಾರದಲ್ಲಿ ಒಂದು ಅಂಗವಾಗಿ ಪ್ರಾರಂಭವಾದ ತಾಂಬೂಲ ಸೇವನೆಯು ಈಗ ನಮ್ಮ ಜನಾಂಗದ ಒಂದು ಮುಖ್ಯ ಅಭ್ಯಾಸ ಅಥವಾ 'ಚಟ'ವಾಗಿ ನಿಂತಿದೆ. ಹೊಗೆಸೊಪ್ಪಿನ ವಿವಿಧ ರೂಪದ ಸೇವನೆಯು ಪ್ರಥಮಸ್ಥಾನವನ್ನೂ ಇದು ಎರಡನೆಯ ಸ್ಥಾನವನ್ನು ಗಳಿಸಿವೆ. ಗಂಡಸು ಹೆಂಗಸು, ದೊಡ್ಡವರು ಚಿಕ್ಕವರು, ಎಂಬ ಭೇದವಿಲ್ಲದೆ ದುಡಿಮೆ ಮಾಡುವ ಪ್ರತಿಯೊಬ್ಬರಿಗೂ ಸುಖವನ್ನೀಯುವ ವಸ್ತುಗಳಲ್ಲಿ ತಾಂಬೂಲವು ಪ್ರಥಮ ಸ್ಥಾನವನ್ನು ಹೊಂದಿದೆ. ಆದರೆ ಬಾಕಿ ಚಟಗಳು ಬರಿಯ ಅಭ್ಯಾಸವಾಗಿದ್ದು ಅದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗುವುವಾದರೂ ಇದರಿಂದ ಮಾತ್ರ ಅನೇಕವಿಧಗಳಲ್ಲಿ ಅನುಕೂಲವೇ ಆಗಿರುವುದರಿಂದ ಇದರ ಬಳಕೆಯು ದಿನೇ ದಿನೇ ಹೆಚ್ಚುತ್ತಿದೆ.

ತಾಂಬೂಲದ ಬಳಕೆಯು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಥಾಯ್‌ಲ್ಯಾಂಡ್, ವಿಯಟ್‌ನಾಮ್, ಮಲಯು, ನ್ಯೂಗಿನಿ, ಇಂಡೋನೇಸಿಯಾ, ದಕ್ಷಿಣಚೀಣ, ಮಡಗಾಸ್ಕರ್, ಫಿಲಿಪ್ಪೈನ್ ಮುಂತಾದ ಉಷ್ಣವಲಯದ ಪ್ರದೇಶಗಳಲ್ಲಿ ಹೆಚ್ಚಾಗಿವೆ. ಈ ರೀತಿ ಹರಡಿರುವ ಈ ಚಟದ ಪ್ರಾರಂಭವು ಎಲ್ಲಿ ಆಯಿತೆಂಬುದು ಸರಿಯಾಗಿ ನಿಗದಿ ಮಾಡಲು ಸಾಧ್ಯವಿಲ್ಲ. ಶಬ್ದ

Rarest Archiver

ಶಾಸ್ತ್ರದ ಮೇರೆಗೆ ' ತಾಂಬೂಲ ' ಎಂಬ ಶಬ್ದವು (ತಮ್+ಬೂಲ), ಆಗ್ನೇಯ ಏಷ್ಯಾದಲ್ಲಿ ಪ್ರಾರಂಭವಾಗಿರಬೇಕೆಂಬ ಊಹೆ ಇದ್ದರೂ ಬಹು ಹಿಂದಿನ ಕಾಲದಿಂದ ವೈದೀಕರಲ್ಲಿ ಇದರ ಸೇವನೆಯು ಕಂಡುಬಂದಿರುವುದ ರಿಂದ ಅದು ನಮ್ಮ ದೇಶದಲ್ಲಿಯೇ ಪ್ರಾರಂಭವಾಗಿರಬೇಕೆಂದು ತೀರ್ಮಾ ನಿಸಬಹುದಾಗಿದೆ. ಪ್ರಾರಂಭವು ಎಲ್ಲಿಯೇ ಆಗಿದ್ದರೂ ಸುಮಾರು ಕ್ರಿ. ಪೂ. ೨೦೦ ರಿಂದ ಕ್ರಿ. ಶ. ೬೦೦ರ ವರೆಗೆ ಬಹಳವಾಗಿ ಹರಡಿ ಅದು ಅಂದಿನ ಜನಜೀವನದಲ್ಲಿ ಬಹಳ ಮುಖ್ಯಪಾತ್ರವನ್ನು ಹೊಂದಿತ್ತೆಂದು ಕಂಡುಬರುತ್ತದೆ.

ಆ ಕಾಲದ ಕಥೆಗಳಲ್ಲಿಯೂ, ಗ್ರಂಥಗಳಲ್ಲಿಯೂ ತಾಂಬೂಲದ ವಿಷ ಯವು ಅನೇಕ ವಿಧದಲ್ಲಿ ನಿರೂಪಿತವಾಗಿದೆ. ವಾತ್ಸಾಯನಸೂತ್ರದಲ್ಲೂ, ಚರಕ, ಸುಶ್ರುತರ ಗ್ರಂಥಗಳಲ್ಲಿಯೂ, ಅದರ ಮೊದಲ ಉಲ್ಲೇಖನ ಕಂಡು ಬರುತ್ತದೆ. ಅಲ್ಲಿಂದೀಚೆಗೆ ಸೋಮದೇವನ ಕಥಾಸರಿತ್ಸಾಗರದಲ್ಲಿ ಇದರ ಗುಣವಿಶೇಷಗಳು ಹೇಳಲ್ಪಟ್ಟು ' ಹಿತೋಪದೇಶ 'ದಲ್ಲಿ ಇದರ ಸೇವನೆಯು ವರ್ಣಿಸಲ್ಪಟ್ಟದೆ. ಕಾಳಿದಾಸ, ಶೂದ್ರಕ, ಬಾಣಭಟ್ಟ ಮೊದಲಾದ ಕವಿಗಳು ತಮ್ಮ ಕಾವ್ಯಗಳ ರಸಿಕತೆಯನ್ನು ಹೆಚ್ಚಿಸಲು ಇದನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಂಡಿದ್ದಾರೆ. ಅಮರುಕನ ' ಅಮರಶತಕ ' ದಲ್ಲಂತೂ ಇದು ಅತಿ ಸುಂದರವಾಗಿ ಚಿತ್ರಿಸಲ್ಪಟ್ಟದೆ. ರಾಜಾಧಿರಾಜರುಗಳೆಲ್ಲರೂ ಇದಕ್ಕೆ ಮನ್ನಣೆಕೊಟ್ಟು ತಮ್ಮ ಉಪಯೋಗಕ್ಕಾಗಿ ತಾಂಬೂಲ ಪೆಟ್ಟಿಗೆ ಯನ್ನು ಹೊರಲು ' ಕರಂಕವಾಹಿನಿ ' ಎಂಬುವ ಉನ್ನತ ಅಧಿಕಾರಿಯನ್ನೇ ನೇಮಿಸಿಕೊಳ್ಳುತ್ತಿದ್ದರು. ಅಲ್ಲದೆ ತಮ್ಮ ರಾಣಿಯರನ್ನು ಬಿಟ್ಟುಹೋದರೂ ಈ ಕರಂಕವಾಹಿನಿಯರನ್ನು ಮಾತ್ರ ಬಿಡುವಂತಿರಲಿಲ್ಲ ! ಸುಸಂಸ್ಕೃತ ನಾಗರೀಕನು ಎಲ್ಲಿ ಹೋದರೂ ಅವನ ಜೊತೆಯಲ್ಲಿಯೇ ಪ್ರಣಯಿನಿ ಯಂತೆ ಹಿಂಬಾಲಿಸುತ್ತದೆ ಈ ತಾಂಬೂಲ. ಪ್ರಣಯ ಕವನಕ್ಕೆ ಕಾಮ ಚೇಷ್ಟೆಗೆ ಬಿಲ್ಲು ಬಾಣಗಳು ಈ ಎಲೆ ಅಡಕೆಗಳು ! ಶೃಂಗಾರ ರಸವನ್ನು ಚಿಮ್ಮುವುದು ಈ ತಾಂಬೂಲ ರಸ. ನಲ್ಲ ನಲ್ಲೆಯರ ಪ್ರಣಯ ಕಾಮ ಕೇಳಿಗೆ ರಸಿಕ ಪ್ರಿಯೆಯಿದು. ಇದು ತುಟಿ ಚುಂಬಿಸಿ, ಕೆನ್ನೆ ಕಂಪಿಸಿ ಬಾಯಿಂದ ಬಾಯಿಗೆ ಭೇದವಿಲ್ಲದೆ ಮೋದವೆಸಗುವ ಸೌದಾಮಿನಿ.

Rarest Archive

ಅಮೃತಕ್ಕಿಂತಲೂ ರುಚಿ " ಎಂದು ಈ ತಾಂಬೂಲವನ್ನು ವರ್ಣಿಸಿದ್ದಾರೆ. ಪ್ರತಿಯೊಬ್ಬರೂ ಎಲೆಯನ್ನು ಸೇವಿಸಬೇಕು. ' ವೀಳೆಯವಿಲ್ಲದ ಬಾಯಿ ಕೂಳು ಕಾಣದ ನಾಯಿ | ಬಾಳೆಗಳು ಇಲ್ಲದೆಲೆದೋಟ | ಪಾತರದ ಮೇಳ ಮುರಿದಂತೆ | " ಎಂದು ಸರ್ವಜ್ಞಮೂರ್ತಿ ಎತ್ತಿ ಆಡಿದ್ದಾನೆ. " ಎಲೆಯ ಮೆಲ್ಲದ ಬಾಯಿ ತಲೆಹೋದ ಮುಂಡದಂತೆ " ಎಂದಿದ್ದಾರೆ.

ತಾಂಬೂಲದಲ್ಲಿ ಅನೇಕ ಒಳ್ಳೆಯ ಗುಣಗಳಿವೆ. ಅದು ವಾತ ಪಿತ್ತಗಳನ್ನು ಕಡಿಮೆ ಮಾಡುತ್ತದೆ. ಕಫವನ್ನು ಹೊರಗೆ ಹಾಕುತ್ತದೆ. ಹೊಟ್ಟೆ ಉಬ್ಬರವನ್ನಿಳಿಸಿ ಹೊಟ್ಟೆಯಲ್ಲಿನ ಕ್ರಿಮಿಗಳನ್ನು ನಾಶಮಾಡುತ್ತದೆ ಬಾಯಿ ದುರ್ವಾಸನೆಯನ್ನು ಹೋಗಲಾಡಿಸಿ ಹಲ್ಲುಗಳನ್ನು ಬಿಗಿ ಮಾಡುತ್ತದೆ. ಜೀರ್ಣಕಾರಿಯಾಗಿದ್ದು, ಮಲಬದ್ಧತೆಯನ್ನು ತೆಗೆಯುತ್ತದೆ. ಹುಟ್ಟಿದ ಮಕ್ಕಳಿಗೆ ೨|| ತಿಂಗಳು ಕಳೆದನಂತರ ತಾಂಬೂಲ ರಸವನ್ನು ಕುಡಿಸುವುದರಿಂದ ಅವು ಧೃಡಕಾಯರಾಗಿ ರೋಗರಹಿತವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಬಾಣಂತಿಯರಿಗೆ ಅದು ಬಹು ಶ್ರೇಷ್ಠವು. ಹೀಗೆ ಅನೇಕ ರೋಗಗಳನ್ನು ನಿವಾರಿಸುವುದರಿಂದ ದಿನಕ್ಕೆ ಮೂರು ಸಲವಾದರೂ ಇದನ್ನು ಉಪಯೋಗಿಸುವುದು ಒಳ್ಳೆಯದೆಂದು ಪ್ರಸಿದ್ಧವಾಗಿದೆ. ಇತ್ತೀಚೆಗೆ ಹಸಿರು ಎಲೆಗಳಲ್ಲಿರುವ ' ಕ್ಲೋರೋಫಿಲ್ ' ಎಂಬ ಅಂಶವು ದುರ್ಗಂಧವನ್ನು ತೆಗೆಯುವುದರಲ್ಲಿ ಬಹಳ ಪ್ರಖ್ಯಾತಿಯಾಗಿದ್ದು ಅದರ ಬಳಕೆಯು ಅನೇಕ ವಿಧಗಳಲ್ಲಿ ಪ್ರಾರಂಭವಾಗಿದೆ. ವಿಳ್ಳೇದೆಲೆಗಳಲ್ಲಿಯೂ ಈ ಅಂಶವು ಹೇರಳವಾಗಿರುವುದರಿಂದ ಇದು ಹಿಂದಿನ ನಂಬಿಕೆಯನ್ನು ಪುಷ್ಟೀಕರಿಸಿದೆ. ಅಲ್ಲದೆ ಸುಣ್ಣದ ಅಂಶವನ್ನು ಮಾತ್ರೆಗಳ ರೂಪದಲ್ಲಿಯಾದರೂ, ಔಷಧಿಯಾಗಿಯಾದರೂ ಕೊಡುವುದರಿಂದ ರಕ್ತವೃದ್ಧಿಯಾಗಿ ಶಕ್ತಿ ಹೆಚ್ಚುವುದೆಂದು ಅದರ ಸೇವನೆಯು ಹೆಚ್ಚಿದೆ. ತಾಂಬೂಲದಲ್ಲಿನ ಸುಣ್ಣವು ಇದೇ ಕೆಲಸವನ್ನು ನೆರವೇರಿಸುವುದು. ಅಡಕೆಯಲ್ಲಿನ ಚೊಗರಿನಂಶ ಹೊಟ್ಟೆಯಲ್ಲಿನ ಕ್ರಿಮಿಗಳನ್ನು ನಾಶಪಡಿಸುವುದೆಂದು ಖಚಿತವಾಗಿದೆ. ಆದುದರಿಂದ ತಾಂಬೂಲ ಸೇವನೆಯು ಒಂದು ಚಟವಾಗಿ ಪ್ರಾರಂಭವಾಗಿದ್ದರೂ ಅದರ ಬಹುಮುಖ ಗುಣಗಳಿಂದ ಅದರ ಬಳಕೆಯು ಹೆಚ್ಚಿದೆ.

Rarest Archives

ಸ್ತ್ರೀಯರಿಗಂತೂ ಇದು ಒಂದು ಸೌಂದರ್ಯ ಸಾಧಕ ವಸ್ತುವಾಗಿದೆ. ಇದು ತುಟಿಗಳನ್ನು ಕೆಂಪಗೆಮಾಡಿ, ಬಾಯಿಗೆ ಸುವಾಸನೆ ತಂದುಕೊಡುವುದರಿಂದ ಭಾರತದ ಸ್ತ್ರೀಯರಲ್ಲಿ ಒಂದು ಅಪೂರ್ವ ಸ್ಥಾನವನ್ನು ಪಡೆದಿದೆ. ಅದನ್ನು ಸೌಂದರ್ಯಕ್ಕಾಗಿ ಮೆಲ್ಲುವುದರಿಂದ ಸೂಳೆಯರ ಬಾಯಿಯೂ ಶುದ್ಧವಾಗುತ್ತದೆ— " ಬೆಲೆವೆಣ್ಣಿನಾಬಾಯಿ ಹಲವೆಂಜಲೆನಬೇಡ। ಹುಳಿಮುಟ್ಟಿ ಕಿಲುಬು ಕೆಡುವಂತೆ ಬಾಯವಳ। ಎಲೆ ಮೆಲ್ಲಲು ಶುದ್ಧ ॥ "ಎಂದು ಸರ್ವಜ್ಞಮೂರ್ತಿ ಸಾರಿದ್ದಾನೆ. ಬಹುಶಃ ನಮ್ಮ ಜನರ ತುಟಿ ಬಣ್ಣವನ್ನು ಅನುಸರಿಸಿಯೇ ಪಾಶ್ಚಾತ್ಯರು ಈಗಿನ 'ಲಿಪ್‌ಸ್ಟಿಕ್' ತಯಾರಿಸಿರಬಹುದು. ಇಷ್ಟೆಲ್ಲಾ ವಿಶೇಷ ಗುಣಗಳನ್ನು ಹೊಂದಿರುವುದರಿಂದಲೇ ಇದು ನಮ್ಮ ನಿತ್ಯ ಜೀವನದಲ್ಲಿ, ಬಹುಮುಖ್ಯವಾಗಿ "ನಮ್ಮನ್ನು ಹುಟ್ಟಿದಾಗ ಸ್ವಾಗತಿಸಿ, ವಿವಾಹ ಕಾಲದಲ್ಲಿ ಜೊತೆಯಾಗಿ, ಸತ್ತಾಗ ಸಾಗಹಾಕುವುದು."

ಇಂತಹ ಗುಣಗಳುಳ್ಳ ತಾಂಬೂಲ ಸೇವನೆಯ ವಿಚಾರವಾಗಿ ಸಾರ್ವಜನಿಕರಿಗೆ ಹೆಚ್ಚಾಗಿ ತಿಳಿದಿಲ್ಲ. ತಾಂಬೂಲವನ್ನು ಯಾಕೆ. ಹೇಗೆ ಶಾಸ್ತ್ರೋಕ್ತವಾಗಿ ಸೇವಿಸಬೇಕು? ಹಾಗೆ ಸೇವಿಸುವುದರಿಂದ ಒದಗುವ ಅನುಕೂಲಗಳೇನು, ಎಂಬುದರ ಅರಿವು ನಮಗಿಲ್ಲದ್ದರಿಂದ ಅದರ ಸೇವನೆಯು ಬರೇ ಚಟವೆಂದು ತಿಳಿದುಕೊಂಡಿದ್ದೇವೆ. ಅನೇಕರು ಇದನ್ನು ಚಟವೆಂದೇ ಸೇವಿಸುತ್ತಿದ್ದರೂ ಅದರ ಗುಣಗಳನ್ನು ತಿಳಿದು ಸರಿಯಾದ ರೀತಿಯಲ್ಲಿ ಸೇವಿಸಿದರೆ, ಅನೇಕ ವಿಧಗಳಲ್ಲಿ ಸಹಾಯವಾಗುತ್ತದೆ. ಆದರೆ ಇದುವರೆಗೆ ತಾಂಬೂಲದ ವಿಷಯದಲ್ಲಿ ಗ್ರಂಥವನ್ನು ಯಾರೂ ರಚಿಸಿಲ್ಲ. "ತಾಂಬೂಲ ಮಂಜರಿ"ಯೇ ಈ ಕಾರ್ಯವನ್ನು ನೆರವೇರಿಸುವ ಮೊದಲನೆಯ ಪುಸ್ತಕ. ಇದೂ ಸಹ ಒಂದು ಕೃತಿಯಲ್ಲ; ಸಂಗ್ರಹ ಅಷ್ಟೇ! ಸಂಗ್ರಹಕಾರರು ಯಾರೆಂಬುದು ತಿಳಿದಿಲ್ಲ. ನಾನಾ ಮೂಲ ಗ್ರಂಥಗಳಿಂದ ತಾಂಬೂಲಕ್ಕೆ ಸಂಬಂಧಿಸಿದ ಶ್ಲೋಕಗಳನ್ನೆಲ್ಲಾ ಆರಿಸಿ, ವಿಂಗಡಿಸಿ, ಮರುಜೋಡಿಸಿ, ಹಾಗೆಯೇ ಬಿಟ್ಟದ್ದನ್ನು ಪೂನಾ ಓರಿಯಂಟಲ್ ಸಂಶೋಧನಾ ಸಂಸ್ಥೆಯವರು ಕಂಡುಹಿಡಿದು ಅದನ್ನು ಪ್ರಚುರಪಡಿಸಿ ಉಪಕಾರ ಮಾಡಿದ್ದಾರೆ. ಶ್ರೀ ಜೆ. ಎಸ್. ಪಾಡೆಯವರು ಈ ಶ್ಲೋಕಗಳನ್ನೆಲ್ಲಾ ಚರ್ಚಿಸಿ,

Rarest Archiver

ಅವುಗಳ ಮೂಲವನ್ನು ಸಾಧ್ಯವಾದ ಮಟ್ಟಿಗೂ ಕಂಡುಹಿಡಿದು, ವಿಮರ್ಶನಾತ್ಮಕವಾಗಿ ಬರೆದಿದ್ದಾರೆ. ಅವರ ವಿಮರ್ಶನೆಯ ಮುಖ್ಯಾಂಶವನ್ನು ನಾನು ಮುಂದೆ ಭಾಷಾಂತರಿಸಿದ್ದೇನೆ. ತಾಂಬೂಲದ ವಿಚಾರವು ಬಹಳ ತಿಳುವಳಿಕೆಯುಳ್ಳದ್ದಾಗಿದ್ದು, ಅದನ್ನು ಕನ್ನಡ ಬಾಂಧವರೆಲ್ಲರಿಗೂ ತಿಳಿಯಪಡಿಸಬೇಕೆಂಬ ಹೆಬ್ಬಯಕೆಯಿಂದ ಇದನ್ನು ಕನ್ನಡಿಸಿ ತಾತ್ಪರ್ಯವನ್ನು ಕೊಟ್ಟಿದ್ದೇನೆ.

ಇದನ್ನು ಭಾಷಾಂತರಿಸಲು ಅನುಮತಿಯಿತ್ತ ಪೂನಾ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ರಿಜಿಸ್ಟ್ರಾರ್‌ರವರಿಗೂ, ಶ್ರೀ ಜಿ. ಎಸ್. ಪಾಡೆಯವರಿಗೂ, ಇದರ ತಾತ್ಪರ್ಯವನ್ನೂ, ಕ್ಲಿಷ್ಟಪದಗಳ ಅರ್ಥವನ್ನೂ ತಿಳಿಯಲು ಸಹಾಯ ಮಾಡಿದ, ಕ್ಯಾತ್ಸಂದ್ರದಲ್ಲಿರುವ, ತರ್ಕಶಾಸ್ತ್ರ ಅಧ್ಯಾಪಕರಾದ ವಿದ್ವಾನ್ ವಾಸುದೇವಾಚಾರ್ಯರಿಗೂ, ವೈ. ಕೃಷ್ಣಮೂರ್ತಿಯವರಿಗೂ ಮತ್ತಿತರರಿಗೂ ನಾನು ಚಿರಋಣಿ, ಇದರಿಂದ ಜನತೆಗೆ ಕಿಂಚಿತ್ ಉಪಯೋಗವಾದರೂ ನನ್ನ ಶ್ರಮ ಸಾರ್ಥಕವಾದಂತೆ.

ಜಿ. ವಿ. ಬಿ. ನಾಯುಡು



Rarest Archiver

# ಪರಿವಿಡಿ


| | | | |
|---|---|---|---|
| ಮುನ್ನುಡಿ | ಜಿ. ವಿ. ಬಿ. ನಾಯಡು | .... | i |
| ಪೀಠಿಕೆ | ಜಿ. ಎಸ್. ಪಾಡೆ | .... | ೧ |
| ತಾಂಬೂಲ ಮಂಜರಿ | .... | .... | ೧೧ |
| ಅನುಬಂಧ – ೧ | .... | .... | ೯೦ |
| ಅನುಬಂಧ – ೨ | .... | .... | ೯೨ |
| ಅನುಬಂಧ – ೩ | .... | .... | ೧೧೬ |


Rarest Archiver

# ಪೀಠಿಕೆ

" ಮಂಗಲದಾಯಕವಾದ, ಶುಭಪ್ರದವಾದ, ಕೀರ್ತಿ ಮತ್ತು ಗೌರವ ಸೂಚಕವಾದ ತಾಂಬೂಲವು ಹಿಂದೂದೇಶೀಯರ ಎಲ್ಲ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಕಾರಗಳೊಡನೆ ಅತ್ಯಂತ ನಿಕಟವಾದ ಸಂಬಂಧ ವನ್ನು ಹೊಂದಿದೆ. ಇಂಡಿಯಾದ ಎಲ್ಲಾ ಭಾಗಗಳಲ್ಲಿ ಬಹುಕಾಲದಿಂದಲೂ ಅಭ್ಯಸಿತವಾದ ತಾಂಬೂಲಚರ್ವಣಪದ್ಧತಿಯು ಪ್ರಪಂಚದ ಸಂಪ್ರದಾಯ ಗಳಲ್ಲಿ ಒಂದು ಮುಖ್ಯವಾದ ಸ್ಥಾನವನ್ನು ಪಡೆದಿದೆ. ಆಯುರ್ವೇದ, ಜ್ಯೋತಿಷ್ಯ, ಧರ್ಮಶಾಸ್ತ್ರ, ತಂತ್ರಶಾಸ್ತ್ರ, ಪುರಾಣಗಳು, ಕಾಮಶಾಸ್ತ್ರ, ಇವೇ ಮುಂತಾದ ಪುರಾತನ ಕೃತಿಗಳಲ್ಲಿ ಉಲ್ಲೇಖಿತವಾದ ತಾಂಬೂಲ ಸೇವನೆಯ ವಿಧಿ ಮತ್ತು ನಿಷೇಧಗಳು ಇಂದಿಗೂ ಜನ ಸಾಮಾನ್ಯರಲ್ಲಿ ರೂಢಿಯಲ್ಲಿವೆ.

ಸಂಸ್ಕೃತ ಭಾಷೆಯಲ್ಲಿ ಕೇವಲ ತಾಂಬೂಲದ ವಿಷಯವಾಗಿಯೇ ಬರೆದ ಲೇಖನಗಳು ಬಹು ವಿರಳ ಮತ್ತು ಇದರ ವಿಚಾರವಾಗಿ ತಿಳಿಯಲು ವಿದ್ವಾಂಸರು ವಿವಿಧ ಮೂಲಗಳಿಂದ ಆಧಾರಗಳನ್ನು ಸಂಗ್ರಹಿಸಬೇಕಾ ಗಿತ್ತು. ಅದೃಷ್ಟವಶಾತ್ ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟಿನ ಪುಸ್ತಕ ಭಂಢಾರದಲ್ಲಿ ನಿಕ್ಷೇಪವಾಗಿದ್ದ " ತಾಂಬೂಲ ಮಂಜರಿ " ಯ ಹಸ್ತಪತ್ರಿಕೆಯು ದೊರಕಿತು. ಈ ಹಸ್ತಪತ್ರಿಕೆಯನ್ನು " Journal of Oriental Institute " ಎಂಬ ಪತ್ರಿಕೆಯಲ್ಲಿ M. S. ವಿಶ್ವವಿದ್ಯಾ ನಿಲಯದ ಕ್ರಮಿಕ ಪ್ರಕಟಣೆಗಾಗಿ ಪ್ರಚುರಗೊಳಿಸಲು ನಿರ್ಧರಿಸಲಾ ಯಿತು. ತಾಂಬೂಲ ಮತ್ತು ಅದರ ಉಪಕರಣಗಳ ಸಂಬಂಧವಾಗಿ ಲಿಖಿತವಾಗಿರುವ ಈ ಪ್ರತಿಯು ಇನ್ನೆಲ್ಲಿಯೂ ಇಲ್ಲವು.

ತಾಂಬೂಲದ ವಿಷಯವಾಗಿ ಜನಪ್ರಿಯವಾದ ಹಲವು ಶ್ಲೋಕ ಗಳನ್ನು ಒಳಗೊಂಡಿರುವ ಮತ್ತು ಕೇವಲ ತಾಂಬೂಲದ ವಿಷಯವಾಗಿ ಮಾತ್ರ ಚರ್ಚಿಸಿರುವ " ತಾಂಬೂಲ ಕಲ್ಪ ಸಂಗ್ರಹ " ಎಂಬ ಪುಸ್ತಕವು ಎರಡನೆಯದಾಗಿದೆ. ಇದನ್ನು Dr. P. K. Gode. ಯವರು " ನರಸಿಂಹ



Rarest Archiver

ಭಟ್ಟನ ತಾಂಬೂಲ ಕಲ್ಪಸಂಗ್ರಹ ಮತ್ತು ಆದರ ಕಾಲ—ಕ್ರಿ.ಶ. ೧೩೫೦ರ ನಂತರ" ಎಂಬ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ.

ಈ ಪುಸ್ತಕವು ತಾಂಬೂಲ ಮತ್ತು ಆದರ ಉಪಕರಣಗಳ ಬಗ್ಗೆ ವಿವಿಧ ಮೂಲಗಳಿಂದ ಸಂಗ್ರಹಿಸಲ್ಪಟ್ಟಿರುವ ವಿವಿಧ ಶ್ಲೋಕಗಳ ಸಂಗ್ರಹ ದಿಂದಾದುದು. ಈ ಗ್ರಂಥದಲ್ಲಿ ಗ್ರಂಥಕರ್ತನಿಂದ ಉಲ್ಲೇಖಿತವಾಗಿರುವ ಗ್ರಂಥಗಳು ಮತ್ತು ಗ್ರಂಥ ಕರ್ತೃಗಳ ಹೆಸರುಗಳು ಈ ರೀತಿಯಾಗಿವೆ.

ಗ್ರಂಥಕರ್ತೃಗಳು :— ೧. ಅಚ್ಯುತ. ೨. ಅನ್ಯ. ೩. ಕಾಶೀರಾಜ ೪. ಬೋಪದೇವ. ೫. ಭರದ್ವಾಜ. ೬. ಮಿತ್ರ. ೭. ವಶಿಷ್ಠ ೮, ಹೇಮಾದ್ರಿ.

ಗ್ರಂಥಗಳು ;—೧. ಅಮರಮಾಲಾ ೨, ಗ್ರಂಥಾಂತರ ೩. ಚೂಡಾ ಮಣಿ ೪. ತ್ರಿಮಲ್ಲಟೀಕಾ ೫. ದ್ರವ್ಯಗುಣನಿಘಂಟು ೬. ಧನ್ವಂತರಿ ೭. ಯೋಗಮಾಲ ೮, ಯೋಗರತ್ನ ೯. ರತ್ನಮಾಲಮಂಜರಿ ೧೦. ರುಚಿ ವಧೂಗಲ ರತ್ನಮಾಲ ೧೧. ರಾಜನಿಘಂಟು ೧೨. ವೈದ್ಯರತ್ನ ೧೩, ವೈದ್ಯಾಮೃತ ಮತ್ತು ೧೪. ಸ್ಕಾಂದ ಶ್ರವಣ ಮಾಹಾತ್ಮ್ಯಂ.

ಗ್ರಂಥಕರ್ತನು ಸಂಗ್ರಹಿತವಾದ ಎಲ್ಲ ಶ್ಲೋಕಗಳಿಗೂ ಮೂಲ ವನ್ನು ಕೊಟ್ಟಿರುವುದಿಲ್ಲ. ಆದುದರಿಂದ ಶ್ಲೋಕಗಳನ್ನು ಗ್ರಂಥಕರ್ತೃವು ಯಾವ ಮೂಲದಿಂದ ಶೇಖರಿಸಿದನೆಂಬುದು ತಿಳಿಯುವುದು ಬಹಳ ಕಷ್ಟ ಕರವಾಗಿರುವುದು.

ಈ ಗ್ರಂಥದ ಮೊದಲಿನ ೭೮ ಶ್ಲೋಕಗಳು ತಾಂಬೂಲದ ವಿಷಯ ವಾಗಿಯೂ, ಮಿಕ್ಕ ಶ್ಲೋಕಗಳು ಆದರ ಉಪಕರಣಗಳ ವಿಷಯ ವಾಗಿಯೂ ಇರುತ್ತವೆ. ಶ್ಲೋಕಗಳ ಕ್ರಮಸಂಧಾನವೂ ಮತ್ತು ಕ್ರಮಾ ನ್ವಯವೂ ಯಾವ ಸೂತ್ರದ ಮೇಲೆಯೂ ಪ್ರತಿಪಾದಿತವಾಗಿಲ್ಲ. ಗ್ರಂಥ ಕಾರನು ಅವುಗಳನ್ನು ಕ್ರಮವಾಗಿ ಜೋಡಣೆ ಮಾಡಬಹುದಾಗಿತ್ತು.

ಈ ಸಂಗ್ರಹದ ೭೮ ತಾಂಬೂಲ ವಿಷಯಕವಾದ ಶ್ಲೋಕಗಳೂ, ಮತ್ತು ಮಿಕ್ಕ ಉಪಕರಣಗಳ ಶ್ಲೋಕಗಳೂ ಕೂಡಿದರೂ ತಾಂಬೂಲ ಚರ್ವಣ ಶಾಸ್ತ್ರವು ಪರಿಪೂರ್ಣವಾಗಲಾರದು. ಗ್ರಂಥಕರ್ತನಿಗೆ ಸಂಸ್ಕೃತ ಸಾಹಿತ್ಯದಲ್ಲಿರುವ ತಾಂಬೂಲ ವಿಷಯವಾದ ಎಲ್ಲ ಶ್ಲೋಕಗಳನ್ನೂ

Rarest Archive

ಸಂಗ್ರಹಮಾಡಲು ಸಾಧ್ಯವಾಗಲಿಲ್ಲ, ಯಾಕೆಂದರೆ ಅವನಿಗೆ ಈಗಿನವರಂತೆ ಪುಸ್ತಕಭಂಡಾರಗಳ ಸುಲಭ ಸಾನ್ನಿಧ್ಯವಿಲ್ಲದಿದ್ದಿರಬಹುದು.

ಗ್ರಂಥಕಾರನು ಸಂಸ್ಕೃತ ಸಾಹಿತ್ಯದಲ್ಲಿ ಸಾಮಾನ್ಯವಾಗಿ ತಿಳಿಸಿರುವ ೨೧ ತಾಂಬೂಲದ ಉಪಕರಣಗಳನ್ನು ಈ ಕೆಳಗೆ ಹೇಳಿರುವ ಕ್ರಮದಲ್ಲಿ ವಿವರಿಸಿರುತ್ತಾನೆ.

೧. ವಿಳ್ಯೇದೆಲೆ. ೨. ಅಡಿಕೆ. ೩. ಸುಣ್ಣ. ೪. ಹೊಗೆಸೊಪ್ಪು ೫. ಕಾಚು. ೬. ಕಸ್ತೂರಿ. ೭. ಚಿನ್ನದ ಅದುರು. ೮. ಬೆಳ್ಳಿಯ ಅದುರು. ೯. ಬಾದಾಮಿ. ೧೦. ಸೋಂಪು. ೧೧. ಕುಂಕುಮಕೇಸರಿ. ೧೨. ಜಾಯಿಪತ್ರೆ. ೧೩. ಜಾಯಿಕಾಯಿ, ೧೪. ಯಾಲಕ್ಕಿ. ೧೫. ಲವಂಗ. ೧೬. ಒಣಶುಂಠಿ. ೧೭. ಶುಂಠಿ. ೧೮. ಶ್ರೀಗಂಧ. ೧೯. ತೆಂಗಿನಕಾಯಿ. ೨೦. ದಾಲ್ಚಿನ್ನಿ ೨೧. ಕರ್ಪೂರ. ಮಿಕ್ಕ ಎರಡು ಉಪಕರಣಗಳನ್ನು ಎಂದರೆ 'ಮುರಮಾಂಸ' ಮತ್ತು 'ನಖ' ಇವುಗಳನ್ನು ವರ್ಣಿಸಿರುವುದಿಲ್ಲ. ಆದರೆ ಅವುಗಳ ಹೆಸರುಗಳನ್ನು ೭೮ ನೆಯ ಶ್ಲೋಕದಲ್ಲಿ ತಿಳಿಸಿರುತ್ತಾನೆ. ಈ ಎರಡು ಉಪಕರಣಗಳು ಕೂಡ, ಈ ದೇಶದ ಕೆಲವು ಭಾಗಗಳಲ್ಲಿಯಾದರೂ ಬಹಳ ಪ್ರಾಮುಖ್ಯತೆಯನ್ನು ಪಡೆದಿದ್ದಿರಬಹುದು. ಗ್ರಂಥದ ೭೭–೭೮ ನೆಯ ಶ್ಲೋಕಗಳಲ್ಲಿ ತಾಂತ್ರಿಕ ಪದ್ಧತಿಯ ಅನುಸಾರವಾಗಿ ತಿಳಿಸಿರುವ ೧೩ ಉಪಕರಣಗಳಲ್ಲಿ ಈ ಮೇಲೆ ತಿಳಿಸಿದ ಎರಡು ಉಪಕರಣಗಳು ಇರುವುವೆಂಬ ವಾದದಮೇಲೆ ಇವುಗಳೂ ಪ್ರಾಮುಖ್ಯತೆಯನ್ನು ಪಡೆದಿದ್ದುವೆಂದು ನಿರ್ಧರಿಸಬಹುದು. ಈ ಎರಡು ಅಂಶಗಳೂ ಯಾವ ಪ್ರದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದುವು ಅಥವಾ ಪಡೆದಿವೆ ಎಂಬ ವಿಷಯವಾಗಿ ತಿಳಿದುಬಂದರೆ ಈ ಶ್ಲೋಕಗಳ ಮೂಲಶೋಧನೆಯಲ್ಲಿ ಬಹಳ ಉಪಕಾರವಾಗಬಹುದು, ಸಾಮಾನ್ಯ ಮನುಷ್ಯರ ಉಪಯೋಗಾನುಸಾರವಾಗಿ ಮೇಲಿನ ೨೩ ಅಂಶಗಳನ್ನು ಕೆಳಗೆ ಕಂಡಂತೆ ಜೋಡಿಸಬಹುದು.

೧. ವಿಳ್ಯೇದೆಲೆ, ೨. ಸುಣ್ಣ, ೩, ಅಡಿಕೆ, ೪. ಕಾಚು, ೫. ಲವಂಗ, ೬. ಯಾಲಕ್ಕಿ, ೭. ಜಾಯಿಪತ್ರೆ, ೮. ಜಾಯಿಕಾಯಿ, ೯. ತೆಂಗಿನಕಾಯಿ. ೧೦. ಬಾದಾಮಿ, ೧೧. ಕರ್ಪೂರ, ೧೨. ಸೋಂಪು, ೧೩. ಕುಂಕುಮಕೇಸರಿ, ೧೪. ದಾಲ್ಚಿನ್ನಿ, ೧೫. ಕಸ್ತೂರಿ, ೧೬. ಚಿನ್ನದ ಅದುರು

Rarest Archiver

೧೭. ಬೆಳ್ಳಿಯ ಆದುರು, ೧೮. ಒಣಶುಂಠಿ, ೧೯. ಶುಂಠಿ, ೨೦. ಶ್ರೀಗಂಧ, ೨೧. ಹೊಗೆಸೊಪ್ಪು, ೨೨. ಮುರಮಾಂಸ, ೨೩. ನಖ. ಆದರೆ ಬಹುವಾಗಿ ಕಾಮದೇವನಾದ ಮದನನನ್ನು ಪ್ರತಿನಿಧಿಸುವ ಸಂಖ್ಯೆಯಾದ ೧೩ ಅಂಶ ಗಳನ್ನು ಉಪಯೋಗಿಸಿ ತಾಂಬೂಲವನ್ನು ಜನರು ಸೇವಿಸಿ ತೃಪ್ತಿ ಹೊಂದು ತ್ತಾರೆ.

ಗ್ರಂಥಕರ್ತ :—ತಾಂಬೂಲದ ಮೇಲೆ ಬರೆದಿರುವ ಈ ಅಸಾಮಾನ್ಯ ಗ್ರಂಥದ ಕರ್ತೃವಿನ ಬಗ್ಗೆ ಏನೊಂದೂ ತಿಳಿಯಬಂದಿಲ್ಲ. ಈ ಗ್ರಂಥದಲ್ಲಿ ಲಿಖಿತವಾಗಿರುವ ೫೭ನೆಯ ಮರಾಠೀ ಶ್ಲೋಕದಿಂದ ಮತ್ತು ಈ ಗ್ರಂಥ ಬರೆದ ಕಾಲದಲ್ಲಿ ಕೇವಲ ಮಹಾರಾಷ್ಟ್ರದಲ್ಲಿ ಮಾತ್ರ ವಿಖ್ಯಾತನಾಗಿದ್ದ ನಾಸಿಕದ "ಅಚ್ಯುತಾರ್ಯ ಮೋದಕ"ನೆಂಬ (೧೭೭೩–೧೮೩೩, ಕ್ರಿ. ಶ.) ಕವಿಯ 'ಸೌಭಾಗ್ಯ ಕಲ್ಪದ್ರುಮ' (೧೮೧೩) ಎಂಬ ಪುಸ್ತಕದಿಂದ ಒಂದು ಶ್ಲೋಕವನ್ನು ಈ ಗ್ರಂಥದಲ್ಲಿ ಅಳವಡಿಸಿರುವುದರಿಂದಲೂ, ಕವಿಯು ಮಹಾರಾಷ್ಟ್ರದೇಶದವನೆಂಬುದಾಗಿ ಊಹಿಸಬಹುದಾಗಿದೆ.

ಕೃತಿಯಕಾಲ :—ಸಾಕಷ್ಟು ಪುರಾವೆಗಳ ಅಭಾವದಿಂದಾಗಿ ಈ ಕೃತಿ ಯಕಾಲವನ್ನು ನಿರ್ಣಯಿಸುವುದು ಬಹಳ ಕಷ್ಟವಾಗಿದೆ. ಆದರೂ ಗ್ರಂಥದ ೫೫ನೆಯ ಶ್ಲೋಕದ ವಿಮರ್ಶೆಯಿಂದ ಕ್ರಿ.ಶ. ೧೮೧೯–೧೮೨೩ ವರೆಗಿನ ಕಾಲವನ್ನು ಈ ಗ್ರಂಥದ ನಿರ್ಮಾಣ ಕಾಲವೆಂದು ನಿಗದಿಮಾಡ ಲಾಗಿದೆ.

ಹಿಂದೂದೇಶದಲ್ಲಿ ತಾಂಬೂಲ ಚರ್ವಣ ಪದ್ಧತಿಯು ಮೊದಲಾದ ಕಾಲ :—ಕ್ರಿ.ಶ. ಒಂದನೇ ಶತಮಾನದ ಪೂರ್ವಕ್ಕೆ ನಿಗದಿಮಾಡಿರುವ ಚರಕ ಮತ್ತು ಸುಶ್ರುತರ ಗ್ರಂಥಗಳಲ್ಲಿಯೇ ಈ ಪದ್ಧತಿಯ ಬಗ್ಗೆ ಬರಹ ಗಳು ದೊರೆತಿವೆ. ಆದುದರಿಂದ ಈ ತಾಂಬೂಲ ಚರ್ವಣ ಪದ್ಧತಿಯು ಆ ಕಾಲಗಳಲ್ಲಿಯೂ ಜನಸಾಮಾನ್ಯರಲ್ಲಿ ಬಳಕೆಯಲ್ಲಿ ಇತ್ತೆಂದೂ ಮತ್ತು ಅಂದಿನ ಕಾಲಕ್ಕೆ ಬಹಳ ಹಿಂದೆಯೇ ಪ್ರಾರಂಭಿಸಲ್ಪಟ್ಟಿರಬೇಕೆಂದೂ ತಿಳಿದುಬಂದಿದೆ.

ತಾಂಬೂಲ ಶಬ್ದದ ವ್ಯುತ್ಪತ್ತಿ :—ತಾಂಬೂಲ ಶಬ್ದದ ವ್ಯುತ್ಪತ್ತಿ ಯನ್ನು "ಷಂಕಪಾದಿ ಉಣಾದಿಸೂತ್ರ"ದಲ್ಲಿ ಹೇಳಲಾಗಿದೆ. ಐತಿಹ್ಯಕ್ಕನು

Rarest Archive

ಸಾರವಾಗಿ ಶಕಟಾಯನನೂ, ಕೆಲವರ ಮತಕ್ಕನುಗುಣವಾಗಿ ಪಾಣಿನಿಯೂ ಮತ್ತೆ ಕೆಲವರ ಅಭಿಪ್ರಾಯದಂತೆ ಕಾತ್ಯಾಯನನೂ ಈ ಸೂತ್ರದ ಕರ್ತೃಗಳಾಗಿದ್ದಾರೆ. ಈ ವ್ಯುತ್ಪತ್ತಿ ಮೂಲವು ಕೆಲವು ವಿದ್ವಾಂಸರಿಗನುಗುಣವಾಗಿ "ಉನಾದಿಸೂತ್ರ"ದಲ್ಲಿಯೂ ಮತ್ತಿತರರಿಗನುಗುಣವಾಗಿ "ಅಂತರ್ಗನಸೂತ್ರ"ದಲ್ಲಿಯೂ ಕೊಡಲ್ಪಟ್ಟದೆ. ಈ ಸೂತ್ರದ ಮೂಲಪಾಠವು ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯಾಗಿಲ್ಲ.

ಬಾನುಜಿಯು ತಾಂಬೂಲವೆಂಬ ಶಬ್ದವು ಎರಡು ಧಾತುಗಳಿಂದ (ತಮ್+ಭುಲ್) ಉಂಟಾಯಿತೆಂದು ತಿಳಿಸಿದ್ದಾನೆ. ಅವನು ತಮ್‌ಗ್ಲಾನೌ ಎಂದೂ ತಿಳಿಸುತ್ತಾನೆ. ಆದರೆ ಪಾಣಿನಿಯ ಧಾತುಕಾಂಕ್ಷಯಾಂ "ತಮ್ ಕಾಂಕ್ಷಯಾಂ" ಎಂದು ಆಗಿರುತ್ತದೆ. 'ಭುಲ್' ಧಾತು Bohtlingk ಮತ್ತು ಕ್ಷೀರಸ್ವಾಮಿಯವರಿಗನುಸಾರವಾಗಿ ಪಾಣಿನಿಯದಾಗಿರುತ್ತದೆ. (cf. A Concordance of Dhatupathas by G.B. Palsule., Poona–೧೯೫೫ P. ೯೪). ಆದರೆ ಅದು ಮಿಕ್ಕಾವ ಪಾಣಿನಿಯ ಧಾತುಪಥಗಳಲ್ಲಿಯೂ ದೊರೆಯುವುದಿಲ್ಲ. "ಮಾಧವೀಯ ಧಾತುವೃತ್ತಿ" ಮತ್ತು "ಸಿದ್ಧಾಂತ ಕೌಮುದಿ"ಯಲ್ಲಾಗಲೀ ಇದರ ಬಗ್ಗೆ ಲಿಖಿತವಾಗಿಲ್ಲ. ಈ ಮೇಲೆ ಹೇಳಿರುವ ವ್ಯುತ್ಪತ್ತಿಗೆ ಅನುಸಾರವಾಗಿ ಭಾನುಜಿಯು ತನ್ನ ಮೂಲವನ್ನು ಪಾಣಿನಿಯ ಧಾತುಪಥದಂತೆ ಹೊಂದಿದ್ದನೆಂಬುದು ವ್ಯಕ್ತವಾಗುತ್ತದೆ. ಭುಲ್ ಧಾತುವಿನಿಂದ ಉಂಟಾಗುವ ಪದಗಳು ಮರಾಠೀ ಭಾಷೆಯಲ್ಲಿ "ಭೋಳಾ", "ಭೋಳೆವಿಣೇಂ", ಭೋಳಣೇಂ" ಎಂಬುದಾಗಿಯೂ, ಗುಜರಾತೀ ಭಾಷೆಯಲ್ಲಿ "ಭೋಳವುಂ" ಎಂದೂ ಸಾಮಾನ್ಯವಾಗಿ ಬಳಕೆಯಲ್ಲಿವೆ. ಆದುದರಿಂದ ಈ ಧಾತುವು ಪಾಣಿನಿಯ ಯಾವುದೇ ಧಾತುಪಥಗಳಲ್ಲಿ ಇಲ್ಲದಿದ್ದಾಗ್ಯೂ ಪಾಣಿನಿಯದೆಂದೇ ತಿಳಿಯಬಹುದು.

ಧ್ವನಿಸಂಬಂಧವಾದ ಬದಲಾವಣೆಗಳಿಂದಾಗಿ 'ತಾಮೂಲ'ವೆಂಬುದು "ತಾಂಬೂಲ"ವಾಗಿ ಉಚ್ಚರಿಸಲ್ಪಟ್ಟಿತು. ಆದರೆ ಪದಗಳಲ್ಲಿ 'ಬ'ಕಾರವನ್ನು ಸೇರಿಸಲಾಯಿತು. ಮತ್ತು ಇದನ್ನು ಒಂದು ಆಗಮವಾಗಿ ಪರಿಗಣಿಸಲಾಯಿತು. ಆದುದರಿಂದ ಉನಾದಿಸೂತ್ರದಲ್ಲಿರುವ ವ್ಯುತ್ಪತ್ತಿಯೇ ಸ್ವಾಭಾವಿಕವಾದುದು ಮತ್ತು ಒಪ್ಪಿಗೆಯುಳ್ಳದ್ದಾಗುತ್ತದೆ.

Rarest Archive

ಮೇಲಿನ ಪುರಾವೆಗಳಿಂದ ಸ್ಪಷ್ಟಪಡುವ ನಿರ್ಣಯವು ಈ ಕೆಳಗೆ ಕಂಡಂತೆ ಆಗುತ್ತದೆ;

೧. ತಾಂಬೂಲವೆಂಬ ಶಬ್ದವು 'ತಮ್' ಧಾತುವಿನಿಂದ ಜನಿತ ವಾಗಿದೆ.

೨. ಈ ವ್ಯುತ್ಪತ್ತಿಯ ಮೂಲಗ್ರಂಥವು 'ಉನಾದಿ ಸೂತ್ರ'ವಲ್ಲದೆ ಪಿಂಜಾದಿಗಣನ 'ಗಣಸೂತ್ರ'ವಲ್ಲವು.

"ತತ್ರನಾಮಾನ್ಯಾಖ್ಯಾತ ಜಾನೀತಿ ಶಾಕಟಾಯನೋ ನೈರುಕ್ತ ಸಮಯಶ್ಚ। ನ ಸರ್ವಾಣೀತಿ ಗಾರ್ಗ್ಯೋ ವೈಯ್ಯಾಕರಣಾನಾಂ ಚೈಕೇ।– ನಿರುಕ್ತ:" ೧–೧೨.'

'ಯಾಸ್ಕ'ನ ಮೇಲಿನ ವಿಮರ್ಶೆಯಿಂದ ಶಕಟಾಯನನೇ ವೈಯ್ಯಾಕರಣಿಗಳಲ್ಲೆಲ್ಲಾ ಮೊದಲಿಗನೆಂದೂ, ಮತ್ತು ನೈರುಕ್ತರಂತೆ ಎಲ್ಲ ಅವ್ಯವಸ್ಥಿತ ಪದಗಳಿಗೂ ತನ್ನ ವ್ಯಾಕರಣದ ಪ್ರಕಾರ ವ್ಯುತ್ಪತ್ತಿಯನ್ನು ಕೊಡಲು ಯತ್ನಿಸಿದ್ದಾನೆಂದು ತಿಳಿದುಬರುತ್ತದೆ.

ತೀವ್ರ ವೈಯ್ಯಾಕರಣ ಪಂಥಿಯಾದ ಪಾಣಿನಿಯು ತನ್ನ 'ಅಷ್ಟಾಧ್ಯಾಯಿ'ಯಲ್ಲಿ ಶಕಟಾಯನನಂತೆ ಸಂಪೂರ್ಣವಾಗಿ ಅವ್ಯವಸ್ಥಿತ ಪದಗಳಿಗೆ ವ್ಯುತ್ಪತ್ತಿಯನ್ನು ಕೊಡಲು ಅಸಮರ್ಥನಾಗಿದ್ದನು.

ಪಾಣಿನಿಯ ಕಾಲಕ್ಕಿಂತಲೂ ಪೂರ್ವದ ಯಾವ ಗ್ರಂಥಗಳಲ್ಲಿಯೂ 'ತಾಂಬೂಲ' ವೆಂಬ ಪದದ ಉಪಯೋಗವಾದಂತೆ ಕಂಡು ಬರುವುದಿಲ್ಲ. ಪಂಕಪಾದಿ ಗ್ರಂಥಕರ್ತೃಗಳು ತಾಂಬೂಲ ಶಬ್ದದ ವ್ಯುತ್ಪತ್ತಿಯನ್ನು ಪಾಣಿನಿಗಿಂತಲೂ ಪುರಾತನವಾದ ವ್ಯಾಕರಣ ಶಾಸ್ತ್ರಗಳಿಂದ ತೆಗೆದಿದ್ದಾರೆಂಬುದಕ್ಕೆ ವರ್ತಮಾನಕಾಲದಲ್ಲಿ ಬೇರೆ ಯಾವ ಪುರಾವೆಗಳೂ ಸಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಪಂಕಪಾದಿ ಉನಾದಿ ಸೂತ್ರಗಳಲ್ಲಿ ಹೇಳಿರುವಂತೆ ತಾಂಬೂಲ ಉತ್ಪತ್ತಿಯು ತಾಂಬೂಲ ಚರ್ವಣ ಪದ್ಧತಿಯ ಕಾಲವನ್ನು ನಿರ್ಣಯಿಸಲು ಸರ್ವಥಾ ಅಸಮರ್ಥವಾಗಿದೆ.

ತಾಂಬೂಲ ವ್ಯುತ್ಪತ್ತಿಯ ಬಗ್ಗೆ N. M. Penzer ಎಂಬುವರು ತಮ್ಮ 'The Romance of Betel chewing' ಪ್ರಬಂದದಲ್ಲಿ ಈ ರೀತಿ ಹೇಳಿರುತ್ತಾರೆ. (cf. Poison damsels and other Essays by

Rarest Archiver

N. M. Penzer, London ೧೯೫೨ P. ೧೮೯.) 'ಭೂಲ' ಎನ್ನುವ ಧಾತುವಿಗೆ 'ತಾಮ್' ಎಂಬ ಉಪಸರ್ಗವನ್ನು ಹಚ್ಚಿರುತ್ತಾರೆ." Przyluski ಎನ್ನುವ ವಿದ್ವಾಂಸರು 'ಭೂಲ' ಎನ್ನುವ ಶಬ್ದವು ಹಿಂದೂ-ಆರ್ಯವಲ್ಲದ, ಆದರೆ, ಆಸ್ಟ್ರ-ಏಷ್ಯಾ ದೇಶೀಯವಾದ 'ಬಾಲು' (ಯಾವುದಾದರೂ ಉರುಳುವ ಪದಾರ್ಥ) ಎಂಬ ಶಬ್ದಕ್ಕನುಸಾರವಾಗಿದೆಯೆಂದು ಹೇಳುತ್ತಾರೆ. ಅದ್ದರಿಂದ ಆಸ್ಟ್ರ-ಏಷ್ಯಾದೇಶೀಯವಾದ ಭಾಷೆಗಳೆಲ್ಲವೂ 'ಬಾಲು' 'ಮ್ಲೂನ್', 'ಬೌಲೌ', 'ಮೆಲು', 'ಮ್ಲೂ', 'ಬ್ಲು', 'ಪ್ಲು' ಎಂಬ ಪದಗಳನ್ನು 'ಅಡಿಕೆ' ಎಂಬ ಶಬ್ದಕ್ಕೆ ಉಪಯೋಗಿಸುತ್ತಾರೆ. ಕೆಲವು ಭಾಷೆಗಳಲ್ಲಿ 'ಲಾ-ಮ್ಲೂ' 'ಜಾ-ಬ್ಲೂ' ಎಂಬ ಉಪಸರ್ಗಗಳ ಜೋಡಣೆಗಳು ಇರುತ್ತವೆ, ಅರ್ವಾಚೀನ ಕಾಲದಲ್ಲಿ ಕೇವಲ ಸಂಸ್ಕೃತ ಭಾಷೆಯಿಂದ ಜನಿತವಾದ ಪದಗಳು ಮಾತ್ರ ಉಪಸರ್ಗಗಳನ್ನು ಹೊಂದಿರುತ್ತವೆ.

ಈ ಮೇಲೆ ತಿಳಿಸಿರುವ ವ್ಯುತ್ಪತ್ತಿಯು ಒಪ್ಪಿಕೊಳ್ಳತಕ್ಕದ್ದಾಗಿರಲಾರದು. ಏಕೆಂದರೆ ಅದು "ಸಂಜ್ಞಾಸು ಧಾತುರೂಪಾಣಿ" ಎಂಬ ಹಿಂದೂ ದೇಶೀಯರ ವ್ಯುತ್ಪತ್ತಿಶಾಸ್ತ್ರಕಾರರ ಪಂಥಕ್ಕೆ ವಿರುದ್ಧವಾಗಿಯೂ ಮತ್ತು ವ್ಯಾಕರಣ ಬದ್ಧವಾಗಿಲ್ಲವಾಗಿಯೂ ಇರುವುದು. ಆದರೆ ಈ ವ್ಯುತ್ಪತ್ತಿಯು ಭಾನುಜಿಯು ತಿಳಿಸಿದ 'ತಾಮ್+ಭೂಲ'ದೊಡನೆ ಬಹು ಆಶ್ಚರ್ಯಕರವಾಗಿ ತಾಳೆಯನ್ನು ಹೊಂದುತ್ತದೆ: ಆಸ್ಟ್ರೋ-ಏಷ್ಯಾದೇಶೀಯವಾದ ಪದಗಳು 'ತಾಂಬೂಲ' ಶಬ್ದದ ಅಶುದ್ಧರೂಪಗಳಾಗಿರಬಹುದು. 'ಭುಲ್' ಧಾತುವು ಸಂಸ್ಕೃತ ಭಾಷೆಯಲ್ಲದೇ ಮಿಕ್ಕ ದೇಶೀಯ ಭಾಷೆಗಳಲ್ಲೂ ಬಳಕೆಯಲ್ಲಿರುವುದು. ತಾಂಬೂಲ ಚರ್ವಣ ಪದ್ಧತಿಯ ಜನ್ಮಸ್ಥಳಗಳಾದ ಹಿಂದೂ-ಆರ್ಯ ದೇಶಭಾಷೆಗಳಿಂದ ಅಥವಾ ವ್ಯುತ್ಪತ್ತಿಶಾಸ್ತ್ರಗಳ ಆಧಾರದ ಮೇಲೆ ಸಿದ್ಧಾಂತವಾಗಿರುವ ಆಸ್ಟ್ರೋ-ಏಷ್ಯಾದೇಶಗಳ ಭಾಷೆಗಳಿಂದ, ತಾಂಬೂಲ ಶಬ್ದದ ವ್ಯುತ್ಪತ್ತಿಯುಂಟಾಗಿದೆ ಎಂದು ಈ ಭಾಷಾ ಸಂಬಂಧವಾದ ವಿಜ್ಞಾನವು ಇನ್ನೂ ಬಾಲ್ಯಾವಸ್ಥೆಯಲ್ಲಿರುವುದರಿಂದ, ಏನನ್ನೂ ಖಚಿತವಾಗಿ ತಿಳಿಸಲು ಅಸಾಧ್ಯವಾಗಿದೆ.

Rarest Archiver

ಸಂಪ್ರದಾಯದ ಮೂಲ :—ತಾಂಬೂಲ ಚರ್ವಣಪದ್ಧತಿಯು ಕೇವಲ ಹಿಂದೂ ದೇಶೀಯವಾಗಿರದೆ, ದಕ್ಷಿಣ ಚೀಣ, ಸಯಾಂ, ಇಂಡೋ–ಚೀಣಾ, ಮಲಯ, ಸಂಪೂರ್ಣ ಈಸ್ಟ್ ಇಂಡಿಯನ್ ಆರ್ಕಿಪೆಲಾಗೋ, ನ್ಯೂಗಿನಿ, ಮತ್ತು ಅಗ್ನಿಪರ್ವತದ್ವೀಪವಾದ ಟಿಕೋಪಿಯವರೆಗಿನ ಮಲನೇಶಿಯಾ ದ್ವೀಪಗಳಲ್ಲೂ, ರೂಢಿಯಲ್ಲಿರುತ್ತದೆ. ಇಂತಹ ಸಂಧರ್ಭದಲ್ಲಿ ಈ ವಾಡಿಕೆಯ ಮೂಲವನ್ನು ಯಾವ ಪ್ರದೇಶಕ್ಕಾಗಲೀ ನಿಗದಿಮಾಡುವುದು ಅಸಾಧ್ಯವಾದುದು.

Penzer ಎಂಬುವರು ಇಲ್ಲಿನವರೆಗೆ ದೊರೆತಿರುವ ಸಮಸ್ತ ಪುರಾವೆಗಳ ಆಧಾರದ ಮೇಲೆ ಈ ಕೆಳಕಂಡಂತೆ ತಿಳಿಸಿರುತ್ತಾರೆ. " ಈ ಪ್ರಶ್ನೆಯ ಮೇಲೆ ತೃಪ್ತಿಕರವಾದ ಯಾವ ರುಜುವಾತುಗಳೂ ಸಿಕ್ಕಿಲ್ಲ. ಈ ಪದ್ಧತಿಯು ದಕ್ಷಿಣ ಹಿಂದೂಸ್ಥಾನದ ತೀರಪ್ರದೇಶಗಳಲ್ಲಿ ಪ್ರಾರಂಭವಾಗದಿದ್ದಲ್ಲಿ ಬಹುಕಾಲದ ಹಿಂದೆಯೇ ಈಸ್ಟ್‌ಇಂಡಿಯನ್ ಆರ್ಕಿಪೆಲಾಗೊನಿಂದ ಆಮದಾಗಿರಬೇಕೆಂದು ಮಾತ್ರ ನಾವು ಹೇಳಬಹುದು," ಈತನ ಹೇಳಿಕೆಯು ಸಾಪೇಕ್ಷಕವಾಗಿ ಇರುವುದರಿಂದ, ಅನಿಶ್ಚಿತವಾಗಿರುತ್ತದೆ.

ಸ್ಕಾಂದ ಪುರಾಣದ ನಾಗರಖಂಡದಲ್ಲಿರುವ 'ತಾಂಬೂಲ'ದ ಮೂಲವು ವಿಶ್ವಸನೀಯವಲ್ಲವಾದರೂ, ತಾಂಬೂಲದ ಬಳ್ಳಿಯನ್ನು ಹೊರದೇಶಗಳಿಂದ ತಂದಿರಬಹುದೆಂದು ಸೂಚಿಸುತ್ತದೆ. ಈ ಬಳ್ಳಿಗೆ ರೂಢಿಯಲ್ಲಿರುವ 'ನಾಗವಲ್ಲಿ' ಎಂಬ ವಿಶೇಷಣದಿಂದ (ನಾಗಲೋಕಸ್ಯವಲ್ಲೀ) ಹಾವು ಮತ್ತು ಆನೆಗಳ ತೌರೂರಾದ ಮಲಬಾರ್ ದೇಶವು ಇದರ ಮೂಲನಿವಾಸಸ್ಥಳವೆಂದು ಊಹಿಸಬಹುದಾಗಿದೆ. ಆದರೆ ಈ ರೀತಿಯ ಕಲ್ಪನೆಗಳಲ್ಲಿ ಯಾವ ಉಪಯೋಗವಿಲ್ಲವು. ಸ್ಪಷ್ಟ ಆಧಾರಗಳ ಅಭಾವದಿಂದಾಗಿ ಈ ಪ್ರಶ್ನೆಯು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ.

ತಾಂಬೂಲ ಮತ್ತು ತಂತ್ರ ಶಾಸ್ತ್ರಗಳು :—ಸಂಪೂರ್ಣ ವೈದಿಕೀಯವಾದ ವೈದಿಕಸಂಹಿತೆಗಳಲ್ಲಿಯೂ, ಬ್ರಾಹ್ಮಣಗಳಲ್ಲಿಯೂ ಸ್ಮಾರ್ತ ಮತ್ತು ಧರ್ಮಸೂತ್ರಗಳಲ್ಲಿಯೂ, ಮನು ಮತ್ತು ಯಾಜ್ಞವಲ್ಕ್ಯಸ್ಮೃತಿಗಳಲ್ಲಿಯೂ ' ತಾಂಬೂಲ ' ಶಬ್ದದ ಉಪಯೋಗವು ಕಂಡು ಬಂದಿಲ್ಲ, ಇದರಿಂದ ವೈದಿಕರಲ್ಲಿ ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯವರ್ಗಗಳಲ್ಲಿ

Rarest Archiver

ಚರ್ವಣ ಪದ್ಧತಿಯು ವಾಡಿಕೆಯಲ್ಲಿ ಇರಲಿಲ್ಲವೆಂದು ತಿಳಿಯುತ್ತದೆ. ಆಚಾರವಂತ ವೈದಿಕ ಬ್ರಾಹ್ಮಣರು ಈಗಲೂ ಈ ಪದ್ಧತಿಯನ್ನು ದ್ವೇಷಿಸುತ್ತಾರೆ.

ಸ್ಮೃತಿಗಳಲ್ಲಿ ಸಂವರ್ತ, ಲಘುಹಾರಿತ, ಲಘು ಆಶ್ವಲಾಯನ ಮತ್ತು ಔಪಾಸನ ಎಂಬುವುಗಳು ಮಾತ್ರ ತಾಂಬೂಲಚರ್ವಣ ಪದ್ಧತಿಯ ವಾಡಿಕೆಯನ್ನು ತಿಳಿಸುತ್ತವೆ. ಈ ಎಲ್ಲ ಸ್ಮೃತಿಗಳಲ್ಲಿಯೂ ತಂತ್ರದ ಪ್ರಭಾವವಿರುತ್ತದೆ, ಮತ್ತು ಶುದ್ಧವೈದಿಕವಾದವನ್ನು ಪ್ರತಿಬಿಂಬಿಸುವುದಿಲ್ಲ.

ತಾಂತ್ರಿಕ ಧರ್ಮಪಂಥವಲ್ಲಿ ತಾಂಬೂಲವು ಬಹು ಜನಪ್ರಿಯವಾಗಿದೆ. ತಾಂತ್ರಿಕ ಸಾಹಿತ್ಯದ ಎಲ್ಲ ಪಂಥಗಳಲ್ಲಿಯು ಅಂದರೆ ವೈಷ್ಣವ, ಶೈವ, ಶಾಕ್ತ, ಗಾಣಪತ ಮತ್ತು ಸೌರ ಗ್ರಂಥಗಳಲ್ಲಿಯೂ, ಮತ್ತು ತಾಂತ್ರಿಕ ಪದ್ಧತಿಯಿಂದ ಪ್ರತಿಭಾನ್ವಿತವಾದ ಧಾರ್ಮಿಕ ಗ್ರಂಥಗಳಾದ ಸ್ಮೃತಿ ಪುರಾಣಗಳೂ ತಾಂಬೂಲದ ಉಪಯೋಗ ಮತ್ತು ನಿಷೇಧಗಳ ಬಗ್ಗೆ ವಿಶದವಾಗಿ ತಿಳಿಯಪಡಿಸುತ್ತವೆ. ತಂತ್ರ ವಿಜ್ಞಾನದ ಬಹು ಪ್ರಾಚೀನ ಗ್ರಂಥಗಳು ಈಗ ದೊರೆಯುತ್ತಿಲ್ಲ. ಆದರೂ ಈ ಶಾಸ್ತ್ರವು ಹಿಂದೂ ದೇಶದಲ್ಲಿ ಶೂದ್ರಾದಿಗಳಲ್ಲಿ, ಇತಿಹಾಸಕ್ಕೆ ಮುಂಚಿನ ಕಾಲದಿಂದಲೂ ವಾಡಿಕೆಯಲ್ಲಿತ್ತು. ಆದ್ದರಿಂದ ತಾಂಬೂಲದ ಉಪಯೋಗವೂ ಚರ್ವಣವೂ, ಧಾರ್ಮಿಕ ಕಾರ್ಯಗಳಲ್ಲೂ ಶೂದ್ರಾದಿಗಳಲ್ಲಿ ರೂಢಿಯಲ್ಲಿದ್ದುವು. ವೈದಿಕ ಶಾಸ್ತ್ರವು ಬೌದ್ಧ ಪಂಥದಿಂದಾಗಿ ಬಹಳ ತೊಂದರೆಗಳಿಗೆ ಒಳಗಾಯಿತು, ಕುಮಾರಭಟ್ಟ ಮತ್ತು ಶಂಕರಾಚಾರ್ಯರುಗಳಿಂದಲೂ ಅದು ತನ್ನ ಪುರಾತನ ವೈಭವವನ್ನು ಹಿಂದಿರುಗಿ ಪಡೆಯಲು ಆಗಲಿಲ್ಲ. ಕ್ಷತ್ರಿಯರು ಮತ್ತು ವೈಶ್ಯರು ವೇದಶಾಸ್ತ್ರಾಭ್ಯಾಸವನ್ನೂ ಮತ್ತು ಸಂಸ್ಕಾರಗಳನ್ನೂ ತ್ಯಜಿಸಿದ್ದರಿಂದ ಬ್ರಾಹ್ಮಣರು ಈ ವರ್ಗದವರನ್ನು ತಾಂತ್ರಿಕರೆಂದು ಪರಿಗಣಿಸಲು ಪ್ರಾರಂಭಿಸಿದರು. ವೈದಿಕರಾದ ಬ್ರಾಹ್ಮಣರುಗಳು ಕೂಡ ತಮ್ಮ ಜೀವನೋಪಾಯಕ್ಕಾಗಿ ಕ್ಷತ್ರಿಯರ ಮತ್ತು ವೈಶ್ಯರ ತಾಂತ್ರಿಕ ಕಾರ್ಯಗಳನ್ನು ಮಾಡಿಸಲೇಬೇಕಾಯಿತು. ಇದರಿಂದಾಗಿ ಬ್ರಾಹ್ಮಣರು ನಿಧಾನವಾಗಿ ವೈದಿಕ ವೃತ್ತಿಯನ್ನು ಬಿಟ್ಟು ತಾಂತ್ರಿಕ ವೃತ್ತಿಯನ್ನವಲಂಬಿಸಲಾರಂಭಿಸಿದರು. ಆದುದರಿಂದ ಈ ಪದ್ಧತಿಯು ಇಂದು

Rarest Archive

ಸಂಪೂರ್ಣ ಭಾರತದಲ್ಲಿ ಆಚಾರದಲ್ಲಿದೆ. ಈ ರೀತಿಯ ತಾಂತ್ರಿಕ ಆಚಾರ ದಿಂದಾಗಿ ತಾಂಬೂಲದ ಉಪಯೋಗವು ಮೊದಲಿನ ಮೂರು ವರ್ಗಗಳಲ್ಲಿ ಯೂ ಬಳಕೆಗೆ ಬಂದಿತು. ಆದಾಗ್ಯೂ ಆಚಾರವಂತ ಬ್ರಾಹ್ಮಣ ವೈದೀಕರಿಂದ ಇದರ ಬಗ್ಗೆ ಬಹಳ ಪ್ರತಿಭಟನೆಗಳು ಇದ್ದವು. ಬ್ರಹ್ಮ ಚಾರಿಗಳು, ಯತಿಗಳು ಮತ್ತು ವಿಧವೆಯರುಗಳಿಗೆ ತಾಂಬೂಲಸೇವನೆಯು ನಿಷಿದ್ಧವಾಗಿತ್ತು. ಗೃಹಸ್ಥಾಶ್ರಮಿಗಳಿಗೆ ಮಾತ್ರವೇ ತಾಂಬೂಲ ಚರ್ವ ಣದ ಅಧಿಕಾರವಿದ್ದಿತು.

ಈ ರೀತಿ ತಾಂಬೂಲವು ಧಾರ್ಮಿಕ ಕಾರ್ಯಗಳಲ್ಲಿ ಬಹು ಪ್ರಾಮುಖ್ಯ ಐತಿಹ್ಯವನ್ನು ಹೊಂದಿದ್ದ ತಾಂತ್ರಿಕ ಪದ್ಧತಿಯುವರಿಂದ ಮೊದಲು ಮಾಡಿಸಲ್ಪಟ್ಟಿತು. ಇಂತಹ ಧಾರ್ಮಿಕರಾದ ಆಚಾರ್ಯರುಗಳು ಒಂದು ಹೊರದೇಶದ ಬಳ್ಳಿಯನ್ನು ತಮ್ಮ ಧಾರ್ಮಿಕ ಕಾರ್ಯಗಳಲ್ಲಿ ಸೇರಿ ಸುವರೆಂಬುದು ಸಾಧ್ಯವಿಲ್ಲದ ಮಾತು. ಆದುದರಿಂದ ತಾಂಬೂಲವು ಹಿಂದೂದೇಶಕ್ಕೆ ಸೇರಿದುದೆಂದೇ ಹೇಳಬಹುದು. ಆದರ ಉಪಯೋಗವು ಧಾರ್ಮಿಕ ಕಾರ್ಯಗಳಲ್ಲೂ ಮತ್ತು ಚರ್ವಣದಲ್ಲಿಯೂ ತಾಂತ್ರಿಕ ಪಂಥಾ ವಲಂಬಿಗಳಾದ ಶೂದ್ರರು ಮತ್ತಿತರ ಕೀಳುಜಾತಿಯವರಲ್ಲಿ ಮಾತ್ರ ಪ್ರಚಾರದಲ್ಲಿತ್ತು. ತಾಂತ್ರಿಕ ಪದ್ಧತಿಯ ಪ್ರಸಾರದೊಡನೆ, ಚರ್ವಣ ಪದ್ಧತಿಯೂ ನಿಧಾನವಾಗಿ ಇಂಡಿಯಾದೇಶದ ಒಳ ಹೊರವಲಯಗಳಲ್ಲಿ ಅಭಿವೃದ್ಧಿಯನ್ನು ಹೊಂದಿತು."

ಜೆ. ಎಸ್. ಪಾಡೆ

Rarest Archiver

# ತಾಂಬೂಲ ಮಂಜರಿ

Rarest Archiver

ಶ್ರೀ

# ತಾಂಬೂಲ ಮಂಜರೀ

## ಅಥ ತಾಂಬೂಲ ಪ್ರಕರಣಂ

ತಾಂಬೂಲ ಪತ್ರಾಣಿ ಹರಂತಿವಾತಂ
ಪೌಗಂ ಫಲಂ ಹಂತಿ ಕಫಂ ಚ ಹೃದ್ಯಂ ।
ಚೂರ್ಣಂ ನಿಹನ್ಯಾತ್ ಕಫ ವಾತ ಮುಚ್ಚೈ-
ರ್ಹನ್ಯಾಚ ಪಿತ್ತಂ ಖದಿರಸ್ಯಸಾರಃ ॥ ೧ ॥

ಇತ್ಥಂ ಹಿ ತಾಂಬೂಲ ಮುದಾಹರಂತಿ
ದೋಷತ್ರಯಸ್ಯಾಪಿ ನಿವಾರಣಾಯ ।
ಅತೋಹಿ ಸರ್ವೇ ಸುಖಿನೋ ಮನುಷ್ಯಾ
ಅಹರ್ನಿಶಂ ಪ್ರೀತಿಕರಂ ಭಜಂತೇ ॥ ೨ ॥

ಧನ್ವಂತರೌ ।

ತಾಂಬೂಲಂ ಕಟುತಿಕ್ತಮುಷ್ಣಮಧುರಂ ಕ್ಷಾರಂ ಕಷಾಯಾನ್ವಿತಂ
ವಾತಘ್ನಂ ಕಫನಾಶನಂ ಕ್ರಿಮಿಹರಂ ದುರ್ಗಂಧಿ ನಿರ್ಣಾಶನಂ ।
ವಕ್ತ್ರಸ್ಯಾಭರಣಂ ವಿಶುದ್ಧಿಕರಣಂ ಕಾಮಾಗ್ನಿ ಸಂದೀಪನಂ
ತಾಂಬೂಲಸ್ಯ ಸಖೇ ತ್ರಯೋದಶ ಗುಣಾಃ ಸ್ವರ್ಗೇಽಪಿ ತೇ
ದುರ್ಲಭಾಃ ॥ ೩ ॥

ಅಭ್ಯಂಗೇ ನಿಶಿ ಮಾಂಗಲ್ಯೇ ಪ್ರಭಾತೇ ಭೋಜನಾಂತಿಕೇ
ತಾಂಬೂಲ ಭಕ್ಷಣಂ ಶ್ರೇಷ್ಠಂ ಇತ್ಯಾಚಾರ್ಯಾ ವದಂತಿ ಹಿ ॥ ೪ ॥

ಸಾರ್ಧ ಮಾಸದ್ವಯೇ ದದ್ಯಾತ್ ತಾಂಬೂಲಂ ಪ್ರಥಮಂ ಶಿಶೋಃ ।
ಕರ್ಪೂರಾಧಿಕ ಸಂಮಿಶ್ರಂ ತಾಂಬೂಲಂ ಯೋಜಯೇದ್ಭಿಷಕ್ ॥ ೫॥

Rarest Archive

ಶ್ರೀ

# ತಾಂಬೂಲ ಮಂಜರಿ

## ತಾಂಬೂಲ ವಿಚಾರದ ಮುನ್ಸೂಚನೆ

೧. ತಾಂಬೂಲದಲ್ಲಿರುವ ವಿಳ್ಳೇದೆಲೆಯು ವಾಯುವನ್ನು ಪರಿಹರಿಸುತ್ತದೆ. ಅಡಕೆಯು ಹೃದಯದಲ್ಲಿನ ಕಫವನ್ನು ಕಳೆಯುತ್ತದೆ. ಸುಣ್ಣವು ಬಹಳವಾಗಿ ಬಲಿತ ಕಫ, ವಾತಗಳನ್ನೂ ಸಹ ನಿವಾರಿಸಲು ಸಹಕಾರಿಯಾಗುತ್ತದೆ. ಕಾಚಿನ ರಸವು ಪಿತ್ತವನ್ನು ಹೋಗಲಾಡಿಸುತ್ತದೆ.

೨. ಈ ರೀತಿಯಾದ ದೋಷತ್ರಯಗಳ ನಿವಾರಣೆಗಾಗಿ ತಾಂಬೂಲದ ಉಪಯೋಗವನ್ನು ಹಿರಿಯರು ಸೂಚಿಸುತ್ತಾರೆ. ಆದ್ದರಿಂದ ಸುಖಿಗಳಾದ ಎಲ್ಲ ಮನುಷ್ಯರೂ ಹಗಲಿರುಳು ಪ್ರೀತಿಯನ್ನುಂಟುಮಾಡುವ ಈ ತಾಂಬೂಲವನ್ನು ಸೇವಿಸುತ್ತಾರೆ.

### ಧನ್ವಂತರಿ (ವೈದ್ಯ) ಗ್ರಂಥದಲ್ಲಿ

೩. ತಾಂಬೂಲವು ಕಾರ, ಕಹಿ, ಸಿಹಿ, ಉಪ್ಪು ಮತ್ತು ಒಗರು ರಸಗಳಿಂದ ಕೂಡಿದ್ದು, ಉಷ್ಣಕರವಾದದ್ದು. ಇದು ವಾತ, ಕಫಗಳನ್ನು ನಾಶಮಾಡುವುದಲ್ಲದೆ ಹೊಟ್ಟೆಯಲ್ಲಿರುವ ಕ್ರಿಮಿಗಳನ್ನು ನಾಶಪಡಿಸಿ (ಬಾಯಲ್ಲಿನ) ದುರ್ಗಂಧವನ್ನು ಹೋಗಲಾಡಿಸುತ್ತದೆ, ಮತ್ತು ಬಾಯಿಯನ್ನು ಶುದ್ಧಪಡಿಸಿ ಅಲಂಕರಿಸುವುದಲ್ಲದೆ ಕಾಮವನ್ನು ವೃದ್ಧಿಗೊಳಿಸುತ್ತದೆ. ಅಂತೆಯೇ ತಾಂಬೂಲದಲ್ಲಿ ಸ್ವರ್ಗದಲ್ಲಿಯೂ ದುರ್ಲಭವಾದ ೧೩ ಗುಣಗಳು ಇರುತ್ತದೆ.

೪. ಸ್ನಾನಾನಂತರ, ರಾತ್ರಿಯವೇಳೆ, ಶುಭದಿನಗಳಲ್ಲಿ, ಪ್ರಾತಃಕಾಲದಲ್ಲಿ ಮತ್ತು ಭೋಜನಾನಂತರ ತಾಂಬೂಲ ಸೇವನೆಯು ಶ್ರೇಷ್ಠವೆಂದು ಹಿರಿಯರು ಹೇಳುತ್ತಾರೆ.

೫. ಮಕ್ಕಳಿಗೆ ಎರಡೂವರೆ ತಿಂಗಳು ಕಳೆದನಂತರ ಕರ್ಪೂರಾದಿಗಳಿಂದ ಕೂಡಿದ ತಾಂಬೂಲವನ್ನು ವೈದ್ಯನು ಉಪಯೋಗಿಸಬೇಕು. (ಅದರ ರಸವನ್ನು ಕೊಡುವುದು ಒಳ್ಳೆಯದು.)

Rarest Archive

ಮುಹೂರ್ತಃ ।

ಮೂಲಾಶ್ವಿಮೈತ್ರಕರ ತಿಷ್ಯ ಹರೀಂದು (ನ) ಭೇಷು ।
ಪೌಷ್ಣೇತಥಾ ಮೃಗಶಿರೋಽದಿತಿ ವಾಸವೇಷು ।
ಅರ್ಕೇಂದು ಜೀವ ಭೃಗು ಬೋಧನ ವಾಸರೇಷು
ತಾಂಬೂಲ ನೂತನದಲಾದ್ಯಶನಂ ಶಿವಾಯ ॥ ೬ ॥

ಭರದ್ವಾಜಃ ।

ಕ್ರಮುಕಂ ಪಂಚ ನಿಷ್ಕಂಸ್ಯಾತ್ ತಾಂಬೂಲಾಶ್ಚ ಫಲದ್ವಯಂ ।
ಗುಂಜಾದ್ವಯಂ ಚೂರ್ಣಮಾನಂ ತಾಂಬೂಲಕ್ರಮಮುತ್ತಮಂ ॥ ೭ ॥

ತ್ರಿಮಲ್ಲಟೀಕಾಯಾಮ್ ।

ಪೂಗಾರ್ಧಂ ಸಪ್ತಪರ್ಣಾನಿ ಚೂರ್ಣಂ ಗುಂಜೋನ್ವಿತಂ ತಥಾ ।
ಮಾಷಮಾತ್ರಂ ತು ಖದಿರಂ ತಾಂಬೂಲಂ ತದ್ವಿದೋವಿದುಃ ॥ ೮ ॥

ರಾಜನಿಘಂಟೌ ।

ದ್ವಿಪತ್ರಂ ಏಕಪೂಗಂ ಚ ಸ ಚೂರ್ಣ ಖದಿರಂ ಚ ತತ್ ।
ಗಾಯತ್ರೀ ಗುಟಿಕಾ ಚೂರ್ಣಂ ಪೂಗಂ ನಾಗಲತಾದಲಮ್ ।
ನಾತ್ಯುಚ್ಚೈರ್ನಾತಿನೀಚೈಶ್ಚ ಪರ್ಣಾನಾಂ ಅಧಿಕಂ ವರಂ ॥ ೯ ॥

ಅರ್ಧಪೂಗಂ ಸಖದಿರಂ ರಕ್ತಿಕಂ (ದಂ) ಯೋಜ್ಯ ಚೂರ್ಣಯುಕ್ ।
ಯಥೋತ್ತರಂ ಯಥಾಸ್ವಾದಂ ಅಧಿಕಾಂಗೇನ ಯೋಜಿತಮ್ ॥ ೧೦ ॥

ಸಮಪತ್ರಃ (ತ್ರ) ಫಲೇ ರೋಗೇ (ಗೋ) ವಿರಾಗಸ್ತು ಫಲೇಽಧಿಕೇ ।
ಚೂರ್ಣಾಧಿಕ್ಯೇತು ದುರ್ಗಂಧಃ ಪತ್ರಾಧಿಕ್ಯೇ ಸುಗಂಧತಾ ॥ ೧೧ ॥

Rarest Archive

## ಮುಹೂರ್ತ ಗ್ರಂಥದಲ್ಲಿ

೭. ಮೂಲ, ಅಶ್ವಿನಿ, ಅನುರಾಧಾ, ಪುಷ್ಯ, ಶ್ರವಣ, ಜ್ಯೇಷ್ಠಾ, ರೇವತಿ, ಮೃಗಶಿರ, ಪುನರ್ವಸು, ವಿಶಾಖ, ನಕ್ಷತ್ರಗಳಲ್ಲಿಯೂ, ಭಾನು, ಸೋಮ, ಬುಧ, ಗುರು, ಶುಕ್ರವಾರಗಳಲ್ಲಿಯೂ ನೂತನವಾಗಿ ತಾಂಬೂಲ ಸೇವನೆಯನ್ನು ಪ್ರಾರಂಭಿಸಿದಲ್ಲಿ ಶ್ರೇಯಸ್ಕರವು.

## ಭರಧ್ವಾಜ ಗ್ರಂಥದಲ್ಲಿ

೭. ಎರಡೂವರೆ ತೊಲ ಅಡಿಕೆ, ಎಂಟು ತೊಲ ತೂಕ ವಿಳ್ಳೇದೆಲೆ ಎರಡು ಗುಲಗಂಜಿ ತೂಕ ಸುಣ್ಣ ಸೇರಿದ ತಾಂಬೂಲ ಸೇವನೆಯು ಉತ್ತಮ ವಾದುದು.

## 'ತ್ರಿಮಲ್ಲಟೀಕಾ' ದಲ್ಲಿ

೮. ಅರ್ಧ ಅಡಿಕೆಯು, ಏಳು ಎಲೆಗಳು, ಒಂದು ಗುಲಗಂಜಿ ತೂಕಸುಣ್ಣ ಮತ್ತು ಹನ್ನೆರಡು ಗುಲಗಂಜಿ ತೂಕ ಕಾಚು ಇವುಗಳಿಂದಾದ ತಾಂಬೂಲವು ಉತ್ತಮವೆಂದು ತಿಳಿದವರು ತಿಳಿಯಪಡಿಸುತ್ತಾರೆ.

## ರಾಜನಿಘಂಟನಲ್ಲಿ

೯. ಎರಡು ಎಲೆ, ಒಂದು ಅಡಿಕೆ, ಅದಕ್ಕೆ ತಕ್ಕ ಸುಣ್ಣ ಮತ್ತು ಕಾಚಿನಿಂದ ಕೂಡಿದ ತಾಂಬೂಲವು ಶ್ರೇಷ್ಠವಾದುದು. ಒಂದು ಮಾತ್ರೆ ಯಷ್ಟು ಕಾಚಿನರಸವೂ, ಸುಣ್ಣ, ಅಡಿಕೆ, ತೊಟ್ಟು ಮುರಿದ ಮತ್ತು ತುದಿಯನ್ನು ತೆಗೆದ ಹತ್ತು ವಿಳ್ಳೇದೆಲೆಗಳ ಸೇವನೆಯು ಒಳ್ಳೆಯದು.

೧೦. ಅರ್ಧಅಡಿಕೆ. ಕಾಚಿನರಸದಿಂದ ಕೂಡಿದ ಯೋಗ್ಯವಾದ (ಪರಿಮಿತವಾದ) ಸುಣ್ಣ, ಇವುಗಳಿಂದ ಮಾಡಿದ ಮತ್ತು ಉತ್ತರೋತ್ತರ ದಲ್ಲಿ ರುಚಿಯನ್ನು ಅನುಸರಿಸಿ ಅದಕ್ಕೆ ಬೇಕಾದ ಉಳಿದ ಅಂಗಗಳಿಂದ ಕೂಡಿದ (ಕರ್ಪೂರ, ಲವಂಗ, ಇತ್ಯಾದಿ) ತಾಂಬೂಲವು ಶ್ರೇಷ್ಠವು.

೧೧. ಎಲೆ ಅಡಿಕೆ ಸಮಾನ ಪ್ರಮಾಣದಲ್ಲಿದ್ದಲ್ಲಿ ಬಾಯಿಗೆ ಒಳ್ಳೆಯ ಬಣ್ಣ ಬರುತ್ತದೆ. ಅಡಿಕೆ ಹೆಚ್ಚಾದಲ್ಲಿ ಬಣ್ಣವು ಕಡಿಮೆಯಾಗುತ್ತದೆ. ಸುಣ್ಣವು ಹೆಚ್ಚಾದಲ್ಲಿ ದುರ್ನಾತವೂ ಎಲೆಯು ಹೆಚ್ಚಾದಲ್ಲಿ ಸುಗಂಧವೂ ಉಂಟಾಗುತ್ತದೆ.

Rarest Archive

ಅನ್ಯಶ್ಚ ।

ಪರ್ಣಾಧಿಕ್ಯೇ ದೀಪನೀ ರಂಗದಾತ್ರೀ
ಪೂಗಾಧಿಕ್ಯೇ ರೂಕ್ಷದಾ ಕೃಛ್ರದಾತ್ರೀ ।
ಚೂರ್ಣಾಧಿಕ್ಯೇ ಸೋಷ್ಣ ದುರ್ಗಂಧದಾತ್ರೀ
ಸಾಧಿಕ್ಯೇಚೇತ್ ಖಾದಿರೇ ಶೋಷದಾತ್ರೀ ॥ ೧೨ ॥

ಯುಕ್ತೇನ ಚೂರ್ಣೇನ ಕರೋತಿ ರಾಗಂ ।
ರಾಗಕ್ಷಯಂ ಪೂಗಫಲಾತಿರಿಕ್ತಂ ॥
ಚೂರ್ಣಾಧಿಕಂ ವಕ್ತ್ರವಿಗಂಧಿಕಾರಿ ।
ಪತ್ರಾಧಿಕಂ ಸಾಧು ಕರೋತಿ ಗಂಧಂ ॥ ೧೩ ॥

ಆಮೋದನಂ ದೀಪನಂ ಪಾಚನಂ ಚ
ಪ್ರಮೇಹ ಮೂತ್ರಾಮಯ ನಾಶನಂ ಚ ॥ ೧೪ಅ ॥

ಪ್ರಭಾತೇ ಪೂಗಮಧಿಕಂ ಮಧ್ಯಾಹ್ನೇ ಖಾದಿರಂ ತಥಾ ।
ನಿಶಾಯಾಂತು ತಥಾ ಚೂರ್ಣಂ ತಾಂಬೂಲಂ
ಭಕ್ಷಯೇತ್ ಸದಾ ॥ ೧೪ಆ ॥

ದಿವಾ ಖದಿರಸಾರಂತು ತಾಂಬೂಲಂ ತು ಸುಶೋಭನಂ ।
ರಾತ್ರೌ ಖದಿರಸಾರಂತು ಶಕ್ರಸ್ಯಾಪಿ ಶ್ರಿಯಂ ಹರೇತ್ ॥ ೧೫ ॥

ಪ್ರಾತಃ ಪೂಗಾಧಿಕಂ ಕುರ್ಯಾತ್ ಚೂರ್ಣಾಧಿಕ್ಯಂ ತು ಮಧ್ಯಮೇ
ರಾತ್ರೌ ಪತ್ರಾಧಿಕಂ ಕುರ್ಯಾತ್ ತಾಂಬೂಲಸ್ಯೇತಿ ಲಕ್ಷಣಂ ॥೧೬॥

ನಿಶಿ ಪರ್ಣಾಧಿಕಂ ಭಕ್ಷೇತ್ ತಸ್ಯ ಲಕ್ಷ್ಮೀರ್ವಿವರ್ಧಯೇತ್ (ತೇ)
ತಾಂಬೂಲಮುಚ್ಯತೇ ಚೈತತ್ ಕಾಮುಕ್ಯತ್ ಪಾಚನಂ, ಸರಂ ॥೧೭॥

ಪರ್ಣಾಧಿಕ್ಯಾತ್ ಪಿತ್ತಕರಂ ಪೂಗಾಧಿಕ್ಯಾತ್ ಕಫಪ್ರದಮ್ ।
ಶುಕ್ರಹೃತ್ ಖದಿರಾಧಿಕ್ಯಾತ್ ತಸ್ಮಾತ್ ತದುಚಿತಂ ವರಂ ॥ ೧೮ ॥

Rarest Archive

## ಮತ್ತೊಂದು.

೧೨. ಹೆಚ್ಚು ವಿಳ್ಳೇದೆಲೆಯು ಕಾಮವನ್ನೂ ಬಣ್ಣವನ್ನೂ ಹೆಚ್ಚಿಸುತ್ತದೆ, ಅಡಿಕೆ ಹೆಚ್ಚಾದರೆ ಉಷ್ಣಸಂಬಂಧವಾದ ಮೂತ್ರ ರೋಗವನ್ನು ಉತ್ಪನ್ನ ಮಾಡುತ್ತದೆ. ಸುಣ್ಣ ಹೆಚ್ಚಾದಲ್ಲಿ ಉಷ್ಣ ಹೆಚ್ಚುವುದಲ್ಲದೆ ಬಾಯಿ ದುರ್ಗಂಧವನ್ನುಂಟು ಮಾಡುತ್ತದೆ. ಕಾಚು ಹೆಚ್ಚಾದಲ್ಲಿ ಬಾಯಾರಿಕೆ, ಮೈ ಒಣಗುವಿಕೆ, ಇವುಗಳು ಹೆಚ್ಚಾಗುತ್ತವೆ.

೧೩. ಯೋಗ್ಯವಾದ ಪ್ರಮಾಣದ ಸುಣ್ಣವು ಬಣ್ಣವನ್ನು ಹೆಚ್ಚಿಸುತ್ತದೆ. ಅಡಿಕೆಯು ಹೆಚ್ಚಾದಲ್ಲಿ ಬಣ್ಣವು ಕಡಿಮೆಯಾಗುತ್ತದೆ. ಸುಣ್ಣ ಹೆಚ್ಚಾದಲ್ಲಿ ಬಾಯಿಯ ದುರ್ಗಂಧವನ್ನು ಹೆಚ್ಚಿಸುತ್ತದೆ. ಎಲೆಯು ಹೆಚ್ಚಾದಲ್ಲಿ ಸುಗಂಧವನ್ನುಂಟುಮಾಡುತ್ತದೆ.

೧೪. (ಅ) ತಾಂಬೂಲವು ಸಂತೋಷವನ್ನೂ, ಕಾಮೋದ್ದೀಪನವನ್ನೂ, ಜೀರ್ಣವನ್ನೂ ಉಂಟುಮಾಡುವುದಲ್ಲದೆ, ಮೋಹರೋಗ ಮತ್ತು ಮೂತ್ರಸಂಬಂಧವಾದ ರೋಗಗಳನ್ನು ನಾಶಪಡಿಸುತ್ತದೆ.

೧೪. (ಆ) ಬೆಳಗಿನ ಸಮಯದಲ್ಲಿ ಅಡಿಕೆಯನ್ನು ಹೆಚ್ಚಾಗಿಯೂ, ಮಧ್ಯಾಹ್ನ ವೇಳೆಯಲ್ಲಿ ಕಾಚನ್ನು ಹೆಚ್ಚಾಗಿಯೂ, ರಾತ್ರಿವೇಳೆ ಸುಣ್ಣವನ್ನು ಹೆಚ್ಚಾಗಿಯೂ ಸೇರಿಸಿದ ತಾಂಬೂಲ ಸೇವನೆಯು ಒಳ್ಳೆಯದು.

೧೫. ಹಗಲಿನಲ್ಲಿ ಕಾಚು ಹೆಚ್ಚಾಗಿರುವ ತಾಂಬೂಲವು ಶ್ರೇಷ್ಠವು. ರಾತ್ರಿಯಲ್ಲಿ ಕಾಚನ್ನು ಹೆಚ್ಚಾಗಿಸೇವಿಸಬಾರದು. ಹಾಗೆ ಸೇವಿಸಿದಲ್ಲಿ ಇಂದ್ರನ ಭೋಗವನ್ನು ಸಹ ನಾಶಮಾಡುವುದು.

೧೬. ಪ್ರಾತಃಕಾಲದಲ್ಲಿ ಅಡಿಕೆಯನ್ನೂ ಮಧ್ಯಾಹ್ನ ಸುಣ್ಣವನ್ನೂ ರಾತ್ರಿಯಲ್ಲಿ ವಿಳ್ಳೇದೆಲೆಯನ್ನೂ ಹೆಚ್ಚಾಗಿ ಸೇವಿಸಬೇಕೆಂಬುದು ತಾಂಬೂಲದ ಲಕ್ಷಣವು.

೧೭. ರಾತ್ರಿಕಾಲದಲ್ಲಿ ಹೆಚ್ಚಾಗಿ ಎಲೆಯನ್ನು ಉಪಯೋಗಿಸಿದಲ್ಲಿ (ಆತನಿಗೆ) ಐಶ್ವರ್ಯವು ಹೆಚ್ಚುತ್ತದೆ. ಈ ತಾಂಬೂಲವು ಕಾಮವನ್ನೂ ಜೀರ್ಣವನ್ನೂ, ಸರಿಯಾದ ಮಲವಿಸರ್ಜನೆಯನ್ನೂ ಉಂಟುಮಾಡುತ್ತದೆ.

೧೮. ಎಲೆಯು ಹೆಚ್ಚಾದಲ್ಲಿ ಪಿತ್ತವು ಅಧಿಕವಾಗುತ್ತದೆ. ಅಡಿಕೆ ಹೆಚ್ಚಾಗಿ ಸೇವಿಸಿದಲ್ಲಿ ಕಫವು ಹೆಚ್ಚುತ್ತದೆ. ಕಾಚು ಹೆಚ್ಚಾದಲ್ಲಿ ವೀರ್ಯವು ಕೆಡುವುದು. ಆದುದರಿಂದ ಸಮತೂಕವಾದ ತಾಂಬೂಲವೇ ಶ್ರೇಷ್ಠವು.



Rarest Archives

ಅನಿಧಾಯ ಮುಖೇ ಪರ್ಣಂ ಪೂಗಂ ಖಾದತಿ ಯೋ ನರಃ
ಸಪ್ತ ಜನ್ಮ ದರಿದ್ರತ್ವಂ ಅಂತೇ ನ ಸ್ಮರತೇ ಹರಿಂ || ೧೯ ||

ಆಯುರಗ್ರೇ ಯಶೋ ಮೂಲೇ ಲಕ್ಷ್ಮೀರ್ಮಧ್ಯೇ ವ್ಯವಸ್ಥಿತಾ ।
ಪರ್ಣ ಮೂಲೇ ಭವೇತ್ ವ್ಯಾಧಿಃ ಪರ್ಣಾಗ್ರೇ ಚಾಯುಷಃ
ಕ್ಷಯಃ || ೨೦ ||

ಚೂರ್ಣಪರ್ಣಂ ಹರೇಲಕ್ಷ್ಮೀಂ ಶಿರಾ ಬುದ್ಧಿ ವಿನಾಶಿನೀ ।
ತಸ್ಮಾದಗ್ರಂಚ ಮೂಲಂಚ ಶಿರಾಂ ಚೈವ ವಿಶೇಷತಃ || ೨೧ ||

ಚೂರ್ಣಪರ್ಣಂ ವರ್ಜಯಿತ್ವಾ ತಾಂಬೂಲಂ
ಖಾದಯೇನ್ನರಃ || ೨೨ಅ ||

ತರ್ಜನ್ಯಾ ಚೂರ್ಣಮಾದಾಯ ತಾಂಬೂಲಂ ನ ತು
ಖಾದಯೇತ್ ||೨೨ಆ||

ಯದಿ ಖಾದಯತೇ ಮೂಢೊ ರೌರವಂ ನರಕಂ ವ್ರಜೇತ್ || ೨೩ ||
ಪರ್ಣಾಗ್ರೇ ವಸತೇ ಲಕ್ಷ್ಮೀ ಪರ್ಣಮೂಲೇ ಸರಸ್ವತೀ ।

ಪರ್ಣಪೃಷ್ಠೇ ವಸೇತ್ ಗೌರೀ ಚೂರ್ಣಪರ್ಣೇಷು ಚಂಡಿಕಾ ||೨೪||

ತಾಂಬೂಲಾ ಗ್ರೇ ನಿ ವಸತಿ ರಮಾ ಮಧ್ಯತೋ ವಾಗಧೀಶಾ
ಪೃಷ್ಠೇ ಜ್ಯೇಷ್ಠಾ ಹಿಮಗಿರಿ ಸುತಾ ವಾಮಭಾಗ್ಯೇಽನ್ಯಥೊಭೂಃ ।
ಅಂತರ್ವಿಷ್ಣುರ್ಬಹಿರುಡುಪತಿಃ ಶಂಕರಶ್ಚೈವ ಕೋಣೇ
ಮೂಲೇ ಮೃತ್ಯುರ್ವಸತಿ ಮದನಃ ಸರ್ವಪತ್ರೇಷುಪುಂಸಾಂ ||೨೫||

ಇತಿ ಯೋಗ ಮಾಲಾಯಾಂ ।

ಅಂಗುಷ್ಠಚೂರ್ಣ ಸಂಯುಕ್ತಂ ಪರ್ಣಪೃಷ್ಠೇತು ಲೇಪನಂ ।
ತತ್ ಪರ್ಣಂ ಖಾದಯೇತ್ ತೇನ ಸೋಮಪಾನಂ ದಿನೇದಿನೇ ||೨೬||

Rarest Archive

೧೯. ಯಾವಮನುಷ್ಯನು ಎಲೆಯನ್ನು ಸೇವಿಸದೆ ಮೊದಲು ಅಡಿಕೆಯನ್ನು ತಿನ್ನುತ್ತಾನೆಯೋ ಅವನು ಮುಂದಿನ ಏಳು ಜನ್ಮಗಳಲ್ಲಿಯೂ ದರಿದ್ರನಾಗುವುದಲ್ಲದೆ, ಮರಣಕಾಲದಲ್ಲಿಯೂ ದೇವರನ್ನು ಸ್ಮರಿಸಲಾರನು.

೨೦. ಎಲೆಯ ತುದಿಯಲ್ಲಿ ಆಯಸ್ಸೂ, ಮೂಲದಲ್ಲಿ ಯಶಸ್ಸೂ ಮತ್ತು ಮಧ್ಯದಲ್ಲಿ ಲಕ್ಷ್ಮಿಯೂ ಇರುವುವು. ಎಲೆಯ ಮೂಲವನ್ನು (ಬುಡವನ್ನು) ತಿಂದಲ್ಲಿ ವ್ಯಾಧಿಯೂ, ತುದಿಯನ್ನು ತಿಂದಲ್ಲಿ ಆಯಸ್ಸು ಕ್ಷಯವೂ ಉಂಟಾಗುವುವು.

೨೧. ಸುಣ್ಣದ ಎಲೆಯನ್ನು ತಿಂದಲ್ಲಿ ಐಶ್ವರ್ಯ ನಾಶವಾಗುತ್ತದೆ.

೨೨. (ಅ) ಎಲೆಯ ಮಧ್ಯದ ನರಗಳು ಬುದ್ಧಿನಾಶವನ್ನುಂಟು ಮಾಡುತ್ತವೆ. ಆದುದರಿಂದ ತುದಿಯನ್ನು, ಬುಡವನ್ನು, ನರಗಳನ್ನು ಮತ್ತು ಸುಣ್ಣದ ಎಲೆಯನ್ನು ಬಿಟ್ಟು ತಾಂಬೂಲವನ್ನು ಮನುಷ್ಯರು ಉಪಯೋಗಿಸತಕ್ಕದ್ದು.

೨೨. (b) ತೋರುಬೆರಳಿನಿಂದ ಸುಣ್ಣವನ್ನು ಹಚ್ಚಿ ತಾಂಬೂಲವನ್ನು ಸೇವಿಸಬಾರದು.

೨೩. ಹಾಗೇನಾದರೂ ತಿಂದಂಥಾ ಬುದ್ಧಿಹೀನರಿಗೆ ರೌರವನರಕವು ಪ್ರಾಪ್ತಿಯಾಗುತ್ತದೆ.

೨೪. ಎಲೆಯ ತುದಿಯಲ್ಲಿ ಲಕ್ಷ್ಮಿಯೂ, ಬುಡದಲ್ಲಿ ಸರಸ್ವತಿಯೂ ಎಲೆಯ ಹಿಂಭಾಗದಲ್ಲಿ ಗೌರಿಯೂ, ಸುಣ್ಣದ ಎಲೆಯಲ್ಲಿ ಚಂಡಿಕೆಯೂ ವಾಸಮಾಡುತ್ತಾರೆ.

೨೫. ವಿಳ್ಳೇದೆಲೆಯ ತುದಿಯಲ್ಲಿ ಲಕ್ಷ್ಮಿಯೂ, ಮಧ್ಯದಲ್ಲಿ ಸರಸ್ವತಿಯೂ, ಹಿಂಬದಿಯಲ್ಲಿ ದರಿದ್ರಲಕ್ಷ್ಮಿಯೂ, ಎಲೆಯ ಎಡ ಭಾಗದಲ್ಲಿ ಪಾರ್ವತಿಯೂ, ಬಲಭಾಗದಲ್ಲಿ ಭೂದೇವಿಯೂ, ಒಳಭಾಗದಲ್ಲಿ ವಿಷ್ಣುವೂ, ಹೊರಭಾಗದಲ್ಲಿ ಚಂದ್ರನೂ, ಅಂಚಿನಲ್ಲಿ ಶಂಕರನೂ, ಬುಡದಲ್ಲಿ ಯಮನೂ, ಸರ್ವಭಾಗದಲ್ಲಿಯೂ ಮನ್ಮಥನೂ ಇರುವರೆಂದು ತಿಳಿಯತಕ್ಕದ್ದು.

ಇವಿಷ್ಟೂ ಯೋಗಮಾಲೆಯಲ್ಲಿದೆ.

೨೬. ಹೆಬ್ಬೆಟ್ಟಿನಿಂದ ಸುಣ್ಣವನ್ನು ಎಲೆಯ ಹಿಂಬದಿಯಲ್ಲಿ ಹಚ್ಚಿ ಆ ಎಲೆಯನ್ನು ಸೇವಿಸಿದಲ್ಲಿ ಪ್ರತಿದಿನವೂ ಸೋಮಪಾನವನ್ನು ಮಾಡಿದಷ್ಟು ಸಂತೋಷಫಲವಾಗುತ್ತದೆ.

Rarest Archiver

### ಪಾಪಮ್ ।

ಕನಿಷ್ಠಾನಾಮಿಕಾ ಮಧ್ಯಾ ತರ್ಜನ್ಯಾಂಗುಷ್ಠಯೋಗತಃ ।
ಶೋಕೋ ಹಾನಿಸ್ತಥಾ ಮೃತ್ಯುರೈಶ್ವರ್ಯಂ ಚೌರ್ಯಮೇವಚ ॥ ೨೭॥

### ಅನ್ಯಃ ।

ಅಂಗುಷ್ಠಸ್ಯ ತು ಲೇಪೇನ ಸರ್ವಸಿದ್ಧಿಪ್ರದಾಯಕಂ ।
ಜಯಸ್ತ್ರೀ ವಸ್ತ್ರಲಾಭಾದಿರ್ಭವಿಷ್ಯತಿ ನ ಸಂಶಯಃ ॥ ೨೮ ॥

ಪೂಗಂ ಚ ಶಕಲೀ ಕೃತ್ಯ ಖದಿರಾಕ್ತಂ ಸಪರ್ಣಕಂ ।
ಪಿಚ್ಛಲಂ ಚೂರ್ಣಸಂಯುಕ್ತಂ ತಾಂಬೂಲಂ ಖಾದಯೇತ್
ಸುಧೀಃ ॥ ೨೯ ॥

### ನಿಷೇಧಃ ।

ವಾಮಹಸ್ತೇನ ನೊ ಖಾದೇತ್ ಸ್ತ್ರೀಹಸ್ತೇನ ತಥೈವ ಚ ।
ಯದಿ ಖಾದಯತೇ ಮೂಢಃ ತಸ್ಯ ಲಕ್ಷ್ಮೀರ್ವಿನಶ್ಯತಿ ॥ ೩೦ ॥

ಮ್ಲೇಚ್ಛಹಸ್ತಾಚ್ಛತ್ರುಹಸ್ತಾಚ್ಛಂಕಿತಸ್ಯ ಜನಸ್ಯ ಚ ।
ಅಥ ವೈದಗ್ಧ ಹಸ್ತಸ್ಥಸ್ತಾಂ ಭೂಯೋ ಹಿ ನಿಷಿಧ್ಯತೇ ॥ ೩೧ ॥

### ತಾಂಬೂಲಪತ್ರದಾನ ವಿವೇಕಃ

ಶತಪರ್ಣಾನಿ ದೇವೇಶಿ ಚಕ್ರವರ್ತಿವರಾಯ ಚ ।
ಗುರುಭ್ಯ ಸ್ಸಂಪ್ರದಾತವ್ಯಾ ದ್ವಾತ್ರಿಂಶತ್ ಪರ್ಣವೀಟಿಕಾ ॥ ೩೨ ॥

ಅಷ್ಟಾವಿಂಶತಿ ಭೂಪೇಭ್ಯೋ ಬಾಂಧವೇಭ್ಯೋ ದಶಾಷ್ಟಕಂ ।
ಜಾಮಾತ್ರೇ ಪಕ್ಷ ಪರ್ಣಾನಿ ವಸು ದ್ವಾದಶ ವಾ ಪ್ರಿಯೇ ॥೩೩॥

ಪಂಚ ವಿಂಶತಿ ಶಕ್ತಿಭ್ಯ : ಪುತ್ರೇಭ್ಯ ಸ್ತತ್ವ ಸಂಖ್ಯಯಾ ।
ಷಟ್ಪರ್ಣಾನಿ ಚ ಶತ್ರುಭ್ಯಸ್ತುರೀಯಂ ದಾನಮುತ್ತಮಂ ॥೩೪॥

Rarest Archiver

## ಪಾಪಮ್ !

೨೭ ಕಿರುಬೆರಳು, ಅನಾಮಿಕ, ಮಧ್ಯ ಮತ್ತು ತೋರುಬೆಟ್ಟು ಇವುಗಳನ್ನು ಸುಣ್ಣ ಹಚ್ಚಲು ಉಪಯೋಗಿಸುವುದರಿಂದ ಕ್ರಮವಾಗಿ ದುಃಖ, ಕೆಡಕು, ಮೃತ್ಯು ಮತ್ತು ಐಶ್ವರ್ಯದ ಕಳುವು ಆಗುತ್ತದೆ.

## ಮತ್ತೊಂದರಲ್ಲಿ ಹೇಳುವುದು.

೨೮. ಹೆಬ್ಬೆಟ್ಟಿನಿಂದ ಸುಣ್ಣವನ್ನು ಉಪಯೋಗಿಸುವುದರಿಂದ ಸರ್ವಕಾರ್ಯಗಳೂ ಸಿದ್ಧಿಯಾಗುವುದಲ್ಲದೆ ಜಯ, ಸ್ತ್ರೀಲಾಭ, ವಸ್ತ್ರಲಾಭ ಮುಂತಾದ ಫಲಗಳು ಮುಂದೆ ಲಭಿಸುವುದರಲ್ಲಿ ಸಂಶಯವಿಲ್ಲ.

೨೯. ಬುದ್ಧಿವಂತರು ಚೂರುಮಾಡಿದ ಅಡಿಕೆ, ಕಾಚು, ಒಳ್ಳೆಯ ಸುಣ್ಣ ಮತ್ತು ಒಳ್ಳೆಯ ಎಲೆ ಇವುಗಳಿಂದ ಕೂಡಿದ ತಾಂಬೂಲವನ್ನು ಉಪಯೋಗಿಸುತ್ತಾರೆ.

## ನಿಷೇಧವಾದದ್ದು.

೩೦. ಎಡಗೈಯಿಂದ, ಸ್ತ್ರೀಯರ ಕೈಯಿಂದ (ನೇರವಾಗಿ) ಯಾವ ಮೂಢನು ತಾಂಬೂಲವನ್ನು ಸ್ವೀಕರಿಸುತ್ತಾನೆಯೋ (ತಿನ್ನುತ್ತಾನೆಯೋ) ಅವನ ಐಶ್ವರ್ಯವು ಹಾಳಾಗುವುದು.

೩೧. ಮ್ಲೇಚ್ಛರು (ನಮ್ಮ ಮತವನ್ನು ಒಪ್ಪದವರು), ಶತ್ರುಗಳು, ಭೀತರಾದ ಜನಗಳು, ಕಡುಲೋಭಿ—ಈ ಜನಗಳ ಕೈಯಿಂದ ತಾಂಬೂಲವನ್ನು ಸ್ವೀಕರಿಸುವುದು ನಿಷೇಧಿಸಿದೆ.

## ವಿಳ್ಳೇದೆಲೆಯನ್ನು ಕೊಡುವ ರೀತಿ.

೩೨. ಚಕ್ರವರ್ತಿಯಾದವನಿಗೆ ಒಂದು ನೂರು ಎಲೆಗಳನ್ನೂ, ಗುರುಗಳಿಗೆ ಮೂವತ್ತೆರಡು ಎಲೆಗಳುಳ್ಳ ತಾಂಬೂಲವನ್ನೂ ಸಮರ್ಪಿಸಬೇಕು. (ಅದಕ್ಕೆ ಕಮ್ಮಿ ಎಲೆಗಳು ಇರಬಾರದೆಂದು ಅರ್ಥ.)

೩೩. ರಾಜರುಗಳಿಗೆ ಇಪ್ಪತ್ತೆಂಟು, ಬಂಧುಗಳಿಗೆ ಹದಿನೆಂಟು, ಅಳಿಯನಿಗೆ ಹದಿನೈದು, ಪ್ರಿಯರಾದವರಿಗೆ ಎಂಟು ಅಥವಾ ಹನ್ನೆರಡು ಎಲೆಗಳನ್ನು ಕೊಡಬೇಕು.

೩೪. "ಶಕ್ತಿ"ಗಳಿಗೆ ಇಪ್ಪತ್ತೈದು ಎಲೆಗಳನ್ನೂ, ಹದಿನಾರು ಎಲೆಗಳನ್ನು ಮಕ್ಕಳಿಗೂ, ಶತ್ರುಗಳಿಗೆ ಆರು ಎಲೆಗಳನ್ನೂ, ದಾನಕ್ಕೆ ನಾಲ್ಕು ಎಲೆಗಳನ್ನೂ ಕೊಡಬೇಕು.

Rarest Archive

ಪರ್ಣತ್ರಯಂ ಶತ್ರುಪಕ್ಷೇ ದಶಪರ್ಣಾರಿ ವೈಶ್ಯಯೋ :।
ವೀರೇಭ್ಯ : ಷೋಡಶ ಶಿವೇ ದಿವ್ಯಾಘೇ ವಸುಹೀತ (೪೮) ಯುಕ್
॥೩೫॥

ತದರ್ಧಂ ಚೈವ ಸಿದ್ಧಾಘೇ ಮಾನವೌಘೇ ತದರ್ಧಕಂ।
ಭೃತ್ಯೇಭ್ಯ : ಸಪ್ತಪರ್ಣಾನಿ ಕನ್ಯಾಯ್ಯೈ ಪಂಚವಿಂಶತಿ ॥೩೬॥

ಚಂದ್ರಯುಕ್ತಂ ಮಹೇಶಾನಿ ಪೌತ್ರೇಭ್ಯೋ ದಶಪಂಚ ಚ।
ಸ್ನುಷಾಯ್ಯೈ ತ್ರಿಂಶತಿ ಶಿವೇ ದಾಸ್ಯೈಚೈವ ಚತುರ್ದಶ ॥೩೭॥

ಅನ್ಯೇಭ್ಯ : ಪರಮೇಶಾನಿ ವಿಂಶತ್ ಪರ್ಣಾನಿ ದಾಸಯೇತ್॥೩೮ಅ॥

ಅಗ್ರದಾನಂ ಚ ಶತ್ರುಭ್ಯೋ ವಕ್ರದಾನಂ ಸುಮಿತ್ರಕೇ ॥೩೮ಆ॥

ತಿರ್ಯಗ್‌ದಾನಂ ಸೇವಕಾದೌ ಯಥಾ ಯೋಗೇನ ಯೋಜಯೇತ್
ಇತಿ ಸಂಕ್ಷೇಪತಃ ಪ್ರೋಕ್ತಂ ಸಿದ್ಧಿಯೋಗಂ ಶೃಣುಪ್ರಿಯೇ ॥೩೯॥

ಇತಿ ಪತ್ರದಾನಮ್।

ಪ್ರಾತಃ ಅಂಜನಾನಂತರಂ ಧಾವನಾದಿ ಕ್ರಿಯಾ ಪ್ರಶಸ್ತಾ। ತದಾಹ।
ತತೋ ಧಾವನ ಗಂಡೂಷ ಧೂಮ ತಾಂಬೂಲಭಾಗ್ ಭವೇತ್।
ರುಚಿ ವೈಶುಧ್ಯ ಸೌಗಂಧಮಿಚ್ಛನ್ ವಕ್ತ್ರೇಣ ಧಾರಯೇತ್ ॥೪೦॥

ಜಾತೀ ಲವಂಗ ಕರ್ಪೂರ ಕಂಕೋಲ ಕಟುಕೈ : ಸಹ
ತಾಂಭೂಲೀನಾಂ ಕಿಸಲಯಂ ಹೃದ್ಯಂ ಪೂಗಫಲಾನ್ವಿತಂ॥
ಕಟುಕೈರ್ಲತಾ ಕಸ್ತೂರೀ ಫಲೈರಿತಿ ಹೇಮಾದ್ರಿ : ॥ ೪೧ ॥

ಧೂಮೇನಾಪೋಹ್ಯ ಹೃದ್ಯೈರ್ವಾ ಕಟುತಿಕ್ತ ಕಷಾಯುಕ್ತೈ :।
ತಾಂಬೂಲ ಪತ್ರ ಸಹಿತೈ : ಸುಗಂಧೈರ್ವಾ ವಿಚಕ್ಷಣ : ॥ ೪೨ ॥

Rarest Archive

೩೫. ಶತ್ರುಪಕ್ಷದವರಿಗೆ ಮೂರು ಎಲೆಗಳೂ ವೈಶ್ಯರಿಗೆ ಹತ್ತು ಎಲೆಗಳೂ, ವೀರರಿಗೆ ಹದಿನಾರು ಎಲೆಗಳೂ, ಮತ್ತು ದೇವರುಗಳಿಗೆ ನಲವತ್ತೆಂಟು ಎಲೆಗಳನ್ನೂ ಉಪಯೋಗಿಸಬೇಕು.

೩೬. ಸಿದ್ಧಪುರುಷರಿಗೆ ಇಪ್ಪತ್ತನಾಲ್ಕು ಎಲೆಗಳನ್ನೂ, ಪೂಜ್ಯರಿಗೆ ಮತ್ತು ಉತ್ತಮರಿಗೆ ಹನ್ನೆರಡು ಎಲೆಗಳನ್ನೂ, ಆಳುಗಳಿಗೆ (ಸೇವಕರಿಗೆ) ಏಳು ಎಲೆಗಳನ್ನೂ ಕನ್ನಿಕೆಯರಿಗೆ ಇಪ್ಪತ್ತೈದು ಎಲೆಗಳನ್ನೂ ಕೊಡಬೇಕು.

೩೭. ಪಚ್ಚಕರ್ಪೂರದಿಂದ ಕೂಡಿದ ವಿಳ್ಳೇದೆಲೆಗಳನ್ನು ಕೊಡುವಾಗ ಮಗನ ಮಕ್ಕಳಿಗೆ

೩೮. (ಅ) ಹದಿನೈದು ಎಲೆಗಳನ್ನೂ, ಸೊಸೆಗೆ ಮೂವತ್ತನ್ನೂ, ದಾಸಿಗಳಿಗೆ ಹದಿನಾಲ್ಕನ್ನೂ ಮತ್ತು ಇತರರಿಗೆ ಇಪ್ಪತ್ತು ವಿಳ್ಳೇದೆಲೆಗಳನ್ನೂ ಕೊಡತಕ್ಕದ್ದು.

೩೮. (ಅ) ಶತ್ರುಗಳಿಗೆ ತುದಿ ಅವರಕಡೆ ಇರುವಂತೆಯೂ, ಸ್ನೇಹಿತರಿಗೆ ಮತ್ತು

೩೯. ಒಳ್ಳೆಯವರಿಗೆ ಎಲೆಗಳನ್ನು ಅಡ್ಡವಾಗಿಯೂ ಸೇವಕಾದಿಗಳಿಗೆ ತೊಟ್ಟು ಮುಂದುಮಾಡಿಯೂ ಕೊಡತಕ್ಕುದೆಂದು (ಎಲೆ, ಪ್ರಿಯಳೇ) ಈ ಸಿದ್ಧಿಯೋಗವನ್ನು ತಿಳಿ.

ಇಲ್ಲಿಗೆ ಪತ್ರದಾನವು ಮುಗಿಯಿತು.

೪೦. ಬೆಳಿಗ್ಗೆ, ಸ್ನಾನಾನಂತರ, ಹಲ್ಲುಜ್ಜುವುದೇ ಮೊದಲಾದ ಕಾರ್ಯವು ಪ್ರಶಸ್ತವು. ಅಂಜನಾನಂತರದಲ್ಲಿ ಹಲ್ಲುಜ್ಜಿ, ಬಾಯಿಮುಕ್ಕಳಿಸಿ. ಮುಖವನ್ನು ಶುದ್ಧಗೊಳಿಸಿ, ಧೂಮಪಾನದ ತರುವಾಯ ತಾಂಬೂಲವನ್ನು ಸ್ವೀಕರಿಸಬೇಕು. ರುಚಿ, ನೈರ್ಮಲ್ಯ ಸುವಾಸನೆಗಳನ್ನು ಅಪೇಕ್ಷಿಸುವವನು ತಾಂಬೂಲವನ್ನು ಬಾಯಲ್ಲಿಯೇ ಇಟ್ಟಿರಬೇಕು.

೪೧. ಜಾಕಾಯಿ. ಜಾಯಿಪತ್ರೆ, ಲವಂಗ, ಕರ್ಪೂರ, ಅಂಕೋಲೆ, ಬಾಲಮೆಣಸು, ಅಡಿಕೆ, ಎಲೆ, ಇವುಗಳಿಂದ ಕೂಡಿದ ತಾಂಭೂಲವು ಮನೋಹರವಾದುದು. (ಶ್ರೇಷ್ಠವಾದುದು.)

ಬಾಲಮೆಣಸು ಲತಾಕಸ್ತೂರಿಯ ಫಲ. (ಹೇಮಾದ್ರಿ)

೪೨. ಬುದ್ಧಿವಂತರು ಧೂಮಪಾನ ಮಾಡಿದ ತರುವಾಯ ಮನೋಹರವಾದ ಖಾರ, ಕಹಿ, ಒಗರು ರಸವುಳ್ಳ ಸುಗಂಧವಾದ ವಿಳ್ಳೇದೆಲೆಗಳಿಂದ ಕೂಡಿರುವ ತಾಂಬೂಲವನ್ನು ಉಪಯೋಗಿಸುತ್ತಾರೆ.

Rarest Archive

ಪೂಗೈಃ ಕಂಕೋಲ ಕರ್ಪೂರ ಲವಂಗ ಸುಮನಾ (ನಃ) ಫಲೈಃ ।
ಫಲೈಃ ಕಟುಕಷಾಯೈರ್ವಾ ಮುಖವೈಶದ್ಯ ಕಾರಕೈಃ ॥ ೪೩ ॥

ತಾಂಬೂಲೇನ ವಿನಾ ಜಿಹ್ವಾ ಜಡೀ ಭೂತಾ ಸರಸ್ವತೀ ।
ಬಹಿರ್ನಯಾತಿ ಸಹಸಾ ನಗ್ನಾ ಕುಲವಧೂರಿವ ॥ ೪೪ ॥

ಕರ್ಪೂರಂ ಜಾತಿ ಕಂಕೋಲಂ ಲವಂಗಂ ಕಟುಕಾಹ್ವಯಂ ।
ಸ ಚೂರ್ಣ ಪೂಗೈರ್ವಿಹಿತಂ ತಂತ್ರಂ ತಾಂಬೂಲಜಂ ಶುಭಂ॥ ೪೫ ॥

ಸಪೂಗಂ ಚ ಸುಪತ್ರಂಚ ಚೂರ್ಣ ಖಾದಿರ ಸಂಯುತಂ ।
ಅದತ್ವಾ ದ್ವಿಜದೇವೇಭ್ಯೋ ತಾಂಬೂಲಂ ವರ್ಜಯೇತ್
ಬುಧಃ ॥ ೪೬ ॥

ನೈವೇದ್ಯಮರ್ಪಯೇಚ್ಚೈವ ತಾಂಬೂಲಂ ಮುಖರೋಚಕಂ ।
ತಾಂಬೂಲೇ ಯೋಜಯೇದ್ ದ್ರವ್ಯಂ ಚಿಕ್ಕಣಂ ಕ್ರಮುಕಂ
ತಥಾ ॥ ೪೭ ॥

ಖದಿರಶ್ಚೂರ್ಣಕಂ ಜಾತೀ ತ್ವಕ್ ಚ ಜಾತಿಫಲಂ ತಥಾ ।
ಲವಂಗೈಲಾ (ಲಂ) ನಾಲಿಕೇರ ಬೀಜಸ್ಯ ಶಕಲಂ ಲಘು ॥ ೪೮ ॥

ಸ್ವರ್ಣರೌಪ್ಯಾಣಿ ಪತ್ರಾಣಿ ಕರ್ಪೂರಃ ಕೇಸರಂ ತಥಾ ।
ಜಾತಾನಿ ಮಾಗಧೇ ದೇಶೇ ನಾಗವಲ್ಲೀ ದಲಾನಿ ಚ ॥ ೪೯ ॥

ಸ್ಕಾಂದೇ ಶ್ರಾವಣ ಮಾಹಾತ್ಮ್ಯೇ ಚೂಡಾಮಣೌ ।

ತಾಂಬೂಲಂ ಸ್ವರ್ಣಪರ್ಣಂ ಕ್ರಮುಕಫಲಯುತಂ ಸಾಗ್ರ್ಯ
(ಗ್ರ) ಮಗ್ರ್ಯಂ ಗೃಹೀತಂ (ತ್ವಾ)
ಕರ್ಪೂರೇಣಾಂಡಜಾಭ್ಯಾಂ ಕೃತ ಖದಿರವಟೀಸೌರಭೇಣಾತಿ
ಪೂರ್ಣಂ
ಚೂರ್ಣಂ ಗ್ರಾವಾಣಜಾತಂ ಶಶಿಧರಕಿರಣ ಪ್ರೋಜ್ವಲಂ ತೇನಸಾಕಂ
ದತ್ವಾ ವಿಪ್ರಾಯ ಪೂರ್ವಂ ತದನು ನರಪತಿರ್ಭಕ್ಷಯೇದಾಪ್ತ
ದತ್ತಂ ॥ ೫೦ ॥

Rarest Archive

೪೩. ಅಂಕೋಲೆ, ಕರ್ಪೂರ, ಲವಂಗ, ಜಾತೀಫಲ, ಅಡಿಕೆ, ಇವುಗಳಿಂದ ಕೂಡಿದ ತಾಂಬೂಲವನ್ನು ಉಪಯೋಗಿಸುವುದರಿಂದ ಬಾಯಿಯ ನೈರ್ಮಲ್ಯವುಂಟಾಗುತ್ತದೆ.

೪೪. ತಾಂಬೂಲವಿಲ್ಲದಲ್ಲಿ ನಾಲಿಗೆಯೂ ಮಂದವಾಗುತ್ತದೆ. ನಗ್ನಳಾಗಿರುವ ಕುಲಸ್ತ್ರೀಯಂತೆ ಮಾತು ಹಠಾತ್ತಾಗಿ ಹೊರಗೆ ಬರುವುದಿಲ್ಲ.

೪೫. ಕರ್ಪೂರ, ಜಾತೀಫಲ, (ಜಾಯಿಕಾಯಿ, ಜಾಯಿಪತ್ರೆ) ಅಂಕೋಲೆ, ಲವಂಗ, ಬಾಲಮೆಣಸು. ಉತ್ತಮವಾದ ಸುಣ್ಣ, ಅಡಿಕೆ, ಇವುಗಳಿಂದ ಕೂಡಿದ ತಾಂಬೂಲದ ಉಪಯೋಗವು ಉತ್ತಮವು.

೪೬. ಒಳ್ಳೆಯ ಅಡಿಕೆಯನ್ನೂ ಎಲೆಯನ್ನೂ ಸುಣ್ಣ ಮತ್ತು ಕಾಚಿನಿಂದ ಕೂಡಿದ ಉತ್ತಮವಾದ ತಾಂಬೂಲವನ್ನೂ, ಬ್ರಾಹ್ಮಣರು, ದೇವತೆಗಳಿಗೆ ಕೊಡದೆ, ಬುದ್ಧಿವಂತರು ಉಪಯೋಗಮಾಡಬಾರದು.

೪೭. ಬಾಯಿಗೆ ರುಚಿಯನ್ನುಂಟುಮಾಡುವ ತಾಂಬೂಲವನ್ನು ದೇವರಿಗೆ ಅರ್ಪಿಸಬೇಕು. ತಾಂಬೂಲದಲ್ಲಿ 'ಚಿಕ್ಕಣಿ' ಅಡಿಕೆಯನ್ನು ಸೇರಿಸಬೇಕು. (ಅದರಿಂದ ಉತ್ತಮವಾಗುತ್ತದೆ.)

೪೮. (ಅಲ್ಲದೇ) ಕಾಚು, ಸುಣ್ಣ, ಜಾಯಿಫಲ, ಜಾಯಿಪತ್ರೆ, ದಾಲ್ಚಿನ್ನಿ ಲವಂಗ, ಯಾಲಕ್ಕಿ, ಕೊಬ್ಬರಿಯ ಚೂರುಗಳು ಇವುಗಳನ್ನೂ ಸೇರಿಸಿ ನಿವೇದಿಸಬೇಕು.

೪೯. (ಮತ್ತು) ಬಂಗಾರದರೇಖು, ಕರ್ಪೂರ, ಕೇಸರ, ಮಗಧ ದೇಶದಲ್ಲಿ ಹುಟ್ಟಿದ ವಿಳ್ಳೇದೆಲೆ ಇವುಗಳನ್ನು ಸೇರಿಸತಕ್ಕದ್ದು.

೫೦. ಸ್ಕಾಂದಪುರಾಣದ ಶ್ರಾವಣಮಹಾತ್ಮ್ಯ ಚೂಡಾಮಣಿಯಲ್ಲಿ: ಚಿನ್ನದ ಬಣ್ಣವುಳ್ಳ ವಿಳ್ಳೇದೆಲೆಯು, ಶ್ರೇಷ್ಠವಾದ ಬುಡಭಾಗದ ಅಡಿಕೆ, ಕರ್ಪೂರ, ಕಸ್ತೂರಿಗಳಿಂದ ಕೂಡಿದ ಕಾಚಿನ ಮಾತ್ರೆಗಳೂ, ಕಲ್ಲಿನಿಂದ ಹುಟ್ಟಿದ ಸುಣ್ಣ (ಚಂದ್ರನ ಕಿರಣಗಳಂತೆ ಶೋಭಿಸುವ ಕಲ್ಲಿನ ಸುಣ್ಣ) ಇವುಗಳಿಂದ ಕೂಡಿದ ತಾಂಬೂಲವನ್ನು ದೊರೆಯು ಬ್ರಾಹ್ಮಣರಿಗೆ ಮೊದಲು ಕೊಟ್ಟು, ತರುವಾಯ, ಆಪ್ತರಿಂದ ಕೊಡಲ್ಪಟ್ಟ ಆ ತಾಂಬೂಲವನ್ನು ಉಪಯೋಗಿಸಬೇಕು.



Rarest Archive

ನರಾಭಿಷೇಕಾಶನ ಶಾಂತಿಕರ್ಮ ಪಾಂತೇಽಥ
ತಾಂಬೂಲಮತಿ ಪ್ರಶಸ್ತಂ
ಕರ್ಪೂರ ಕಂಕೋಲ ಲವಂಗ ಪೂಗ ಜಾತೀ ಫಲೈರ್ನಾಗ
ಲತಾ ದಲಾಕ್ತೈಃ ॥ ೩೧ ॥

ಶುದ್ಧಾಶ್ಮ ಚೂರ್ಣಂ ಖದಿರಸ್ಯ ಸಾರ :
ಕಸ್ತೂರಿಕಾ ಚಂದನ ಮಿಶ್ರ ಚೂರ್ಣಂ ।
ತಾಂಬೂಲಮೇತತ್ ಪ್ರವದಂತಿ ರಾಜ್ಞಾಂ
ಸೌಭಾಗ್ಯದಂ ಕಾಂತಿ ಸುಖಪ್ರದಂ ಚ ॥ ೩೨ ॥

ಚೂಡಾಮಣಿ ।

ಕರ್ಪೂರಕಂಕೋಲಲವಂಗ ಪೂಗಜಾತೀ ಫಲೈರ್ನಾಗರ
ಖಂಡಪರ್ಣೈಃ ।
ಶುದ್ಧಾಶ್ಮ ಚೂರ್ಣಂ ಖದಿರಸ್ಯ ಸಾರಂ ತಾಂಬೂಲಮೇತನ್ನವಧಾ
ಪ್ರಸಿದ್ಧಂ ॥ ೩೩ ॥

ತಾಂಬೂಲಪೂಗಂ ಖದಿರಂ ಲವಂಗಂ
ಜಾತೀ ಫಲೈಲಾತ್ವಕ್ (ಚ) ಪತ್ರಿಕಾದ್ಯಾ :।
ಸನ್ನಾಗವಲ್ಲ್ಯಾ(ಲ್ಲೀ)ದಲ ಚೂರ್ಣಯುಕ್ತಂ
ಶಾತಾಮ ಕಂಕೋಲ ಮಗಿ(ಗ)ಸ್ತ್ಯಜೋರಾಟ್
(ತ್ಥಮ್) ॥ ೩೪ ॥

ಬೋಪದೇವಃ ।

ಅಚ್ಯುತಃ ।

Rarest Archive

೫೧. ನಿದ್ರೆ, ಸ್ನಾನ, ಭೋಜನ, ವಾಂತಿ ಇವುಗಳನಂತರ, ಕರ್ಪೂರ, ಅಂಕೋಲೆ, ಲವಂಗ, ಜಾಯಿಫಲ, ವಿಳ್ಳೇದೆಲೆ, ಅಡಿಕೆ, ಇವುಗಳಿಂದ ಕೂಡಿದ ತಾಂಬೂಲ ಸೇವನೆಯು ಪ್ರಶಸ್ತವಾದುದು.

೫೨. ಕಲ್ಲುಸುಣ್ಣ, ಕಾಚು, ಕಸ್ತೂರಿ, ಶ್ರೀಗಂಧ, ಇವುಗಳಿಂದ ಕೂಡಿದ ತಾಂಬೂಲವು ದೊರೆಗಳಿಗೆ ಸೌಭಾಗ್ಯವನ್ನೂ,(ಐಶ್ವರ್ಯ) ಕಾಂತಿಯನ್ನೂ, ಸುಖವನ್ನೂ ಕೊಡುವುದೆಂದು ಪಂಡಿತರು ತಿಳಿಸುತ್ತಾರೆ.

## ಚೂಡಾಮಣಿಯಲ್ಲಿ

೫೩. ಕರ್ಪೂರ, ಅಂಕೋಲ, ಲವಂಗ, ಅಡಿಕೆ, ಜಾಯಿಕಾಯಿ, ಜಾಯಿಪತ್ರೆ, ವಿಳ್ಳೇದೆಲೆ, ಕಲ್ಲಿನಸುಣ್ಣ, ಕಾಚು ಇವುಗಳಿಂದ ಕೂಡಿದ ತಾಂಬೂಲವು ಒಂಬತ್ತು ಭಾಗಗಳುಳ್ಳದ್ದೆಂದು ಪ್ರಸಿದ್ಧವಾಗಿದೆ.

೫೪. ಒಳ್ಳೆಯ ತಾಂಬೂಲದಲ್ಲಿ ಅಡಕೆ, ಕಾಚು, ಲವಂಗ, ಜಾಯಿಕಾಯಿ, ಯಾಲಕ್ಕಿ, ದಾಲ್ಚಿನ್ನಿ, ಜಾಯಿಪತ್ರೆ, ವಿಳ್ಳೇದೆಲೆ, ಸುಣ್ಣ, ಅಂಕೋಲ, ಕಸ್ತೂರಿ, ಬಾದಾಮಿ, ಕೇಸರಿ ಇವೇ ಮುಂತಾದ ಹದಿಮೂರು ಭಾಗಗಳಿವೆ.

## ಬೋಪದೇವ

## ಅಚ್ಯುತನು

Rarest Archiver

ಸಂಪತ್ಸ್ಯಾಂ ನಾಗವಲ್ಲೀವಿಶಿರ (ಶದ) ದಲಕುಲಂ ಪೂಗಖಂಡಂ
ಸುದೇಷತ್ ।
ಸಾರೋಽಲ್ಪಃ ಖಾದಿರೋತ್ಥೋ ವ್ಯಗಮದ ಪಿಶುನಃ ಸ್ವರ್ಣ
ವಾತಾಮಕಭ್ರಃ ॥
ಕಂಕೋಲಂ ಜಾತಿಪತ್ರಂ ಫಲಮಪಿ ಚ ತಥೈಲಾಫಲಂ
ಸಲ್ಲವಂಗಂ ।
ತಾಂಬೂಲೇ ಸಂಪ್ರಯೋಜ್ಯಾ ಇತಿ ಮದನಮಿತಾಸ್ತತ್
ಪ್ರವೃಧ್ಯೈ ಪದಾರ್ಥಃ ॥ ೫೫ ॥

ತಾಂಬೂಲಗತ ಚೂರ್ಣೇನ ಮುಖದಾಹೇ ಕಾಶಿರಾಜಃ ।
ಮುಖಂ ದಹ್ಯತೇ ಚೂರ್ಣಕೇನ ಪ್ರಮಾದಾತ್ ।
ಯಥಾ ನಾಗವಲ್ಲೀ ದಲಸ್ತೇನ ಪುಂಸಃ ॥
ಸಿತಾತೈಲ ಸೌವೀರಕೈಸ್ತನ್ನಿವೃತ್ತಿಃ ।
ಪೃಥಕ್ ತಸ್ಯ ಗಂಡೂಷ ಏವೋಪದಿಷ್ಟಃ ॥ ೫೬ ॥

ಗಲೇ ಉತ್ತರೇ ಲಾಗಲೀ ಜೇ ಸುಪಾರೀ
ತಯೇ ಔಸರೀ ಧರ್ಮಗಂಧಾ ಸ್ವಿಕಾರೀ ।
ಮುಖೀ ತಾಂಬುಲಾ ಚರ್ವಣೀಂ ದಂತಮಾಲಾ
ಸುತೈಲೇ ತಯಾಶೀಚ ಗಂಡೂಷ ಘಾಲಾ ॥ ೫೭ ॥

ಏಲಾಲವಂಗ ಕರ್ಪೂರ ಕಸ್ತೂರೀ ಕೇಸರಾದಿಭಿಃ
ಜಾತೀಫಲದಲೈಃ ಪೂಗೈರ್ಲಾಂಗಲ್ಯೂಷಣ ನಾಗರೈಃ ।
ಚೂರ್ಣೈಃ ಖದಿರ ಸಾರೈಶ್ಚಯುಕ್ತಾ ಕರ್ಪೂರವೀಟಿಕಾ ॥ ೫೮ ॥

ಆದ್ಯಂ ತತ್ ಪಿಕ್ಕಕಂ ತ್ಯಾಜ್ಯಂ ಮಹಾದೋಷಕರಂ ಚಯತ್
ದ್ವಿತೀಯಂ ದುರ್ಜರಂ ಭೇದೀ ತೃತೀಯಾದ್ಯಮೃತೋಪಮಂ॥೫೯॥

Rarest Archive

೫೫. ವಿಳ್ಳೇದೆಲೆ, ಅಡಿಕೆ, ಕಾಚು, ಸುಣ್ಣ, ಕಸ್ತೂರಿ, ಚಿನ್ನದ ತಗಡು, ಬಾದಾಮಿ, ಅಂಕೋಲ, ಕೇಸರಿ, ಜಾಯಿಪತ್ರೆ, ಜಾಯಿಕಾಯಿ, ಯಾಲಕ್ಕಿ, ಲವಂಗ, ಇವಿಷ್ಟನ್ನೂ ತಾಂಬೂಲದಲ್ಲಿ ಉದ್ದೀಪನವಾಗುವಂತೆ ಸೇರಿಸತಕ್ಕದ್ದು.

೫೬. ತಾಂಬೂಲ ಸೇವಿಸುವಾಗ ಆಗುವ ಬಾಯಿಹುಣ್ಣಿಗೆ ಕಾಶಿ ರಾಜನು ಇಂತು ಪರಿಹಾರವನ್ನು ಹೇಳಿರುವನು—

ಸುಣ್ಣವು ಹೆಚ್ಚಾದ ಎಲೆಯನ್ನು ತಿನ್ನುವುದರಿಂದ ಉಂಟಾದ ಬಾಯಿಹುಣ್ಣು, ಬಿಳಿಯ ಸಾಸುವೆ ಎಣ್ಣೆಯಿಂದಲೂ, ಸೌವೀರಕಾಂಜನ ದಿಂದಲೂ ವಾಸಿಯಾಗುತ್ತದೆ. ಇವುಗಳಿಂದ ಆಗಿಂದಾಗ್ಗೆ ಬಾಯಿ ಮುಕ್ಕಳಿಸಿದರೆ ಇದು ಪರಿಹಾರವಾಗುತ್ತದೆ.

೫೭, ತಾಂಬೂಲವನ್ನು ಸೇವಿಸುವಾಗ ಅಡಕೆಯು ಗಂಟಲು ಹಿಡಿದುಕೊಳ್ಳುವಂತೆ ಮಾಡಿದಲ್ಲಿ 'ಧರ್ಮಗಂಧ' ಎಂಬ ಔಷಧಿಯ (ಸೇವನೆಯಿಂದ) ಅದನ್ನು ಹೋಗಲಾಡಿಸಬಹುದು, ಮತ್ತು ತಾಂಬೂಲ ವನ್ನು ಅಗಿಯುವಾಗ ನಾಲಿಗೆ ಕಚ್ಚಿದಲ್ಲಿ, ಎಳ್ಳು ಅಥವಾ ಕಡಲೇಕಾಯಿ ಎಣ್ಣೆಯಿಂದ ಬಾಯಿ ಮುಕ್ಕಳಿಸುವುದರಿಂದ ವಾಸಿಯಾಗುತ್ತದೆ.

೫೮. ಏಲಕ್ಕಿ, ಲವಂಗ, ಕರ್ಪೂರ, ಕೇಸರಿ, ಜಾಯಿಪತ್ರೆ, ಜಾಯಿ ಕಾಯಿ, ಅಡಿಕೆ, ಕೊಬ್ಬರಿ, ಸುಣ್ಣ, ಬಾಲಮೆಣಸು. ವಿಳ್ಳೇದೆಲೆ, ಕಾಚು, ಇವುಗಳಿಂದ ಕೂಡಿದ ತಾಂಬೂಲಕ್ಕೆ, 'ಕರ್ಪೂರವೀಟಕಾ' ಎಂದು ಹೆಸರು.

೫೯. ತಾಂಬೂಲವನ್ನು ಸೇವಿಸುವಾಗ ಬರುವ ಮೊದಲ ರಸವು ಪಿತ್ತಸಂಬಂಧವನ್ನು ಹೆಚ್ಚಿಸುವುದರಿಂದಲೂ, ಮಹಾದೋಷಕರವಾದುದ ರಿಂದಲೂ, ತ್ಯಜಿಸಬೇಕು. (ಉಗಿಯಬೇಕು). ಎರಡನೆಯದು ಅಜೀರ್ಣ ವನ್ನೂ ಭೇದಿಯನ್ನೂ ಉಂಟುಮಾಡುವುದರಿಂದ, ಅದನ್ನೂ ತ್ಯಜಿಸಬೇಕು. ಮುಂದಿನ ರಸಗಳು ಅಮೃತಕ್ಕೆ ಸಮಾನವಾದ್ದರಿಂದ ಅವನ್ನು ಉಪ ಯೋಗಿಸತಕ್ಕದ್ದು.

Rarest Archiver

ಭುಕ್ತ್ವಾನಂತರಂ ತಾಂಬೂಲ ಗ್ರಹಣಕಾಲಂ ।

ಭುಕ್ತ್ವಾನ್ನಂ ಸಲಿಲಂ ಪೀತ್ವಾ ಗೃಹೀತ್ವಾ ಬಹು ಭೇಷಜಂ ।
ಪ್ರತೀಕ್ಷ್ಯ ಘಟಿಕಾಮೇಕಾಂ ತಾಂಬೂಲಂ ಭಕ್ಷಯೇನ್ನರಃ ॥ ೬೦ ॥

ತಾಂಬೂಲಂ ನೈವ ಸೇವೇತ ಕ್ಷೀರಂ ಪೀತ್ವಾತು ಮಾನವಃ ।
ಯಾವತ್ಸು ಸ್ವದತೇ ಕ್ಷೀರಂ ತಾವದೇವೇತಿ ನಿರ್ಣಯಃ ॥ ೬೧ ॥

ಪಥ್ಯಂ ಸುಪ್ತೋತ್ಥಿತೇ ಭುಕ್ತೇ ಸ್ನಾತೇ ವಾಂತೇ ಚ ಸಂಗರೇ ।
ಸಭಾಯಾಂ ವಿದುಷಾಂ ರಾಜ್ಞಾಂ ಕುರ್ಯಾತ್ತಾಂಬೂಲ
ಚರ್ವಣಂ ॥ ೬೨ ॥

ಇತಿ ವೈದ್ಯರತ್ನೇ ।

ಆಲಸ್ಯ ವಿದ್ರದ್ಯುಪ ಜಿಹ್ವಿಕಾನಾಂ
ಸತಾಲು ದಂತಾರ್ಬುದ ಶೋಣಿತಾನಾಂ ।
ಗಲಾಸ್ಯ ಗಂಡಾಪಚಿತಾಲು ಶೋಷ
ಶ್ಲೇಷ್ಮಾಮಯಾನಾಂ ಚ ಭೃಶಂ ಪ್ರಶಸ್ತಂ ॥ ೬೩ ॥

ಕಾಮಂ ಪ್ರದೀಪಯತಿ ರೂಪಮಭಿವ್ಯನಕ್ತಿ
ಸೌಭಾಗ್ಯಮಾವಹತಿ ವಕ್ತ್ರ ಸುಗಂಧಿತಾ ಚ ।
ಓಜಂ ಕರೋತಿ ಕಫಜಾಂಶ್ಚ ನಿಹಂತಿ ರೋಗಾ
ಸ್ತಾಂಬೂಲಮೇವಮಪರಾಂಶ್ಚ ಗುಣಾನ್
ಕರೋತಿ ॥ ೬೪ ॥

ಗ್ರಹಣಗುಣಾಃ ।
ವರ್ಜ್ಯಾನಿ ।

ತಾಂಬೂಲಂ ಕ್ಷತಪಿತ್ತಾಸ್ರರೂಕ್ಷೋತ್ಕುಪಿತ ಚಕ್ಷುಷಾಂ ।
ವಿಷ ಮೂರ್ಛಾಮದಾರ್ತಾನಾಮಪಥ್ಯಂ ಶೋಷಿಣಾಮಪಿ ॥ ೬೫ ॥

Rarest Archive

ಊಟವಾದ ತರುವಾಯ ತಾಂಬೂಲ ಸ್ವೀಕಾರದ ಕಾಲ.

೬೦. ಊಟವಾದ ತರುವಾಯ, ಸ್ವಲ್ಪ ನೀರನ್ನು ಕುಡಿದು, ಔಷಧಾದಿಗಳನ್ನು ಸ್ವೀಕರಿಸಿ, ಸ್ವಲ್ಪ ಹೊತ್ತಿನ ಅನಂತರ ತಾಂಬೂಲವನ್ನು ಸ್ವೀಕರಿಸತಕ್ಕದ್ದು.

೬೧. ಕ್ಷೀರವನ್ನು ಕುಡಿದಕೂಡಲೇ ತಾಂಬೂಲವನ್ನು ಸ್ವೀಕರಿಸಲಾಗದು. ಆ ಕಾಲವನ್ನು ಕ್ಷೀರದ ರುಚಿಯು ನಾಲಿಗೆಗೆ ತಿಳಿಯುವ ಪರ್ಯಂತವೆಂದು ತಿಳಿಯತಕ್ಕದ್ದು.

೬೨. ಮಲಗಿ ಎದ್ದಕೂಡಲೇ ಭೋಜನವಾದ ತರುವಾಯ, ಸ್ನಾನದ ತರುವಾಯ, ವಾಂತಿಯಾದ ಕೂಡಲೇ ಮತ್ತು ವಿದ್ವಾಂಸರ, ರಾಜರ ಸಭೆಯಲ್ಲಿಯೂ ತಾಂಬೂಲವನ್ನು ಸೇವಿಸತಕ್ಕದ್ದು.

ಈ ರೀತಿಯಾಗಿ ವೈದ್ಯರತ್ನದಲ್ಲಿ ಹೇಳಿದೆ.

೬೩. ಆಲಸ್ಯ(ಜಡತ್ವ), ಗಂಟುಗಳು, ನಾಲಗೆಯ ವ್ರಣಗಳು, ಬಾಯಿಯ ಒಳಭಾಗಗಳಲ್ಲೂ ಹಲ್ಲುಗಳಲ್ಲೂ ರಕ್ತ ಸುರಿಯುವುದೂ, ಕುತ್ತಿಗೆ, ಬಾಯಿ, ದವಡೆಗಳ ವ್ರಣಗಳಿಗೂ, ಕ್ಷಯರೋಗಕ್ಕೂ ಶ್ಲೇಷ್ಮ ಸಂಬಂಧವಾದ ರೋಗಗಳಿಗೂ (ಇದು) ಹೆಚ್ಚಾಗಿ ಪ್ರಶಸ್ತವಾದುದು.

೬೪. ಕಾಮವನ್ನು ಹೆಚ್ಚಿಸುತ್ತದೆ. ರೂಪವನ್ನು ಕೊಡುತ್ತದೆ. ಸೌಭಾಗ್ಯವನ್ನೂ ಮತ್ತು ಮುಖಕ್ಕೆ ಸೌಗಂಧ್ಯವನ್ನೂ ಕೊಡುತ್ತದ: ಅಲ್ಲದೆ ಕಾಂತಿಯನ್ನು ಉಂಟುಮಾಡುತ್ತದೆ. ಕಫ, ಸಂಬಂಧವಾದ ರೋಗಗಳನ್ನು ನಾಶಮಾಡುವುದಲ್ಲದೆ, ಇನ್ನೂ ಅನೇಕ ಗುಣಗಳನ್ನುಂಟು ಮಾಡುತ್ತದೆ.

ಇವನ್ನು ತೆಗೆದುಕೊಳ್ಳುವುದರಿಂದಾಗುವ ಗುಣಗಳು.

(ಬಿಡತಕ್ಕವು)

೬೫, ಬಾಯಿ ಹುಣ್ಣು ಇರುವವರೂ. ಪಿತ್ತ ಹೆಚ್ಚಾಗಿರುವವರೂ, ಕಣ್ಣುನೋವು ಇರುವವರೂ, ವಿಷವೇರಿದಾಗಲೂ, ಮೂರ್ಛಾವಸ್ಥೆಯಲ್ಲಿಯೂ, ಮತ್ತೇರಿದ ಮನುಷ್ಯರೂ, ಕ್ಷಯರೋಗವುಳ್ಳವರೂ, ಇವರುಗಳಿಗೆ ತಾಂಬೂಲವು ಅಪಥ್ಯವೆನಿಸುತ್ತದೆ,

Rarest Archiver

ವಿಣ್ಮೂತ್ರಾ ಚೋ(ಸೊ)ಪವಾಸಾರ್ತೋ ಮೇಹೀ ಮುಖಗದೀ
ಕ್ಷಯಿೀ
ಭೂತಾಪಸ್ಮಾರಕೀ ಕಷ್ಟೀ ತಿಮಿರಿ ಕೃಚ್ಛ್ರಹೃದ್ಗದೀ ॥ ೬೬ ॥

ತಾಂಬೂಲಂ ನೈವಸೇವೇತ ಸುವಿರಕ್ತ : ಕ್ಷುಧಾತುರಃ ।
ಪ್ರಮೇಹೀ ಮೂತ್ರಕೃಚ್ಛ್ರೀಚ ಕ್ಷೀರಮಭ್ಯವಹೃತ್ಯಚ ॥ ೬೭ ॥

ತದ್ವಕ್ತ್ರಪಾಕೇ ನಯನ ಪ್ರಮಾಥೇ ಶಿರೋವಿಕಾರೇ
ಮದಿರಾತ್ಯಯೇಚ ।
ವಿಷೇಕ್ಷಯೇ ಶೋಣಿತ ಪಿತ್ತರೋಗೇ ವ್ರಣೇ ಹಿ ತಂ ನೊ ತರುಣ
ಜ್ವರಾರ್ತೇ ॥ ೬೮ ॥

ದಂತ ದೌರ್ಬಲ್ಯ ಪಾಂಡುತ್ವ ನೇತ್ರರೋಗ ಬಲಕ್ಷಯಾನ್ ।
ವಿತನೋತ್ಯಾಸ್ಯ ರೋಗಾಂಶ್ಚ ತಾಂಬೂಲಮತಿಸೇವಿತಮ್ ॥ ೬೯ ॥

ಅಕ್ಷಿರೋಗೇ ಕ್ಷಯೇ ಪಾಂಡುರೋಗೋತ್ರಮಯು ವ್ರನಿ ಚ ।
(ಗಾಂತ್ರಾಮಯುವಾನಪಿ)
ಅಪಸ್ಮಾರೀ ಶ್ವಾಸಕಾಸೀ ಹೃದ್ರೋಗೀ ರಕ್ತ ಪಿತ್ತಕೀ ॥ ೭೦ ॥

ಗ್ರಹಣೀವಾನತೀಸಾರೇ ತಾಂಬೂಲಂ ಪರಿವರ್ಜಯೇತ್ ।
ವಿದ್ಯಾಕಾಮೋ ದಿವಾ ರಾತ್ರೌ ತಾಂಬೂಲಂ ನ ತು ಖಾದ
ಯೇತ್ ॥ ೭೧ ॥

ಬ್ರಹ್ಮಚಾರೀ ಯತಿಶ್ಚೈವ ವಿಧವಾ ಚ ರಜಸ್ವಲಾ ।
ಪ್ರತ್ಯೇಕಂ ಮಾಂಸತುಲ್ಯಂ ತಂ (ತನ್) ಮಿಲಿತಂ ಸುರಯಾ
ಸಮಂ ॥ ೭೨ ॥

Rarest Archiver

೧೬. ವಿಷ, ಮೂರ್ಛೆ, ಉಪವಾಸಗಳಿಂದ ಬಳಲಿದವರು, ಮೇಹ ರೋಗವುಳ್ಳವರು, ಕ್ಷಯರೋಗವುಳ್ಳವರು, 'ತಿಮಿರಿ' ಎಂಬ ಕಣ್ಣು ರೋಗವುಳ್ಳವರು, ಮಲಮೂತ್ರ ಸಂಬಂಧ ಮತ್ತು ಹೃದಯ ಸಂಬಂಧದ ರೋಗವುಳ್ಳವರು, ಭೂತ, ಅಪಸ್ಮಾರ ರೋಗ ಸಂಬಂಧವುಳ್ಳವರೂ ತಾಂಬೂಲವನ್ನು ಸೇವಿಸಲಾಗದು.

೧೭. ವಿರಕ್ತನಾದವನು, ಹಸಿವೆಯಾದವನು, ಮೇಹರೋಗವುಳ್ಳವನೂ, ಮೂತ್ರ ರೋಗವುಳ್ಳವನೂ, ಕ್ಷೀರಪಾನ ಮಾಡಿದ ಕೂಡಲೇ ತಾಂಬೂಲವನ್ನು ಸೇವಿಸಲಾಗದು.

೧೮. ತಾಂಬೂಲವು ಬಾಯಿಹುಣ್ಣಾದಾಗಲೂ, ಕಣ್ಣು ನೋವಾದಾಗಲೂ ತಲೆನೋವು ಮುಂತಾದ ಶಿರೋವಿಕಾರವಾದಾಗಲೂ ಹೆಂಡವನ್ನು ಹೆಚ್ಚಾಗಿ ಉಪಯೋಗಿಸಿದಾಗಲೂ, ವಿಷಸಂಬಂಧವಿರುವಾಗಲೂ (ವಿಷ ಸಂಬಂಧವಾದ ಔಷಧವನ್ನು ಉಪಯೋಗಿಸಿದಾಗಲೂ,) ಕ್ಷಯರೋಗವಿದ್ದಾಗಲೂ, ರಕ್ತಪಿತ್ತರೋಗವಿರುವಾಗಲೂ, ಗಾಯವಾಗಿರುವಾಗಲೂ, ಜ್ವರವು ಹೆಚ್ಚಾಗಿರುವಾಗಲೂ ಅಹಿತವು.

೧೯. ತಾಂಬೂಲವನ್ನು ಅತಿಯಾಗಿ ಸೇವಿಸಿದಲ್ಲಿ ಹಲ್ಲುಗಳ ದೌರ್ಬಲ್ಯ, ಪಾಂಡುರೋಗ, ನೇತ್ರರೋಗ, ಶಕ್ತಿಕುಂದುವಿಕೆ, ಮತ್ತು ಮುಖರೋಗ ಇವುಗಳನ್ನು ಉಂಟುಮಾಡುತ್ತದೆ.

೨೦. ಕಣ್ಣುನೋವು, ಕ್ಷಯರೋಗ, ಪಾಂಡುರೋಗ, ಕರುಳು ಸಂಭಂಧವಾದ ರೋಗ, ಅಪಸ್ಮಾರ ರೋಗ, ಶ್ವಾಸಕಾಸ ರೋಗ. ಹೃದಯ ರೋಗ ಪಿತ್ತರೋಗವಿರುವವರು ತಾಂಬೂಲವನ್ನು ಸೇವಿಸಬಾರದು.

೨೧, ಭೇದಿಯಾಗುವಾಗಲೂ, ಅತಿಸಾರವುಂಟಾದಾಗಲೂ, ತಾಂಬೂಲವನ್ನು ಬಿಡತಕ್ಕದ್ದು. ವಿದ್ಯಾರ್ಥಿಯು ಹಗಲಾಗಲೀ, ರಾತ್ರಿಯಾಗಲೀ ತಾಂಬೂಲವನ್ನು ಸೇವಿಸಬಾರದು.

೨೨. ಬ್ರಹ್ಮಚಾರಿಯೂ, ಯತಿಯೂ, ವಿಧವೆಯೂ, ರಜಸ್ವಲೆಯೂ ತಾಂಬೂಲವನ್ನು ಸ್ವೀಕರಿಸಲಾಗದು. ತಾಂಬೂಲದ ಪ್ರತಿಯೊಂದು ಭಾಗವೂ ಮಾಂಸಕ್ಕೆ ಸಮವಾದುದು. ಒಟ್ಟು ಕೂಡಿದ ತಾಂಬೂಲವು ಹೆಂಡಕ್ಕೆ ಸಮಾನವಾದುದು.

Rarest Archive

ಪ್ರತಿಪ್ರಸವ :

ನೇತ್ರರೋಗಹರಂ ರುಚ್ಯಂ ಶ್ಲೇಷ್ಮರೋಗಹರಂ ಶುಭಂ ।
ನಾಗರಸ್ವರಸಂ ಪಥ್ಯಂ ತಾಂಬೂಲಂ ಘನಸಾರಯುಕ್ ॥ ೭೩ ॥

ಪತ್ರಂ ಫಲಂ ಖದಿರಂ ಚ ಚೂರ್ಣಂಚೈವ ಚತುರ್ಥಕಂ ।
ಪಂಚಮಂ ತು ಮುಖಂ ವಧ್ವಾ ರಾಗಃ ಷಷ್ಠ ಉದಾಹೃತಃ ॥ ೭೪ ॥

ಷಡಂಗಮಿತಿದಂ (ತತ್) ಪ್ರೋಕ್ತಂ ಷಡೈಶ್ವರ್ಯ ಪ್ರದಾಯಕಂ ।
ಷಡೈಶ್ವರ್ಯಾದುಲ್ಲವಶ್ಯೇ ( ದುಃಖವಷ್ಯಾ - ದುಪವಾಸೇ )–ತತ್ರ
ಲಕ್ಷ್ಮೀರ್ನಿರಂತರಂ ॥ ೭೫ ॥

ಪಾನೀಯಂ ಸ್ಯಾನ್ನ ಸೇವ್ಯಂ ವಿಷಮಿವ ಗಗ(ರ)ದಂ ಮೈಥುನಾಂತೇ
ಮುಹೂರ್ತಂ
ಪ್ರಸ್ರಾವಾಂತೇ ಮುಹೂರ್ತಂ ಫಲದಶಕಮಿತಂ ಪಾಯಸೇ ಭೋಜ
ನೇಚ ।
ಅದ್ಧ್ವಾಂತೇ ಚೌಷಧಾಂತೇ ತ್ರಿ ಘ ಟಿ ಪರಿಮಿತಂ ವರ್ಜಯೇತ್
ಅಂಬುಪಾನಂ ।
ಧಾರೋಷ್ಣಾಂತೇಽ ವರ್ಧಯಾಮಂ ಫಲದಶಕಮಿತಂ ತಾಂಬೂಲಂ
ಮೂಲಕಾಂತೇ ॥ ೭೬ ॥

ಪರ್ಣಾನಿ ಪೂಗ ಖಂಡಾನಿ ಚೂರ್ಣಂಚ ಖದಿರಂ ಶುಭಂ ।
ಕರ್ಪೂರೈಲಾಲವಂಗಾದಿ ಜಾತೀಫಲ ತಜತ್ವಚಃ ॥ ೭೭ ॥

ಚತುರ್ಭಿಮಿಲಿತೈರ್ದ್ರವ್ಯೈಸ್ತಾಂಬೂಲಂ ಮಮವಲ್ಲಭೇ
ಮೃಗನಾಭಿರ್ಮರೀಚಾನಿ ಮುರಮಾಂಸನಖಾಂಸ್ತಥಾ ॥ ೭೮ ॥

Rarest Archive

## ರಿಯಾಯತಿಗಳು

೭೩. ನೇತ್ರರೋಗವನ್ನು ಪರಿಹರಿಸುವುದೂ, ರುಚಿ ಜ್ಞಾನವನ್ನುಂಟುಮಾಡುವುದೂ, ಶ್ಲೇಷ್ಮವನ್ನು ಕಳೆಯುವುದೂ, ರಸಯುಕ್ತವೂ ಆದ ವಿಳ್ಳೇದೆಲೆ ಮತ್ತು ಪಚ್ಚಕರ್ಪೂರದಿಂದ ಕೂಡಿದ ತಾಂಬೂಲವು ಪಥ್ಯವು.

೭೪. ವಿಳ್ಳೇದೆಲೆ, ಅಡಿಕೆ, ಕಾಚು, ಸುಣ್ಣ ಈ ನಾಲ್ಕು, ಐದನೆಯದಾಗಿ ಸ್ತ್ರೀಯರ ಮುಖವೂ, ಆರನೆಯದು ಪ್ರೀತಿಯೂ, ಇವು ಷಡಂಗಗಳೆಂದು ಉದಾಹರಿಸಬಹುದು.

೭೫. ಈ ಷಡಂಗಗಳು ಷಡೈಶ್ವರ್ಯಗಳನ್ನು ಕೊಡತಕ್ಕುದೆಂದು ಪ್ರಸಿದ್ಧಿಯಾಗಿವೆ. ಷಡೈಶ್ವರ್ಯವಿದ್ದಲ್ಲಿ ನಿರಂತರವಾಗಿ ಲಕ್ಷ್ಮಿಯು ಅಲ್ಲಿಯೇ ವಾಸಮಾಡುತ್ತಾಳೆ.

೭೬. ನೀರು ಕುಡಿದ ಕೂಡಲೇ ತಾಂಬೂಲವು ವಿಷದಂತೆ ಸೇವಿಸಬಾರದು. ಸಂಭೋಗಾನಂತರದಲ್ಲಿಯೂ, ಮಲಮೂತ್ರ ವಿಸರ್ಜನಾನಂತರದಲ್ಲಿಯೂ, ಒಂದು ಮುಹೂರ್ತ (೬೦ನಿಮಿಷ) ಕಾಲದವರೆಗೂ ತಾಂಬೂಲವನ್ನು ಸೇವಿಸಬಾರದು. ಪಾಯಸ ಭೋಜನಾನಂತರ ಔಷಧ ಸೇವನೆಯ ತರುವಾಯು, ಮತ್ತು ನೀರು ಕುಡಿದಮೇಲೆ ೭೨ ನಿಮಿಷಗಳು ತಾಂಬೂಲ ಸೇವಿಸಬಾರದು. ಬಿಸಿನೀರು ಸ್ನಾನವಾದ ೬೦ ನಿಮಿಷಗಳು ತಾಂಬೂಲವನ್ನು ಸೇವನೆ ಮಾಡಲಾಗದು.

## ಐದು ನಿಮಿಷ ತಾಂಬೂಲ

೭೭. ವಿಳ್ಳೇದೆಲೆ, ಅಡಿಕೆಪುಡಿ, ಸುಣ್ಣ, ಕಾಚು, ಕರ್ಪೂರ, ಯಾಲಕ್ಕಿ ಲವಂಗ, ಜಾಯಿಕಾಯಿ, ದಾಲ್ಚಿನ್ನಿ, ಇವಿಷ್ಟೂ ತಾಂಬೂಲಕ್ಕೆ ಶುಭಕರವಾದುದು. ಮತ್ತು

೭೮. ಕಸ್ತೂರಿ, ಬಾಲಮೆಣಸು, 'ಮುರಮಾಂಸ' ಮತ್ತು 'ನಖ' ಇವುಗಳಿಂದ (ಈ ನಾಲ್ಕರಿಂದಲೂ) ಕೂಡಿದ ತಾಂಬೂಲವು (ಎಲೆಪ್ರಿಯೆ) ನನಗೆ ಪ್ರಿಯವಾದುದೆಂದು ತಿಳಿ.

Rarest Archive

ಅಥ ತಾಂಬೂಲ ಪತ್ರ ನಾನಾ ಜಾತಿಗುಣಾ ದೇಶ ವಿಶೇಷೇಣ ।

ಅಥ ಭವತಿ ನಾಗವಲ್ಲೀ ತಾಂಬೂಲೀ ಪರ್ಣ (ಫಣಿ) ಲತಾ
ಚ ಸಪ್ತ ಶಿರಾ ।
ಪರ್ಣಲತಾ ಫಣಿವಲ್ಲೀ ಭುಜಗಲತಾ ಭಕ್ಷ್ಯವಲ್ಲೀ ಚ ॥ ೭೯ ॥

ಸಾಚ ಶ್ರೀವಾಟಾಮ್ಲವಾಟಾದಿ ನಾನಾ ಗ್ರಾಮಸ್ತೋಮಾ
ಖ್ಯಾನ ಭೇದಾದ್ವಿಭಿನ್ನಾ ।
ಏಕಾಪ್ಯೇಷಾ ದೇಶಮೃತ್ಸ್ನಾವಿಶೇಷಾನ್ನಾನಾಕಾರ್ಯಂ
ಯಾತಿ ಕಾರ್ಯೇ ಗುಣೇ ಚ ॥ ೮೦ ಅ ॥

ಸಾಧಾರಣ ನಾಮಗುಣಾಃ ।

ನಾಗವಲ್ಲೀ ಕಟುಸ್ತೀಕ್ಷ್ಣಾ ತಿಕ್ತಾ ಪೀನಸ ವಾತಜಿತ್ ।
ಕಫ ಕಾಸಹರಾ ರುಚ್ಯಾದಾಹ ಕೃದ್ದೀಪನೀ ಪರಾ ॥ ೮೦. ಆ ॥

ಇತಿ ಗುಣಾಃ

ಶ್ರೀವಾಟೀ ಮಧುರಾ ತೀಕ್ಷ್ಣಾ ವಾತಪಿತ್ತ ಕಫಾಪಹಾ ।
ರಸಾಢ್ಯಾ ಚ ಸರಾ ರುಚ್ಯಾ ವಿಪಾಕೇ ಶಿಶಿರಾ ಸ್ಮೃತಾ ॥ ೮೧ ॥

ಶ್ರೀವಾಟಪರ್ಣಂ ।

ಸ್ವಾದಮ್ಲವಾಟೀ (ಸ್ಯಾದಮ್ಲವಾಟೀ) ಕಟುಕಾಮ್ಲತಿಕ್ತಾ
ರೂಕ್ಷಾ ತತೋ (ಥೊ) ಷ್ಣಾ ಮುಖಪಾಕಕರ್ತ್ರೀ ।
ವಿದಾಹ ಪಿತ್ತಾಸ್ರವಿ ಕೋಪನೀ ಚ
ವಿಷ್ಟಂಬದಾ ವಾತನಿಬರ್ಹಿಣೀ ಚ ॥ ೮೨ ॥

ಅಂಬಾಡಪರ್ಣಂ ।

ಸಪ್ತಲೀ(ಸೀ) ಮಧುರಾ ತೀಕ್ಷ್ಣಾ ಕಟು(ಟೂ) ರೂಕ್ಷಾ ಚ ಪಾಚನೀ
ಕುಷ್ಠೋದರಾಽಽದ್ಮಾನಂ ನಾಶಯೇ ದ್ರುಚಿದೀಪನೀ ॥ ೮೩ ॥

ಸಪ್ರನೀ ಪರ್ಣಂ

Rarest Archiver

### (ನಾನಾಜಾತಿಯು, ಬೇರೆ ಬೇರೆ ದೇಶದ ವಿಳ್ಯೇದೆಲೆಯ ಗುಣ.)

೭೯. ನಾಗವಲ್ಲೀ, ತಾಂಬೂಲ್ಲೀ, ಪರ್ಣಲತಾ, ಫಣಿಲತಾ, ಸಪ್ತಶಿರಾ, ಫಣಿವಲ್ಲೀ, ಭುಜಗಲತಾ, ಭಕ್ಷ್ಯವಲ್ಲೀ ಎಂದು ವಿಳ್ಯೇದೆಲೆಯ ಹೆಸರುಗಳು.

೮೦. (ಅ) ಮೇಲೆ ಹೇಳಿದ ಆ ವಿಳ್ಯೇದೆಲೆಯು ಶ್ರೀವಾಟ, ಆಮ್ಲ ವಾಟವೇ ಮುಂತಾದ ಅನೇಕ ಗ್ರಾಮಗಳ, ದೇಶಗಳ ಭೇದದಿಂದ ಬೇರೆ ಬೇರೆ ಹೆಸರುಗಳನ್ನು ಹೊಂದಿರುತ್ತದೆ. ಮತ್ತು ದೇಶ, ಮಣ್ಣು, ಇವುಗಳ ಗುಣ ವಿಶೇಷದಿಂದ ಶರೀರದಲ್ಲಿ ನಾನಾವಿಧವಾದ ಫಲವನ್ನುಂಟುಮಾಡುತ್ತದೆ.

೮೦. (ಆ) ವಿಳ್ಯೇದೆಲೆಯು ಖಾರವಾಗಿಯೂ, ಕಹಿಯಾಗಿಯೂ ಉಷ್ಣಕರವಾಗಿಯೂ ಇರುತ್ತದೆ. ಮತ್ತು 'ಪೀನಸ' ಎಂಬ ವಾಸನೆ ಅರಿಯಲು ಆಗುವ ಅಸಮರ್ಥತೆಯನ್ನೂ, ವಾಯುವನ್ನೂ, ಕಫ, ಕಾಸ, ರೋಗಗಳನ್ನೂ ಕಳೆಯುತ್ತದೆ. ನಾಲಿಗೆಗೆ ರುಚಿಯನ್ನು ತಿಳಿಯುವ ಸಾಮರ್ಥ್ಯವನ್ನುಂಟುಮಾಡುತ್ತದೆ. ಬಾಯಾರಿಕೆಯುಂಟುಮಾಡುತ್ತದೆ: ಹಾಗೂ ಕಾಮೋದ್ದೀಪಕವಾಗಿಯೂ ಇರುತ್ತದೆ.

### ಶ್ರೀವಾಟ ಎಲೆಯ ಲಕ್ಷಣವು

೮೧. ಶ್ರೀವಾಟಯಲ್ಲಿರತಕ್ಕಂಥ ವಿಳ್ಯೇದೆಲೆಯು, ಮಧುರವಾಗಿಯೂ, ಉಷ್ಣಕಾರಕವಾಗಿಯೂ, ವಾತ, ಪಿತ್ತ, ಕಫಗಳನ್ನು ಪರಿಹಾರ ಮಾಡುವುದಾಗಿಯೂ, ರಸಕರವಾಗಿಯೂ ಮತ್ತು ರುಚಿಕರವಾಗಿಯೂ, ಪರಿಣಾಮಾನಂತರದಲ್ಲಿ ತಂಪಾದುದಾಗಿಯೂ ಇರುತ್ತದೆ.

### ಅಮ್ಲವಾಟದ (ಅಂಬಾಡಿ ಎಲೆಯು) ಲಕ್ಷಣವು

೮೨. ಅಂಬಾಡಿ ಎಲೆಯು ಖಾರ, ಹುಳಿ, ಕಹಿರಸವುಳ್ಳದ್ದೂ, ತೀಕ್ಷ್ಣವೂ, ಬಾಯಿಶುದ್ಧಿಯನ್ನುಂಟು ಮಾಡುವಂತಾದ್ದೂ. ದಾಹ, ಪಿತ್ತ ರಕ್ತ ಇವುಗಳ ಒತ್ತಡವನ್ನು ಹೆಚ್ಚಿಸುವುದೂ ಆದರೂ, ಮಲಕಟ್ಟು ವುದು ವಾತವನ್ನು ಕಳೆಯುವುದೂ ಆಗಿರುತ್ತದೆ.

### ಸಪ್ತನೀ ಎಲೆಯ ಲಕ್ಷಣವು

೮೩. ಸಪ್ತನೀ ವಿಳ್ಯೇದೆಲೆಯು ಮಧುರವೂ, ತೀಕ್ಷ್ಣವೂ, ಖಾರವೂ, ಜೀರ್ಣಕಾರಿಯೂ, ಕಠಿಣವೂ, ಆಗಿದ್ದು, ಕುಷ್ಠ ಮತ್ತು ಉದರ ರೋಗಗಳನ್ನು ಪರಿಹರಿಸುವುದೂ, ರುಚಿಯನ್ನುಂಟುಮಾಡತಕ್ಕದ್ದೂ ಮತ್ತು ಹೊಟ್ಟೆಯುಬ್ಬರವನ್ನು ನಾಶಮಾಡತಕ್ಕದ್ದೂ ಆಗಿದೆ,

Rarest Archive

ಅನ್ಯತ್ರ ।

ಗುಹಾಗರೇ ಸಪ್ತಶಿರಾ ಪ್ರಸಿದ್ಧಾ
ತತ್ಪರ್ಣ ಜೀರ್ಣಾ (ಸಾ ಜೀರ್ಣಪರ್ಣಾ) ಽತಿರಸಾ (ಽತಿ) ರುಚ್ಯಾ ।
ಸುಗಂಧಿ ತೀಕ್ಷ್ಣಾ ಮಧುರಾತಿ ಹೃದ್ಯಾ
ಸಂದೀಪನೀ ಪುಂಸ್ತ್ವಕರಾತಿ ರುಚ್ಯಾ ॥ ೮೪ ॥

ಗುಹಾಗರ ಪರ್ಣಮ್ ।

ನಾಮ್ನಾಯಾಮ್ಲರಸಾ ಸುತೀಕ್ಷ್ಣ ಮಧುರಾ ರುಚ್ಯಾ, ಹಿಮಾ, ದಾಹನುತ್
ಪಿತ್ತೋದ್ರೇಕ ಹರಾ ಸುದೀಪನಕರೀ ಭಲ್ಯಾ ಮುಖಾಮೋದಿನೀ ।
ಶ್ರೀ ಸೌಭಾಗ್ಯವಿವರ್ಧಿನೀ ಮದಕರೀ ರಾಜ್ಞಾಂ ಸದಾವಲ್ಲಭಾ
ಗುಲ್ಮಾದ್ಯಾನ ವಿಭಂದಜಿಚ್ಚ ಕಥಿತಾ ಸಾ ಮಾಲವೇ ತುಸ್ಮೃತಾ ॥ ೮೫ ॥

ಮಾಲವದೇಶ ಪರ್ಣಂ ।

ಅಂಘ್ರ(ಂಧ್ರೇ)ಪು(ಸ)ಷ್ಕ(ಟು)ಲಿಕಾ ನಾಮ ಕಷಾಯೋಷ್ಣಾ ಕಟುಸ್ತಥಾ ।
ಮಲಾಪಕರ್ಷಾ ಕಂಠಸ್ಯ ಪಿತ್ತಕೃದ್ವಾತನಾಶಿನೀ ॥ ೮೬ ॥

ಆಂಧ್ರದೇಶೇ ಪಟುಕುಲಿಕುಲಿ ಪರ್ಣಂ ।.

ದ್ವೈ(ಹೊ)ಸಣೀ ಕಟುಕಾ ತೀಕ್ಷ್ಣಾ ಹೃದ್ಯಾಧೀರ್ಘದಲಾ ಚ ಸಾ ।
ಕಫ ವಾತ ಹರಾ ರುಚ್ಯಾ ಕಟುರ್ದೀಪನ ಪಾಚನೀ ॥ ೮೭ ॥

ಹೊಸಣೀಯ ಪರ್ಣಂ ।

Rarest Archiver

## ಗುಹಾಗರ ಎಲೆಯ ಗುಣಗಳು

೮೪. ಗುಹಾಗರದಲ್ಲಿ 'ಸಪ್ತಶಿರಾ' ಎಂದು ಪ್ರಸಿದ್ಧವಾದ ಎಲೆಯು ಅತಿರಸವತ್ತಾಗಿಯೂ, ರುಚಿಕರವಾಗಿಯೂ, ಸುಗಂಧವಾಗಿಯೂ ಜೀರ್ಣವನ್ನುಂಟುಮಾಡುವುದಾಗಿಯೂ, ತೀಕ್ಷ್ಣವಾಗಿಯೂ ಇರುವುದಲ್ಲದೇ ಕಾಮ, ಬಲ ಇವುಗಳನ್ನುಂಟುಮಾಡುವುದಾಗಿರುತ್ತದೆ.

## ಮಾಲವದೇಶದ ಎಲೆಯ ಗುಣಗಳು

೮೫. 'ಅಮ್ಲರಸಾ' ಎನ್ನುವ ವಿಳ್ಳೇದೆಲೆಯು ತೀಕ್ಷ್ಣವೂ, ಮಧುರವೂ, ರುಚಿಯನ್ನುಂಟುಮಾಡುವುದೂ, ಶೀತಲವೂ, ದಾಹಪರಿಹಾರಕವೂ, ಪಿತ್ತಪರಿಹಾರಕವೂ, ಕಾಮೋದ್ದೀಪನ, ಬಲ, ಮುಖಸುವಾಸನೆಗಳನ್ನುಂಟುಮಾಡುವುದಾಗಿಯೂ, ಸ್ತ್ರೀಸೌಭಾಗ್ಯಕ್ಕೆ ಮದವನ್ನುಂಟುಮಾಡುವುದರಿಂದ, ರಾಜರಿಗೆ ವಿಶೇಷಪ್ರಿಯವು. ಗುಲ್ಮಾದಿ ರೋಗಗಳನ್ನು ಪರಿಹರಿಸುವಂತಾದ್ದು, ಈ ರೀತಿ ಮಾಲವ ದೇಶದ ವಿಳ್ಳೇದೆಲೆಯ ಲಕ್ಷಣಗಳು.

## ಆಂಧ್ರದೇಶದ ಪಟುಕುಲೀ ಎಲೆಯ ಲಕ್ಷಣವು

೮೬. ಆಂಧ್ರದೇಶದ ಎಲೆಯು ಕಷಾಯ ರಸವುಳ್ಳದ್ದು, ಖಾರವಾಗಿಯೂ, ಉಷ್ಣಕರವಾಗಿಯೂ, ಮಲವಿಸರ್ಜನೆಗೆ ಸಹಾಯಕರವೂ, ಕಂಠದಲ್ಲಿನ ಪಿತ್ತವನ್ನು, ವಾತವನ್ನು ನಾಶಮಾಡತಕ್ಕದ್ದೂ ಆಗಿದೆ.

## ಹೊಸಣೀ ಎಲೆಯ ಗುಣಗಳು

೮೭. 'ಹೊಸಣೀ' ಎಲೆಯು ಖಾರವಾಗಿಯೂ, ತೀಕ್ಷ್ಣವಾಗಿಯೂ ಮನೋಹರವಾಗಿಯೂ, ದೊಡ್ಡ ಎಲೆಯುಳ್ಳದ್ದಾಗಿಯೂ, ಕಫ ವಾತಗಳನ್ನು ಪರಿಹರಿಸುವುದಾಗಿಯೂ, ರುಚಿಕರವೂ, ಕಾಮೋದ್ದೀಪಕವೂ, ಪಾಚಕವೂ ಆಗಿರುತ್ತದೆ.

Rarest Archiver

ಸದ್ಯಃ ಶೊ(ಧ್ಯಸ್ರೋ) (ಟಿ)ತ ಭಕ್ಷಿತಂ ಮುಖರುಜಾಜಾಡ್ಯಾ
ಪ(ವ)ಹಂ ದೋಷಕೃ
ದ್ದಾಹಾ (ದ್ವಾತಾ) ರೋಚಕ ರಕ್ತದಾಹ ಮಲಕೃದ್ ವಿಷ್ಟಂಬ
ವಾಂತಿಪ್ರದಂ ।
ಯದ್ಭೂಯೋ ಜನ (ಲ) ಪಾನಯೊ (ಪೊ) ಷಿತರಸಂ
ತಚ್ಚೋಚ್ಚಿ(ರಾ)ನ್ನೋ (ತ್ರೋ)ಚಿ(ಟ)ತಂ
ತಾಂಬೂಲೀ ದಲಮುತ್ತಮಂ ಚ ರುಚಿರಂ ಭಲ್ಯಂ ತ್ರಿದೋಷಾ
ರ್ತಿನುತ್ ॥ ೮೮ ॥

ಕೃಷ್ಣಶುಭ್ರಪರ್ಣ ಗುಣಾಃ ।

ಕೃಷ್ಣಂ ಪರ್ಣಂ ತಿಕ್ತಮುಷ್ಣಂ ಕಷಾಯಂ ।
ದತ್ತೇ ದಾಹಂ ವಕ್ತ್ರಜಾಡ್ಯಂ ಮಲಂಚ ।
ಶುಭ್ರಂ ಪರ್ಣಂ ಶ್ಲೇಷ್ಮವಾತಾಮಯಘ್ನಂ ।
ಪಥ್ಯಂ ರುಚ್ಯಂ ದೀಪನಂ ಪಾಚನಂ ಚ ॥ ೮೯ ॥

ಶಿರಾಪರ್ಣಂತು ಶೈಥಿಲ್ಯಂ ಕೃಯರ್ಾತ್ತಸ್ಯಾಸ್ಯ ಹೃದ್ಯವಾಃ (ವಮ್)
ಶೀರ್ಣ(ರ್ಣಂ)ತ್ವಾ(ತ್ವ)ದ್ದೋ(ಗ್ದೋ)ಷದಂ ತಸ್ಯ ಭಕ್ಷಿತೇತು
ಸಿತಾಸಿತೇ ॥ ೯೦ ॥

ತಾಂಬೂಲವಲ್ಲಿಕಾ ಪತ್ರಂ ಕಟುಪಾಕರಸೊ (ಸೌ) ಕ್ಷಣಮ್ ।
ತೀಕ್ಷ್ಣೋಷ್ಣಂ ತುವರಂ ಕ್ಷಾರಂ ದೀಪನಂ ವಿಷದಂ ಸರಂ ॥ ೯೧ ॥

ರೋಚನಂ ಸ್ರಂಸನಂ ಸ್ವರ್ಯಂ ರಕ್ತಪಿತ್ತವಿವರ್ಧನಮ್ ।
ಕಫ ವಾತಾಸ್ರ ದೌರ್ಗಂಧ್ಯ ಕಂಡೂಕ್ಲೇದ ಮಲಾಪಹಂ ॥ ೯೨ ॥

ರುಚಿವಧೂಗಲರತ್ನಮಾಲಾಯಾಂ

Rarest Archiver

## ಕೃಷ್ಣ ಶುಭ್ರ ಎಲೆಯು ಗುಣಗಳು

೮೮. ಎಲೆಯನ್ನು ಬಿಡಿಸಿದ ಕೂಡಲೇ ತಿಂದಲ್ಲಿ ಬಾಯಿರೋಗಗಳನ್ನೂ ಜಡತ್ವವನ್ನುಂಟುಮಾಡುವುದೂ, ವಾಯುವನ್ನು ಹೆಚ್ಚಿಸುವುದೂ, ರುಚಿ ಕೆಡಿಸುವುದೂ, ರಕ್ತದ ಒತ್ತಡ ಮತ್ತು ಉಷ್ಣಗಳನ್ನು ಹೆಚ್ಚಿಸುವುದೂ, ಮಲಕಟ್ಟುವುದೂ, ವಾಂತಿಯನ್ನುಂಟುಮಾಡುವುದೂ ಆಗಿರುತ್ತದೆ. ಆದರೆ ಬಿಡಿಸಿ, ಒದ್ದೆಬಟ್ಟೆಯಲ್ಲಿ ಅಥವಾ ತೇವವಾಗಿಟ್ಟ ಹಳೆಯದಾದ ವಿಳ್ಳೇದೆಲೆಯು ಒಳ್ಳೆಯದು. ಇದು ರುಚಿ ಕೊಡುವುದೂ, ಬಲವನ್ನುಂಟುಮಾಡುವುದೂ, ತ್ರಿದೋಷಗಳಿಂದಾದ ವ್ಯಾಧಿಗಳನ್ನು ಪರಿಹರಿಸುವುದರಲ್ಲಿ ಶ್ರೇಷ್ಠವು.

೮೯. ಕರಿಯ ಎಲೆಯು ಕಹಿ ಮತ್ತು ಒಗರು ಉಳ್ಳದ್ದಾಗಿಯೂ, ಉಷ್ಣಕರವೂ ಅಲ್ಲದೆ ದಾಹವನ್ನೂ ಮುಖರೋಗವನ್ನೂ ಮಲಕಟ್ಟುವಿಕೆಯನ್ನು ಉಂಟುಮಾಡುತ್ತದೆ. ಬಿಳೀ ಎಲೆಯು ಶ್ಲೇಷ್ಮವಾತರೋಗವನ್ನು ಪರಿಹರಿಸುವುದಲ್ಲದೆ, ರುಚಿಯನ್ನೂ, ಕಾಮೋದ್ದೀಪನವನ್ನೂ ಜೀರ್ಣವನ್ನೂ ಹೆಚ್ಚಿಸುವುದರಿಂದ ಹಿತವಾದುದು.

೯೦. ತೊಟ್ಟು ಮತ್ತು ನರಗಳಿಂದ ಕೂಡಿದ ಪೂರ್ತಿ ವಿಳ್ಳೇದೆಲೆಯನ್ನು ತಿಂದಲ್ಲಿ ಬಾಯಿಯಲ್ಲಿಯೂ, ಹೃದಯದಲ್ಲಿಯೂ, ಶಿಥಿಲತೆಯನ್ನು ಉಂಟುಮಾಡುತ್ತದೆ. ಅವುಗಳನ್ನು ಬಿಡಿಸಿದ ಕರಿಯದಾಗಲೀ ಅಥವಾ ಬಿಳಿಯದಾಗಲೀ ಎಲೆಯನ್ನು ತಿಂದಲ್ಲಿ ಯಾವ ದೋಷವನ್ನೂ ಕೊಡುವುದಿಲ್ಲವು.

೯೧. ಬಿಳಿಯ ವಿಳ್ಳೇದೆಲೆಯು ತೀಕ್ಷ್ಣವೂ, ಜೀರ್ಣಕಾರಿಯೂ, ಕಹಿ, ಖಾರ, ಕಷಾಯ, ಉಪ್ಪುರಸವುಳ್ಳದ್ದಾಗಿಯೂ, ದೀಪನವೂ, ಮಲವಿಸರ್ಜನೆಗೆ ಸಹಕಾರಿಯಾಗಿಯೂ ಇರುತ್ತದೆ.

### ರತ್ನಮಾಲಾದಲ್ಲಿ

೯೨. ಮತ್ತು ರುಚಿಯನ್ನುಂಟುಮಾಡುವುದಾಗಿಯೂ, ಜೆವರನ್ನುಂಟುಮಾಡುವುದಾಗಿಯೂ, ಕಂಠಶುದ್ಧಿಕಾರಕವೂ, ರಕ್ತಪಿತ್ತಗಳನ್ನು ಹೆಚ್ಚಿಸುವುದೂ, ಕಫ, ವಾತ. ಬಾಯಿ ದೌರ್ಗಂಧ್ಯ, ಮಲಕಟ್ಟುವಿಕೆ, ನವೆ, ಕೀವುಗಳನ್ನು ಪರಿಹಾರಮಾಡುವುದಾಗಿಯೂ ಇರುತ್ತದೆ.



Rarest Archiver

ಶುಕಪತಗ ಪುರಂಧ್ರೀಘಂಡು (ಗಂಡ) ಪಾಂಡೂನಿ ಚಂಚತ್
ಕನಕ ಕರಕನಾಲೋದ್ಧಾರ ಯತ್ನೋಚಿತಾನಿ।
ತ ಇಹ ಖಲು ಲಭಂತೇ ನಾಗವಲ್ಲೀ ದಲಾನಿ
ತ್ರಿಪುರರಿಪು ಪದಾಗ್ರೇ ಯೇ ನು ಕಮ್ರಾ ವಿನಮ್ರಾಃ || ೯೩ ||

ಜೀರ್ಣಪರ್ಣ ಗುಣಾಃ ವೈದ್ಯರತ್ನೇ

ಪರ್ಣಂ ಪುರಾಣ ಮಕಟು ಕ್ಷುಲ್ಲಕಂ ತನು ಪಾಂಡುರಂ
ವಿಶೇಷಾದ್ಗುಣವದ್ ವೇದ್ಯಮನ್ಯಾದಿ(ನ್ಯದ್ವಿ)ನ ಗುಣಂ ಸ್ಮೃತಂ
|| ೯೪ ||

ಅಥಪೂಗಂ।

ಪೂಗವೃಕ್ಷಸ್ಯ ನಿರ್ಯಾಸೊ ಹಿಮಃ ಸಂಮ್ಮೋಹನೋ ಗುರುಃ
ವಿಪಾಕೇ ಸೋಷ್ಣಕಃ ಕ್ಷಾರಃ ಸಾಮ್ಲೋ ವಾತಘ್ನ ಪಿತ್ತಲಃ || ೯೫ ||

ಖೇಚರೀ ಮಧುರಾ ರುಚ್ಯಾ ಕಷಾಯಾಲ್ಪ ಕಟುಸ್ತಥಾ।
ಪಥ್ಯಾಚ ಕಫವಾತಘ್ನೀ ಸಾರಿಕಾ ಮುಖದೋಷನುತ್ || ೯೬ ||

ಖೇಚರೀ ಭಾಷಾ।

ನೈಲ್ವತಂ ಮಧುರಂ ರುಚ್ಯಂ ಕಂಠಶುದ್ಧಿಕರಂ ಲಘು
ತ್ರಿದೋಷ ಶಮನಂ ದೀಪ್ಯಂ ರಸಾಲಂ ಪಾಚನಂ ಸರಂ|| || ೯೭ ||

ನೈಲ್ವತಂ।

ಗೌಲ್ಯಂ ಗುಹಾರಂ ಶ್ಲಕ್ಷ್ಣಂ (ಚ) ವಿಪಾಕೇ ಕಟು ಪಾಚನಮ್।
ವಿಷ್ಟಂಭ ಜಠರಾಧ್ಮಾನ ಹರಣಂ ದ್ರಾವಣಂ ಲಘು || || ೯೮ ||

ಗುಹಾರ ಚಿಕಣಾ।

Rarest Archive

೯೩. ಹೆಣ್ಣುಗಿಳಿಯ ಗಂಡ ಸ್ಥಳದಂತೆ ಬೆಳ್ಳಗಿರುವ, ಚಿನ್ನದ ಕಳಶದ ಮೇಲಿಟ್ಟು ಪೂಜಿಸಲು ಯೋಗ್ಯವಾದ, ಮನೋಹರವಾದ ವಿಳ್ಯೇದೆಲೆಗಳು, ಯಾರು ಈಶ್ವರನ ಪಾದಾರವಿಂದಗಳಲ್ಲಿ ಅತಿ ನಮ್ರರಾಗಿ ಪೂಜಿಸುವರೊ, ಅಂಥವರಿಗೇ ಲಭಿಸುತ್ತದೆ.

೯೪. ಹಳೇ ವಿಳ್ಯೇದೆಲೆಗಳ ಗುಣಗಳು (ವೈದ್ಯರತ್ನದಲ್ಲಿರುವಂತೆ) : ಹಳೆಯದೂ, ಹಣ್ಣೂ ಆಗಿ, ಬೆಳ್ಳಗಿರತಕ್ಕ ವಿಳ್ಯೇದೆಲೆಯು, ಖಾರವಿಲ್ಲದ್ದಾಗಿಯೂ, ಹೆಚ್ಚಾದ ಗುಣವುಳ್ಳದ್ದಾಗಿಯೂ, ಇರುತ್ತದೆ. ಹೊಸದಾಗಿದ್ದಲ್ಲಿ ಗುಣಗಳು ಕಡಿಮೆಯಾಗಿರುತ್ತವೆ.

## ಅಡಿಕೆಯ ಭೇದ ಮತ್ತು ಗುಣಗಳು

೯೫. ಅಡಿಕೆಯುರಸವು ಶೀತಲವೂ, ಮೋಹಕವೂ, ಕ್ಷಾರಾಮ್ಲವುಳ್ಳದ್ದು. ಅಲ್ಲದೆ ಪರಿಣಾಮದಲ್ಲಿ ಉಷ್ಣವನ್ನುಂಟುಮಾಡಿ, ವಾತವನ್ನು ಕಡಿಮೆ ಮಾಡುತ್ತದೆ. ಆದರೆ ಪಿತ್ಥವನ್ನು ಹೆಚ್ಚಿಸುತ್ತದೆ.

೯೬. 'ಖೇಚರಿ' ಎಂಬ ಅಡಿಕೆಯು ಮಧುರವೂ, ರುಚಿಕರವೂ, ಒಗರು ಮತ್ತು ಸ್ವಲ್ಪ ಕಹಿಯುಳ್ಳದ್ದಾಗಿಯೂ ಇರುತ್ತದೆ, ಮತ್ತು ಕಫ ವಾತಗಳನ್ನು ಕಳೆದು ಮುಖದೋಷಗಳನ್ನು ಪರಿಹರಿಸುವುದು ಅಲ್ಲದೆ ಮಲವಿಸರ್ಜನೆಗೆ ಸಹಕಾರಿಯಾದುದು. ಆದುದರಿಂದ ಪಥ್ಯವಾದುದು.

೯೭. 'ನೈಲ್ಕತ'ವೆಂಬ ಅಡಿಕೆಯು ಮಧುರವೂ. ರುಚ್ಯವೂ, ಕಂಠವನ್ನು ಶುದ್ಧೀಕರಿಸುವುದೂ, ಶರೀರಕ್ಕೆ ಚಟುವಟಿಕೆಯನ್ನು ಕೊಡುವುದೂ, ತ್ರಿದೋಷ(ಕಫ, ವಾತ, ಪಿತ್ಥ)ಗಳನ್ನು ಪರಿಹರಿಸುವುದೂ, ದೀಪನವೂ, ಪಾಚನವೂ (ಜೀರ್ಣಕಾರಿಯಾಗಿಯೂ), ರಸಉಳ್ಳದ್ದೂ, ಮಲವಿಸರ್ಜನೆಗೆ ಸಹಕಾರಿಯೂ ಆಗಿರುತ್ತದೆ.

೯೮. 'ಗೌಲ್ಯಗುಹಾರ'ವೆನ್ನುವ ಅಡಿಕೆಯು ಮೃದುವಾಗಿಯೂ, ಖಾರರಸವುಳ್ಳದ್ದಾಗಿಯೂ, ಪರಿಣಾಮದಲ್ಲಿ ಜೀರ್ಣಕಾರಿಯಾಗಿಯೂ, ಮಲಬದ್ಧತೆ; ಉಬ್ಬರ ಮೊದಲಾದ ಉದರ ದೋಷಗಳನ್ನು ಪರಿಹರಿಸುವುದಲ್ಲದೇ, ಬೆವರುಂಟುಮಾಡಿ ಮೈಹಗುರಾಗುವಂತೆ ಮಾಡುತ್ತದೆ.

Rarest Archive

ಘೊಂಟಾ ಕಟುಕಷಾಯೋಷ್ಣಾ ಕಠಿಣಾ ರುಚಿಕಾರಿಣೀ।
ಮಲ ವಿಷ್ಟಂಭ ಶಮನೀ ಪಿತ್ತಕೃದ್ದೀಪನೀ ಚ ಸಾ॥ ॥ ೯೯ ॥

ಗೊಂಟು ಲಾಕ।

ಪೂಗೀಫಲಂ ಚೌಉಲೀ ಸಂಜಕಂ ಯತ್
(ತತ್)ಕೊಂಕಣೇಷು ಪ್ರಥಿತಂ ಸುಗಂಧೀ।
ಶ್ಲೇಷ್ಮಾಪಹಂ ದೀಪನ ಪಾಚನಂ ಚ
ಬಲಪ್ರದಂ ಪುಷ್ಟಿಕರಂ ರಸಾಢ್ಯಂ ॥ ೧೦೦ ॥

ಚಉಲೀ ಸುಪಾರಿ

ಯದ್ದೋಸಣೇ ವಲ್ಲಗುಣಾಭಿದಾನಕಂ(ಕ)
ಗ್ರಾಮೋದ್ಭವಂ ಪೂಗಫಲಂ ತ್ರಿದೋಷನುತ್।
ಆಮಾಪಹಂ ರೋಚನ ರುಚ್ಯ ಪಾಚನಂ
ವಿಷ್ಟಂಭತುಂದಾಮಯಹಾರಿ ದೀಪನಂ ॥ ೧೦೧ ॥

ಹೊಸ ಪಾಟಣ ಪೂಗ(ಮ್)।

ಚಂದ್ರಾಪುರೋದ್ಭವಂ ಪೂಗಂ ಕಫಘ್ನಂ ಮಲನಾಶನಂ।
ಕಟು ಸ್ವಾದು ಕಷಾಯಂ ಚ ರುಚ್ಯಂ ದೀಪನ ಪಾಚನಂ॥
(ಪೂಗಂ ಸಂಮೋಹಕೃತ್ ಸರ್ವಂ ಕಷಾಯಂ ಸ್ವಾದು ರೇಚನಂ)
ತ್ರಿದೋಷ ಶಮನಂ ರುಚ್ಯಂ ವಕ್ತ್ರಕ್ಲೇದ ಮಲಾಪಹಂ ॥ ೧೦೨ ॥

ಆಮಂ ಪೂಗಂ ಕಷಾಯಂ ಮುಖಮಲ ಶಮನಂ ಕಂಠ
ಶುದ್ಧಿಂ ವಿಧತ್ತೇ
ರಕ್ತಾಮಶ್ಲೇಷ್ಮ ಪಿತ್ತಪ್ರಶಮನ ಮುದರಾಧ್ಮಾನಹಾರಂ ಸರಂ ಚ।
ಶುಷ್ಕಂ ಕಂಠಾಮಯಘ್ನಂ ರುಚಿಕರ ಮುದಿತಂ ಪಾಚನಂ ರೇಚನಂ
ಸ್ಯಾತ್ ॥
ಪರ್ಣೋ (ರ್ಣೈ) ತೊ (ರ್ನೋ) ಯುಜ್ಯತೇ ಚೇಜ್ಝಟಿತಿ
ವಿತನುತೇ ಪಾಂಡುವಾತಂ ಚ ಶೋಫಂ ॥ ೧೦೩ ॥

Rarest Archiver

೯೯. 'ಘೊಂಟಾ' ಎನ್ನುವ ಅಡಿಕೆಯು (ಗೋಟು) ಕಹಿ ಮತ್ತು ಕಷಾಯ ರಸವುಳ್ಳದ್ದು. ಬಹಳ ಗಟ್ಟಿಯಾಗಿಯೂ, ರುಚಿಯನ್ನು ಉಂಟು ಮಾಡುವುದೂ ಮಲವಿಷ್ಟಂಭಗಳನ್ನು ಪರಿಹಾರಮಾಡುವುದೂ, ದೀಪನವೂ ಆಗಿರುತ್ತದೆ. ಆದರೆ ಪಿತ್ಥವನ್ನು ಉಂಟುಮಾಡುತ್ತದೆ.

೧೦೦. 'ಚೌಲೀ' ಎನ್ನುವ ಕೊಂಕಣ ದೇಶದಲ್ಲಿ ಪ್ರಸಿದ್ಧವಾದ ಅಡಕೆಯು ಸುಗಂಧವುಳ್ಳದ್ದು. ಶ್ಲೇಷ್ಮವನ್ನು ಕಳೆಯತಕ್ಕದ್ದು. ದೀಪನ ಮತ್ತು ಪಾಚನವಾದದ್ದು, ಬಲಪುಷ್ಟಿಗಳನ್ನು ಕೊಡತಕ್ಕದ್ದು, ಮಧುರವೂ ಆಗಿರುತ್ತದೆ,

ಹೊಸ ಪಟ್ಟಣ ಅಡಿಕೆ

೧೦೧. ಹೊಸಪಟ್ಟಣದೇಶದ 'ವಲ್ಲಗುಣಾ' ಎಂಬ ಗ್ರಾಮದಲ್ಲಿ ಆದ ಅಡಿಕೆಯು ತ್ರಿದೋಷಗಳನ್ನು ಪರಿಹರಿಸುವುದೂ, ಆಮಶಂಕೆಯನ್ನು ಪರಿಹರಿಸುವುದೂ ಆಗಿದೆ, ಮತ್ತು ರುಚಿಕರವೂ, ಪಾಚನವೂ ದೀಪನವೂ ಆಗಿರುತ್ತದೆ. ಮಲಬದ್ಧತೆಯನ್ನೂ, ಹೊಟ್ಟೆಯುಬ್ಬರಿಕೆಯನ್ನೂ ಪರಿಹರಿಸುವುದು.

೧೦೨. ಚಂದ್ರಾಪುರದಲ್ಲಿ ಉಂಟಾದ ಅಡಿಕೆಯು ಕಫವನ್ನೂ ಮಲವನ್ನೂ ಕಳೆಯುತ್ತದೆ. ಕಾರವು, ಮಧುರವೂ, ವಗರೂ, ರುಚಿಕರವೂ. ದೀಪನ ಪಾಚನವೂ, ಕಾಮುಕಾರಿಯೂ ಆಗಿರುತ್ತದೆ. ಎಲ್ಲ ಅಡಿಕೆಯೂ ಮೂರ್ಛೆಯನ್ನುಂಟು ಮೂಡುವುದೂ, ವಗರು, ಸಿಹಿ, ರಸವುಳ್ಳದ್ದೂ, ಮಲವಿಸರ್ಜಕವೂ, ಆಗಿರುತ್ತದೆ. ಮತ್ತು ತ್ರಿದೋಷಗಳನ್ನು ಪರಿಹರಿಸುವುದಲ್ಲದೆ, ರುಚಿಕರವೂ, ಬಾಯಿಯಲ್ಲಿ ಜೊಲ್ಲು ಸೋರುವುದನ್ನು ಕಡಿಮೆ ಮಾಡುವುದೂ ಆಗಿದೆ.

೧೦೩. ಹಸಿ ಅಡಕೆಯು ಒಗರು ರಸವುಳ್ಳದ್ದಾಗಿದ್ದು, ಬಾಯಿಯಲ್ಲಿನ ಕೆಡುಕನ್ನು ಕಳೆಯುತ್ತದೆ. ಕಂಠವನ್ನು ಶುದ್ಧೀಕರಿಸುತ್ತದೆ. ರಕ್ತಭೇದಿಯನ್ನೂ ಶ್ಲೇಷ್ಮವನ್ನೂ ಪಿತ್ಥವನ್ನೂ ಪರಿಹರಿಸುತ್ತದೆ. ಹೊಟ್ಟೆಯೊಳಗಿನ ವಾಯುವನ್ನು ತೆಗೆಯುತ್ತದೆ. ಮಲವಿಸರ್ಜಕವೂ ಆಗಿರುತ್ತದೆ. ಒಣಗಿದ ಅಡಕೆಯು ಕಂಠದೋಷ ಪರಿಹಾರಕವೂ ರುಚಿಕರವೂ, ಪಾಚನವೂ, ರೇಚನವೂ, ಆಗಿರುತ್ತದೆ. ಆದರೆ ಎಲೆಯನ್ನು ಬಿಟ್ಟು ತಿಂದಲ್ಲಿ 'ಪಾಂಡು' 'ವಾತ' 'ಶೋಭೆ' ರೋಗಗಳನ್ನುಂಟುಮಾಡುತ್ತದೆ.

Rarest Archiver

ರೋಚನಂ ಮೋಹನಂ ಹೃದ್ಯಂ ಕಫ ಪಿತ್ತ ನಿಬರ್ಹಣಂ।
ದೀಪನಂ ವಕ್ತ್ರ ವೈರಸ್ಯ ಮಲ ದೌರ್ಗಂಧ್ಯ ನಾಶನಂ ॥೧೦೪॥

ಆದ್ರಂ ತು ಗುರ್ವಭಿಷ್ಯಂದಿ ದೃಷ್ಟ್ಯಗ್ನಿಂ(ಗ್ನಿ) ವೃದ್ಧಿಕೃತ್ ಪರಂ।
ಶುಷ್ಕಂ ತು ವಾತಲಂ ಸ್ನಿಗ್ಧಂ ತ್ರಿದೋಷ ಶಮನಂ ಪರಂ ॥ ೧೦೫॥

ಸ್ವಿನ್ನ ಪೂಗಂ ತ್ರಿದೋಷಘ್ನಂ ಪಕ್ವಂ ಶುಷ್ಕಂ ತು ವಾತುಲಂ
ಪಕ್ವಾರ್ಧಂ ಗುರ್ವಭಿಷ್ಯಂದಿ ಬಲಾರ್ದ್ರಂ ಕಫಪಿತ್ತನುತ್ ॥೧೦೬॥

ಪೂಗಸ್ಯ ದೃಢಮುದ್ಯಂ ಯುಚ್ಛ್ರೇಷ್ಠಂ ನಾನಾವಿಧಂ ಹಿತತ್
ಪಾಕದೇಶಾದಿ ಭೇದೇನ ಚಿಕ್ಕಣಂ ಸರ್ವದೋಷಜಿತ್ ॥ ॥ ೧೦೭॥

ಕೃಮಿಹೃತ್ ಪೂಗಪುಷ್ಪಂ ತು ಕಷಾಯಂ ಮಧುರಂ ಗುರು।
ಪೂಗಶ್ವೇತಾ ಪುರಾ ಪ್ರೋಕ್ತಾ ಶ್ಯಾಮವರ್ಣಾ ಚ ಚಿಕ್ಕಣಾ।
॥ ೧೦೮॥

ಪೂಗೀಯುಗಂ (ಪೂಗಂ ಗುರು) ಹಿಮಂ ರೂಕ್ಷಂ ಕಷಾಯಂ
ಕಫ ಪಿತ್ತ ಹೃತ್।
ಮೋಹನಂ ದೀಪನಂ ರುಚ್ಯಂ ಆಸ್ಯವೈರಸ್ಯ ನಾಶನಮ್ ॥ ೧೦೯॥

ಆರ್ದ್ರಂ ತು ಗುರ್ವಭಿಷ್ಯಂದಿ ವಹ್ನಿದೃಷ್ಟಿಹ(ಕ)ರಂ ಪರಮ್।
ಸ್ವಿನ್ನಂ ದೋಷತಯುಚ್ಛೇಧಿ ದೃಢಮುದ್ಯಂ ತದುತ್ತಮಂ ॥ ೧೧೦॥

Rarest Archiver

೧೦೪. ಮತ್ತು ರೋಚಕವೂ, ಮೋಹಕವೂ, ಮಧುರವೂ, ಕಫ ಪಿತ್ತಗಳನ್ನು ಕಳೆಯುವುದೂ ದೀಪನವೂ ಆಗಿರುವುದಲ್ಲದೇ, ಬಾಯಿ ಒಣಗುವಿಕೆಯನ್ನು, ಬಾಯಿಯಲ್ಲಿನ ದುರ್ಗಂಧವನ್ನು ನಾಶಮಾಡುತ್ತದೆ.

೧೦೫. ಹಸಿ ಅಡಕೆಯು ಶರೀರಕ್ಕೆ ಭಾರವನ್ನುಂಟುಮಾಡುತ್ತದೆ. ಬೆವರನ್ನುಂಟುಮಾಡಿ, ಕಣ್ಣು ಉರಿಯುವಿಕೆಯನ್ನು ಉಂಟುಮಾಡುತ್ತದೆ. ಒಣಗಿದ ಅಡಿಕೆಯು ವಾಯುವನ್ನು ಉಂಟುಮಾಡುತ್ತದೆ. ಆದರೆ ಬೇಯಿಸಿದ ಅಡಿಕೆಯು ತ್ರಿದೋಷಗಳನ್ನು ಕಳೆಯುತ್ತದೆ.

೧೦೬. ಬೇಯಿಸಿದ ಅಡಿಕೆಯು ತ್ರಿದೋಷಗಳನ್ನು ಕಳೆಯುತ್ತದೆ ಹಣ್ಣಾಗಿ ಒಣಗಿದ ಅಡಿಕೆಯು ವಾತವನ್ನುಂಟುಮಾಡುತ್ತದೆ. ಹಣ್ಣಾದ ಹಸೀ ಅಡಿಕೆಯು ಮೈಭಾರವನ್ನೂ, ಬೆವರನ್ನೂ ಉಂಟುಮಾಡುತ್ತದೆ. ಬೇಯಿಸಿದ ಅಡಿಕೆಯು ಕಫ, ಪಿತ್ಥಗಳನ್ನು ಪರಿಹರಿಸುತ್ತದೆ.

೧೦೭. 'ಚಿಕ್ಕಣೀ' ಅಡಿಕೆಯು ದೃಢವಾದ ಮಧ್ಯಭಾಗವುಳ್ಳದ್ದಾಗಿ ಪಾಕ, ಮತ್ತು ದೇಶ ಇವುಗಳ ಭೇದದಿಂದ ಅನೇಕ ವಿಧವಾಗಿದ್ದುದಾಗಿರುತ್ತದೆ. ಅದು ಸಮಸ್ತದೋಷಗಳನ್ನೂ ಪರಿಹರಿಸುವಂಥಾದ್ದಾಗಿರುತ್ತದೆ.

೧೦೮. ಅಡಕೆಯ ಹೂವು ಒಗರೂ, ಮಧುರವೂ, ಮೈಭಾರವನ್ನುಂಟುಮಾಡುವುದಾಗಿಯೂ ಮತ್ತು ಹೊಟ್ಟೆಯಲ್ಲಿನ ಕ್ರಿಮಿನಾಶಕಾರಿಯೂ ಆಗಿರುತ್ತದೆ. ಬಿಳಿ ಅಡಿಕೆಯನ್ನು "ಪರಾ" ಎಂಬುದಾಗಿಯೂ ಶ್ಯಾಮ ವರ್ಣದ ಅಡಿಕೆಯನ್ನು "ಚಿಕ್ಕಣಾ" ಎಂದೂ ಕರೆಯುತ್ತಾರೆ.

೧೦೯. ಅಡಕೆಯು ಭಾರವನ್ನುಂಟು ಮಾಡುವುದಾಗಿಯೂ. ಶೀತಲವೂ, ತೀಕ್ಷ್ಣವೂ, ವಗರೂ ಆಗಿದ್ದು ಕಫ, ಪಿತ್ಥಗಳನ್ನು ಪರಿಹರಿಸುತ್ತದೆ. ಮತ್ತು ಮೂರ್ಛೆಯನ್ನುಂಟುಮಾಡುವುದೂ, ದೀಪಕರವೂ, ರುಚಿಕರವೂ ಬಾಯಿವಣಗುವಿಕೆಯನ್ನು ಪರಿಹರಿಸುವುದೂ ಆಗಿರುತ್ತದೆ.

೧೧೦. ಹಸಿ ಅಡಕೆಯಾದರೋ ಮೈಭಾರವನ್ನುಂಟು ಮಾಡುವುದೂ, ಬೆವರನ್ನುಂಟು ಮಾಡುವುದೂ, ಕಣ್ಣುರಿಯನ್ನುಂಟು ಮಾಡುವುದೂ ಆಗಿರುತ್ತದೆ. ಬೇಯಿಸಿದ ಅಡಕೆಯು ಮಧ್ಯಭಾಗ ದೃಢವಾಗಿದ್ದಲ್ಲಿ ಉತ್ತಮವಾಗಿದ್ದು ದೋಷತ್ರಯಗಳನ್ನು ಪರಿಹಾರ ಮಾಡುವುದು.

Rarest Archiver

ತಾಂಬೂಲಯೋಗ್ಯಂ ಕ್ರಮುಕಂ ಚ ತಜ್ಞಾಃ
ಮಾಸತ್ರಯಾದೂರ್ಧ್ವ ಮುದಾಹರಂತಿ।
ಮಾಸೇ ವ್ಯತೀತೇ ತು ಭವಂತಿ (ಯೋಗ್ಯಾ)
ನ್ಯತೀವ ಹೃದ್ಯಾನಿ ಮನೋಹರಾಣಿ ॥ ೧೧೧ ॥

ಸ್ವಿನ್ನ ಪೂಗಂ ತ್ರಿದೋಷಘ್ನಂ ಅಪಕ್ವಂ ದೋಷಲಂ ಭವೇತ್
॥ ೧೧೨ ॥

ಪೂಗದಾನ ಸಂಖ್ಯಾಫಲಂ

ಏಕ ದ್ವಿತ್ರಿ : ಚತು : ಪಂಚಷಡ್ಭಿ : ಪೂಗೈಫಲಾನಿ ಚ
(ಪೂಗೀಫಲೈ : ಕ್ರಮಾತ್)।
ಲಾಭಾಲಾಭೌ(ಲಾಭೋಽಲಾಭಃ)ಸುಖಂ ದುಃಖಂ ಆಯುರ್ಮ
ರಣಮೇವಚ ॥ ೧೧೩ ॥

ಇತಿ ಪೂಗ ಗುಣಾಃ।

ಅಥ ಚೂರ್ಣ ಜಾತಿ ನಾಮ ಗುಣ ದೋಷಾನಾಹ।
ಸುಧಾ ೧, ಚೂರ್ಣ(ಮ್)೨ ಮೌಕ್ತಿಕಸಾರ(ರಃ)೩ ಶೈಲೋದರ
ಗ್ರಾವ(ವಾ)೪।

(ಚೂರ್ಣಂ ಸ್ಯಾದಶ್ಮ ಸಂಭವ ಮಿತ್ಯಮರಮಾಲಾ)

ಚೂರ್ಣಂಚಾರ್ಜುನ ವೃಕ್ಷಜಂ ಕಫಹರಂ ಗುಲ್ಮಘ್ನಮಂಕ್ಚಾಸ್ಥಜಂ।
ಶೋಷಘ್ನಂ ಕುಟಜಂ ಕರಂಜಜನಿತಂ ವಾತಾಪಹಂ ರುಚ್ಯವಂ॥
ಪಿತ್ತಘ್ನಂ ಜಲಜಂ ಬಲಾಗ್ನಿರುಚಿದಂ ಶೈಲಾಸ್ಥಜಂ ಪಿತ್ತದಂ
ಸ್ಫಾಟಿಕ್ಯಂ ದೃಢದಂತ ಪಂಕ್ತಿಜನನಂ ಶುಕ್ತ್ಯಾಧಿಕಂ(ಜಂ) ರೂಕ್ಷ
ದಮ್ ॥ ೧೧೪ ॥

ಸುನ್ನ ಗುಣಾಃ।

Rarest Archive

೧೧೧. ಅಡಕೆಯನ್ನು ಮೂರುತಿಂಗಳು ಕಳೆದ ತರುವಾಯವೇ ತಾಂಬೂಲ ಯೋಗ್ಯವೆಂದು ತಿಳಿದವರಿಂದ ಹೇಳಲ್ಪಟ್ಟಿದ್ದರೂ, ಒಂದು ತಿಂಗಳು ಕಳೆದಲ್ಲಿ ಹೃದಯ ಬಲಕಾರಿಯೂ ಮನೋಹರವೂ ಆಗುತ್ತದೆ.

೧೧೨. ಬೇಯಿಸಿದ ಅಡಕೆಯು ತ್ರಿದೋಷಗಳನ್ನು ಕಳೆಯುತ್ತದೆ. ಎಳೆಯದಾದಲ್ಲೂ ದೋಷದನ್ನು ಕಳೆಯುತ್ತದೆ.

ಅಡಕೆಯನ್ನು ದಾನಮಾಡುವಾಗ ಸಂಖ್ಯೆಯನ್ನು ಅನುಸರಿಸಿ ಉಂಟಾಗುವ ಫಲವು:—

೧೧೩. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಅಡಕೆಗಳನ್ನು ದಾನಮಾಡಿದಲ್ಲಿ ಕ್ರಮವಾಗಿ ಲಾಭ, ಅಲಾಭ: ಸುಖ, ದುಃಖ: ಆಯುಸ್ಸು, ಮರಣ ರೂಪವಾದ ಫಲವುಂಟಾಗುತ್ತದೆ. (ಅಂದರೆ ೧-೩-೫ ಅಡಕೆಗಳನ್ನು ದಾನಮಾಡುವುದು ಶ್ರೇಷ್ಠವು. ೨-೪-೬ ಮಾಡಿದಲ್ಲಿ ಅಶುಭವು.)

ಇನ್ನು ಮುಂದೆ ಸುಣ್ಣದ ಜಾತಿಗಳ ಹೆಸರು, ಗುಣ, ದೋಷಗಳು ಹೇಳಲ್ಪಡುತ್ತದೆ; ಇವುಗಳಲ್ಲಿ ೧. ಸುಧಾ, ೨. ಚೂರ್ಣ, ೩. ಮೌಕ್ತಿಕಸಾರ, ೪. ಕಲ್ಲುಸುಣ್ಣ ಎಂಬ ಜಾತಿಗಳಿವೆ.

(ಕಲ್ಲಿನಿಂದ ಹುಟ್ಟಿದುದಕ್ಕೆ ಚೂರ್ಣವೆಂದು ಹೆಸರು—ಅಮರಮಾಲ)

೧೧೪. ಅರ್ಜುನವೃಕ್ಷದಿಂದ(ಕೆಂಪುಮತ್ತಿಮರ)ಹುಟ್ಟಿದ ಸುಣ್ಣವು ಕಫವನ್ನು ಕಳೆಯುತ್ತದೆ. ಎಕ್ಕದಗಿಡದಿಂದ ಹುಟ್ಟಿದ (ಅರ್ಕಾಹ್ವ) ಸುಣ್ಣವು ಗುಲ್ಮರೋಗವನ್ನು ಪರಿಹರಿಸುತ್ತದೆ. ಕುಟಜ ( ) ದಿಂದ ಹುಟ್ಟಿದ ಸುಣ್ಣವು ಕ್ಷಯರೋಗವನ್ನು ಕಳೆಯುತ್ತದೆ. ಕರಂಜ (ಹೊಂಗೇಮರ)ದಿಂದ ಹುಟ್ಟಿದ ಸುಣ್ಣವು ವಾತವನ್ನು ಕಳೆಯುವುದೂ, ರುಚಿಯನ್ನುಂಟುಮಾಡುವುದೂ ಪಿತ್ಥವನ್ನು ಕಳೆಯುವುದೂ ಆಗಿರುತ್ತದೆ ನೀರಿನಲ್ಲಿ ಹುಟ್ಟಿದ ಸುಣ್ಣವು ಬಲವನ್ನೂ ಉಷ್ಣವನ್ನೂ ರುಚಿಯನ್ನೂ ಉಂಟುಮಾಡುತ್ತದೆ. ಕಲ್ಲಿನಿಂದ ಹುಟ್ಟಿದ ಸುಣ್ಣವು ಪಿತ್ತವನ್ನುಂಟುಮಾಡುತ್ತದೆ. ಸ್ಫಟಿಕದಿಂದ ಹುಟ್ಟಿದ ಸುಣ್ಣವು ಹಲ್ಲುಗಳನ್ನು ಗಟ್ಟಿಮಾಡುತ್ತದೆ. ಚಿಪ್ಪು. ಮುಂತಾದವುಗಳಿಂದ ಹುಟ್ಟಿದ ಸುಣ್ಣವು ಉಷ್ಣಕಾರಕವು.

Rarest Archiver

ಅನ್ಯಃ

ಶುಕ್ತಿಜಂ ವಾತಪಿತ್ತಘ್ನಂ ಶಂಭೂಕಂ ಶ್ಲೇಷ್ಮರೋಗಜಿತ್ ।
ರಾಜಯೋಗ್ಯಂ ತು ಸರ್ವತ್ರ ಮುಕ್ತಾಚೂರ್ಣಂ ತು ವಾತಜಿತ್
॥ ೧೧೫ ॥

ರತ್ನಮಾಲಾ ಮಂಜರೀ

ಶೈಲೋದರಗ್ರಾವ ವಿಶೇಷ ಚೂರ್ಣಂ
ಶ್ರೀವಾಸತೋಯಂ ಘನಸಾರ ಪೂರ್ಣಂ ।
ತಾಂಬೂಲರಾಗೋದಯ ಜಾಗರೂಕಂ
ನಿರಂತರಂ ಪಾಚನ ಜಾಗರೂಕಂ ॥ ೧೧೬ ॥

ತಮಾಕು ಗುಣಾಃ।

ದ್ರವ್ಯಗುಣ ನಿಘಂಟೇ (ಂಟೌ)।
ತಮಾಲಪತ್ರಂ ಬಹು ತೀಕ್ಷ್ಣಕೇನ
ವಿರೇಚನಂ ವಾತಕಫಂ ಸುಹೃದ್ಯಂ ।
ಆನಾಹ ಗುಲ್ಮಕ್ಷಯು ಪಾಂಡುರೋಗಂ
ಸಹಸ್ರರೋಗೇಷ್ವ(ಷು) ನಿವಾರಣಂ ಸ್ಯಾತ್ ॥ ೧೧೭ ॥

ಅಥ ಖದಿರವಾಟೀ ಕರಣಂ ।

ಲವಂಗ ಜಾತೀ ಮೃಗಜಾ ಶಶೀನಾಂ
ಭಾಗದ್ವಯಂ ಜಾತಿಫಲತ್ರಯಂ ಚ ।
ವಲ್ಲದ್ವಯಂ ತ್ವಕ್ ಚ ತಮಾಲಪತ್ರಂ
ಕಂಕೋಲವಲ್ಲಾ ಇಹ ತುರ್ಯ ವಲ್ಲಾಃ ॥ ೧೧೮ ॥

ಸ್ವೈರಸ್ಯ ಸಾರಸ್ಯ ತಥಾಷ್ಟ ಭಾಗಾ
ಭಾಗದ್ವಯಂ ಸಾಧು ಸುಚಂದನಸ್ಯ !
ಕೃಷ್ಣಾಗರೋಶ್ಚಾರು ತಥೈಕ ಭಾಗ
ಏಲಾ ಚ ವಲ್ಲದ್ವಯು ಮುಕ್ತಚೂರ್ಣಂ ॥ ೧೧೯ ॥

Rarest Archiver

## ಇನ್ನೊಂದರಲ್ಲಿ

೧೧೫. ಚಿಪ್ಪಿನಿಂದ ಹುಟ್ಟಿದ ಸುಣ್ಣವು ವಾತಪಿತ್ಥಗಳನ್ನು ಕಳೆಯುತ್ತದೆ. ಶಂಖದಿಂದಾಗುವ ಸುಣ್ಣವು ಶ್ಲೇಷ್ಮರೋಗವನ್ನು ಕಳೆಯುತ್ತದೆ. ಮುತ್ತಿನಿಂದ ಹುಟ್ಟಿದ ಸುಣ್ಣವು ವಾತವನ್ನು ಕಳೆಯುವುದಾಗಿಯೂ ಎಲ್ಲಾ ವಿಧವಾಗಿಯೂ ರಾಜಯೋಗ್ಯವಾಗಿರುತ್ತದೆ.

## ರತ್ನಮಾಲಾಮಂಜರಿಯಲ್ಲಿ ಹೇಳಿರುವುದು

೧೧೬. ಬೆಟ್ಟದ ಒಳಗಿನ ಕಲ್ಲಿನಿಂದ ಹುಟ್ಟಿದ ಸುಣ್ಣವು ಪನ್ನೀರು, ಪಚ್ಚಕರ್ಪೂರದೊಡನೆ ಕೂಡಿದಲ್ಲಿ ತಾಂಬೂಲದ ಬಣ್ಣವನ್ನು ಹೆಚ್ಚಿಸುವುದೂ, ಪಾಚಕವೂ ಆಗಿರುತ್ತದೆ.

## ಹೊಗೇಸೊಪ್ಪಿನ ಗುಣಗಳು

(ದ್ರವ್ಯ ನಿಘಂಟಿನಲ್ಲಿ ಹೇಳಲ್ಪಟ್ಟ ವಿಷಯಗಳು)

೧೧೭. ಹೊಗೇಸೊಪ್ಪು ವಾತಕಫಗಳನ್ನು ಪರಿಹರಿಸುವುದೂ, ಹೃದಯ ದಾರ್ಢ್ಯವನ್ನು ಉಂಟುಮಾಡುವುದೂ ಆಗಿರುತ್ತದೆ. ಮಲ ಮೂತ್ರಗಳನ್ನು ವಿಸರ್ಜಿಸುವುದೂ, ಗುಲ್ಮ, ಕ್ಷಯ, ಪಾಂಡು, ಮೊದಲಾದ ಅನೇಕ ರೋಗಗಳನ್ನು ಪರಿಹರಿಸುತ್ತದೆ,

## ಕಾಚನ್ನು ಮಾಡುವ ವಿಧಾನವು.

೧೧೮. ಲವಂಗ, ಪಚ್ಚಕರ್ಪೂರ, ಜಾಯಿಪತ್ರೆ, ಕಸ್ತೂರಿ ಇವುಗಳ ಎರಡು ಭಾಗಕ್ಕೆ, ಮೂರುಭಾಗ ಜಾತೀಫಲಗಳನ್ನು ಕೂಡಿಸಿ ನಾಲ್ಕು ಗುಲಗಂಜಿ ತೂಕಗಳ ದಾಲ್ಚಿನ್ನಿಯನ್ನೂ, ಹೊಗೇಸೊಪ್ಪನ್ನೂ, ಎಂಟು ಗುಂಜಿ ತೂಕದ ತಕ್ಕೋಲವನ್ನೂ ಸೇರಿಸತಕ್ಕದ್ದು.

೧೧೯. ಖಾದಿರರಸದ ಎಂಟುಭಾಗದೊಡನೆ ಎರಡು ಭಾಗ ಚಂದನವನ್ನೂ, ಕರಿ ಅಗರಿನ ಒಂದು ಭಾಗವನ್ನೂ. ಯಾಲಕ್ಕಿಯ ಎರಡುಭಾಗವನ್ನೂ (ಸೇರಿಸತಕ್ಕದ್ದು).

Rarest Archive

ಷಡ್ಭಾಗಿಕಂ ಕೇಸರ ಕುಂಕುಮಾನಾ-
ಮಾಲೋಡಯೇತ್ ಪುಷ್ಪರಸೇನ ಯುಕ್ತಂ।
ಮಾಸ ಪ್ರಯೋಗೇಣ ಸ(ಚ) ಶುಷ್ಕಕಾಸಂ
ವಟೀಂ ಚ ಬಧ್ವಾ ಚಣಕ ಪ್ರಮಾಣಾಂ ॥ ೧೨೦ ॥

ಏಷಾಸ್ಯ ವೈರಸ್ಯ ಹರಾಶಿ ಪಥ್ಯಾ
ಭುಕ್ತಾನ್ನ ಜಾರಾ ಜಠರೇಷು ಜಾತಮ್।
ವಾತಾಮಯಂ ಹಂತಿ ಸದಾ ನೃಪಾಣಾಂ
ತಾಂಬೂಲರಾಗಂ ಕುರುತೇಽತಿ ರಮ್ಯಂ ॥ ೧೨೧ ॥

ಕರ್ಪೂರಸಾರ ಮಲಯೋ(ಯು)ದೃಕುರಂಗ ನಾಭೀಃ(ಬಿ)
ಸಮ್ಮೂರ್ಛಿತಂ ಖದಿರ ಭೂರುಹಸಾರ ಚೂರ್ಣಂ।
ಯತ್ನೇನ ಕೇಸರತರು ಪ್ರಸವಾಪ್ಯತಂ ತತ್
ತಾಂಬೂಲ ರೋಚಕ ಕರಂ ಧರಣೀ ಪತೀನಾಂ ॥ ೧೨೨ ॥

ಕೇಸರತರುಃ ಕೇತಕಪತ್ರಂ

ಖದಿರ: ಶೀತಲೋ ದಂತ್ಯ: ಕಂಡೂ ಕಾಸಾರುಚಿ ಪ್ರಣುತ್।
ತಿಕ್ತಃ ಕಷಾಯೋ ಮೇದಘ್ನ: ಕೃಮಿ ಮೇಹಜ್ವರ ವ್ರಣಾನ್॥
ಶ್ವಿತ್ರಶೋಥಾಮ ಪಿತ್ತಾಸ್ರ ಪಾಂಡುಕುಷ್ಠ ಕಪಾ(ಫಾ)ನ್ ಹರೇತ್
॥ ೧೨೩ ॥

ವಿಟ್ ಖದಿರ ಕಟುರುಷ್ಣಸ್ತಿಕ್ತೋ ರಕ್ತವ್ರಣೋಽಥ(ತ್ಥ)
ದೋಷಹರಃ।
ಕಂಡೂತಿ ವಿಷವಿಸರ್ಪಜ್ವರ ಕುಷ್ಠೋನ್ಮಾದ ಭೂತಹರಃ॥
ಇತಿ ಸಂಕ್ಷೇಪೇಣ ಖದಿರಸಾರ ಗುಣಾಃ। ॥ ೧೨೪ ॥

ಅಥ ಕಸ್ತೂರೀ।

ಕಸ್ತೂರೀ ಕಟುಕಾ ತಿಕ್ತಾ ಕ್ಷಾರೋಷ್ಣಾ ಶುಕ್ರಲಾ ಗುರುಃ
ಕಫವಾತ ವಿಷಚ್ಛಾರ್ದಿ ಶೀತ ದೌರ್ಗಂಧ್ಯ ಶೋಷಹಾ ॥ ೧೨೫ ॥

Rarest Archive

೧೨೦. (ಮತ್ತು) ಆರು ಭಾಗ ಕೇಸರಕುಂಕುಮುವನ್ನು ಜೇನು ತುಪ್ಪದೊಡನೆ ಕೂಡಿಸಿ, ಕಡಲೆ ಪ್ರಮಾಣದ ಮಾತ್ರೆಯನ್ನು ಮಾಡ ತಕ್ಕದ್ದು, ಇದನ್ನು ಒಂದು ತಿಂಗಳು ಉಪಯೋಗಿಸಿದಲ್ಲಿ ಒಣ ಉಬ್ಬಸ ರೋಗವು ಹೋಗುತ್ತದೆ.

೧೨೧. ಈ ಮಾತ್ರೆಯು ಬಾಯಿ ಒಣಗುವಿಕೆಯನ್ನು ಪರಿಹರಿಸುತ್ತದೆ. ಜೀರ್ಣವನ್ನು ಹೆಚ್ಚಿಸುತ್ತದೆ. ಹೊಟ್ಟೆಯಲ್ಲಿನ ವಾತರೋಗವನ್ನು ಕಳೆಯುತ್ತದೆ. ದೊರೆಗಳಿಗೂ, ತಾಂಬೂಲದಲ್ಲಿ ಉತ್ತಮ ಪ್ರೀತಿಯನ್ನುಂಟುಮಾಡುತ್ತದೆ.

೧೨೨. ಪಚ್ಚಕರ್ಪೂರ, ಗಂಧ, ಕಸ್ತೂರಿ, ಕಾಚು ಮತ್ತು ಸುಣ್ಣ ಇವುಗಳಿಂದ ಕೂಡಿದ ಮತ್ತು ಕುಂಕುಮಕೇಸರದಿಂದ ಕೂಡಿದುದಾದ ತಾಂಬೂಲವು ರಾಜರುಗಳಿಗೂ ಬಹಳ ಪ್ರಿಯವಾದುದು.

೧೨೩. ಕಾಚು ಶೀತಲವೂ, ದಂತಗಳಿಗೆ ಶಕ್ತಿಕೊಡುವುದೂ, ನವೆ ತುರಿ, ಉಬ್ಬಸ, ಅರುಚಿ, ಇವುಗಳನ್ನು ಪರಿಹರಿಸುವುದೂ, ಕಹಿ ಮತ್ತು ಒಗರು ರಸವುಳ್ಳದ್ದೂ, ಕೊಬ್ಬನ್ನು ಕರಗಿಸುವುದೂ, ಕ್ರಿಮಿ, ಮೇಹಜ್ವರ ವ್ರಣ, ತೊನ್ನು, ಶೋಭೇರೋಗ, ಆಮಶಂಕೆ. ರಕ್ತಸ್ರಾವ, ಪಾಂಡು, ಕುಷ್ಠ, ಕಫರೋಗಗಳನ್ನು ಪರಿಹರಿಸುವುದೂ ಆಗಿದೆ.

೧೨೪. ಹುಚ್ಚುಕಗ್ಗಲೀ ಮರದ ರಸವು ಖಾರವಾಗಿಯೂ, ಉಷ್ಣಕರವಾಗಿ ಕಹಿಯಾಗಿಯೂ ಇರುತ್ತದೆ. ಮತ್ತು ರಕ್ತ, ವ್ರಣ ಇವುಗಳಿಂದೇಳುವ ದೋಷವನ್ನು ಪರಿಹರಿಸುತ್ತದೆ. ನವೆಯನ್ನೂ, ವಿಷದ ಹರಡುವಿಕೆಯನ್ನೂ, ಜ್ವರವನ್ನೂ, ಕುಷ್ಠರೋಗವನ್ನು, ಹುಚ್ಚನ್ನೂ ಭೂತಚೇಷ್ಟೆಯನ್ನೂ ತಡೆಯುತ್ತದೆ,

ಕಾಚಿನ ಗುಣಗಳ ವಿವರಣೆಯು ಈ ಮೇಲೆ ಹೇಳಿದ ರೀತಿಯಾಗಿದೆ.

## ಕಸ್ತೂರಿಯ ಗುಣಗಳು.

೧೨೫. ಕಸ್ತೂರಿಯು ಕಾರ, ಸಿಹಿ, ಉಪ್ಪು ಈ ಮೂರು ರಸವುಳ್ಳದ್ದಾಗಿಯೂ, ಉಷ್ಣಕಾರಿಯಾಗಿಯೂ, ಶುಕ್ರವನ್ನು ಕಡಿಮೆಮಾಡುವುದೂ, ಮೈ ಭಾರವನ್ನು ಉಂಟುಮಾಡುವುದಾಗಿಯೂ, ಮತ್ತು ಕಫ, ವಾತ ವಿಷ, ಶೈತ್ಯ, ದೌರ್ಗಂಧ್ಯ, ಕ್ಷಯರೋಗಗಳನ್ನು ಪರಿಹರಿಸುವುದಾಗಿದೆ.

Rarest Archive

ಕಸ್ತೂರಿಕಾ ವೇದಮುಖ್ಯಾ ಸುಗಂಧಾ ಮದಿ(ದ)ನೀ ಮದಃ ।
ಮಾರ್ಗೋ ದರ್ಪೋ ಮೃಗಮದೊ ಮೃಗನಾಭಿಃ ಮೃಗಾಂಡಜಃ
॥ ೧೨೬ ॥

ಕಸ್ತೂರೀ ಮೃಗನಾಭಿಸ್ತು ಮದನೀ ಗಂಧಕೇಲಿಕಾ ।
ವೇದಮುಖ್ಯಾ ಚ ಮಾರ್ಜಾರೀ ಸುಭಗಾ ಬಹುಗಂಧದಾ ॥ ೧೨೭ ॥

ಸಹಸ್ರವೇಥೀ(ಧೀ)ಶ್ಯಾಮಾಸ್ಯಾತ್ ಕಾಮಗಂಧಾ (ನಂದಾ)
ಮೃಗಾಂಡಜಾ ।
ಕರಂಗನಾಭೀ ಲಲಿತಾ ಮದೊ ಮೃಗಮದಸ್ತಥಾ ॥ ೧೨೮ ॥

ಶ್ಯಾಮಲಾ ಮೋದಿನೀ ಚೈವ ವಿಜ್ಞೇಯಾಷ್ಟಾದಶಾಹ್ವಯಾ ।

ಗುಣಾಃ ।

ಕಸ್ತೂರೀ ಸುರಭಿಸ್ತಿಕ್ತಾ ಚಕ್ಷುಷ್ಯಾ ಮುಖರೋಗಜಿತ್ ।
ಕಿಲಾಸ ಮುಖ ದೌರ್ಗಂಧ್ಯಭ(ವಾ)ಂಧಾ(ತಾ) ಲಕ್ಷ್ಮೀ
ಮಲಾಪಹಾ ॥ ೧೨೯ ॥

ಭೇದಾಃ ।

ಕಪಿಲಾ, ಪಿಂಗಲಾ ಕೃಷ್ಣಾ ಕಸ್ತೂರೀ ತ್ರಿವಿಧಾಕ್ರಮಾತ್ ।

ಉತ್ಪತ್ತಿಃ ।

ನೇಪಾಲೇಽಪಿ ಚ ಕಾಶ್ಮೀರೇ ಕಾಮರೂಪೇ ಚ ಜಾಯತೇ॥ ೧೩೦ ॥

ಸಾಪ್ಯೇಕಾ ಖರಿಕಾ ತತಶ್ಚತಿಲಕಾ ಜ್ಞೇಯಾ ಕುಲತ್ಥಾ ಪರಾ
ಪಿಂಡಾನ್ಯಾಽಪಿ ಚ ನಾಯಿಕೇತಿ ಚ ಪರಾ ಯಾ ಪಂಚ ಭೇದಾಭಿದಾ ।
ಸಾ ಶುದ್ಧಾ ಮೃಗನಾಭಿತಃ ಕ್ರಮವಶಾದೇಷಾ ಕ್ಷಿತೀಶೋಚಿತಾ ।
ಪಕ್ಷತ್ಯಾದಿ ದಿನತ್ರಯೇಷು ಜನಿತಾ ಕಸ್ತೂರಿಕಾ ಸ್ತೂಯತೇ
॥ ೧೩೧ ॥

Rarest Archive

೧೨೬. ಕಸ್ತೂರಿಯು ಕಸ್ತೂರಿ: ವೇದಮುಖ್ಯ ; ಸುಗಂಧ ; ಮದಿನೀಮದವಾರ್ಗ ; ದರ್ಪ ; ಮೃಗಮದಾ ; ಮೃಗನಾಭಿ ; ಮೃಗಾಂಡಜ ಎಂದು ಕರೆಯಲ್ಪಡುತ್ತದೆ.

೧೨೭. (ಅಲ್ಲದೆ) ಕಸ್ತೂರಿ ; ಮೃಗನಾಭಿ ; ಮದನೀ ; ಗಂಧಕೇಲಿಕಾ; ವೇದಮುಖ್ಯ; ಮಾರ್ಜಾರಿ; ಸುಭಗ; ಬಹುಗಂಧಧಾ, (ಎಂದೂ)

೧೨೮. ಸಹಸ್ರವೇಧಿ ; ಶ್ಯಾಮ ; ಕಾಮಗಂಧ ; ಮೃಗಾಂಡಜ ; ಕರಂಗನಾಭೀ ; ಲಲಿತಾ ; ಮದ ; ಮೃಗಮದಾ, (ಎಂದೂ,)

ಮತ್ತು ಶ್ಯಾಮಲಾ ; ಮೇದಿನೀ, ಎಂದೂ ಮುಂತಾದ ಹದಿನೆಂಟು ಹೆಸರುಗಳಿಂದ ಕರೆಯಲ್ಪಡುತ್ತದೆ.

## ಗುಣಗಳು

೧೨೯. ಕಸ್ತೂರಿಯು ಸುಗಂಧವೂ, ಕಹಿರಸವುಳ್ಳದ್ದೂ, ಕಣ್ಣಿಗೆ ತಂಪನ್ನುಂಟುಮಾಡುವುದೂ, ಮುಖರೋಗವನ್ನೂ, ಮುಖ ದೌರ್ಗಂಧ್ಯವನ್ನೂ, ಚರ್ಮರೋಗಗಳನ್ನೂ, ವಾತವನ್ನೂ, ದಾರಿದ್ರ್ಯವನ್ನೂ ಕಳೆಯುತ್ತದೆ.

## ಕಸ್ತೂರಿಯ ವಿಧಗಳು ಮತ್ತು ಉತ್ಪತ್ತಿ.

೧೩೦. ಕಪಿಲಾ; ಪಿಂಗಲಾ; ಕೃಷ್ಣಾ ಎನ್ನುವ ಮೂರು ವಿಧವಾದ ಕಸ್ತೂರಿಯು ನೇಪಾಲ, ಕಾಶ್ಮೀರ, ಕಾಮರೂಪ ಎನ್ನುವ ದೇಶಗಳಲ್ಲಿ ಹುಟ್ಟುತ್ತದೆ.

೧೩೧. ಆ ಕಸ್ತೂರಿಯು 'ಖರಿಕಾ' 'ತಿಲಕಾ' 'ಕುಲತ್ಥ' 'ನಾಯಿಕಾ' ಎಂದು ಐದು ಪ್ರಭೇದಗಳುಳ್ಳದ್ದು. 'ಪಿಂಡ' ಶುದ್ಧವಾದ ಕಸ್ತೂರಿಯು ಐಶ್ವರ್ಯವಂತರಿಗೆ ಲಭ್ಯವಾಗುವುದಾಗಿದ್ದು, ಮೃಗನಾಭಿಯಿಂದ ಹುಟ್ಟುತ್ತದೆ. ಪಾಡ್ಯ, ಬಿದಿಗೆ, ತದಿಗೆ, ಈ ಮೂರು ದಿನಗಳಲ್ಲಿ ಉತ್ಪತ್ತಿಯಾದ ಕಸ್ತೂರಿಯು ಶ್ರೇಷ್ಠವಾದದ್ದು.

Rarest Archiver

ಚೂರ್ಣಾಕೃತಿಸ್ತು ಖರಿಕಾ ತಿಲಕಾ ತಿಲಾಭಾ
ಕೌಲತ್ಥಬೀಜ ಸದೃಶೀ ಚ ಕುಲತ್ಥಿಕಾಯಾಃ(ಯಾ)।
ಸ್ಥೂಲಾ ತತಃ ಕಿಯದಿಯಂ ಕಿಲ ಸಿದ್ಧಿಕಾಖ್ಯಾ
ತಸ್ಯಾಶ್ಚ ಕಿಂಚಿದಧಿಕಾ ಯದಿ ನಾಯಿಕಾ ಸಾ ॥ ೧೩೨ ॥

ಪರೀಕ್ಷಾ।

ಯಾ ಸಾ ತಿಕ್ತಾ ಪಿಂಜರಾ ಕೇತಕೀನಾಂ
ಗಂಧಂ ದತ್ತೇ ಲಾಘವಂ ತೋಲನೇನ(ಚ)।
ಯಾಽಪ್ಸುನ್ಯಸ್ತಾ ನೈವ ವೈವರ್ಣ್ಯಮಾಯಾತ್
ಕಸ್ತೂರೀ ಸಾ ರಾಜಭೋಗ್ಯಾ ಪ್ರಶಸ್ತಾ ॥ ೧೩೩ ॥

ಅಪಿಚ।

ಯಾ ಗಂಧಂ ಕೇತಕೀನಾಂ ವಹತಿ ಭೃಶತರಂ ವರ್ಣತಃ ಕುಂಜರಾಭಾ।
ಸ್ವಾದೇ ತಿಕ್ತಾ ಕಟುರ್ವಾ ಲಘು ಪರಿತುಲಿತಾ ಮರ್ದಿತಾ ಚಿಕ್ಕಣಾ ಸ್ಯಾತ್ ॥
ದಗ್ಧಾನೋ ಯಾತಿ ಭಸ್ಮ(ಭೂತಿಂ) ಚಿಮಿಚಿಮಿ ಕುರುತೇ ಚರ್ಮಗಂಧಾ ಹುತಾಶೇ।
ಸಾ ಶುದ್ಧಾ ಶೋಭನೀ ಯಾ ಮೃಗವರ ತನುಜಾ ರಾಜಯೋಗ್ಯಾ ಪ್ರದಿಷ್ಟಾ ॥ ೧೩೪ ॥

ಪಾಠಾಂತರಂ।

ಯಾ ಗಂಧಂ ಕೇತಕೀನಾಂ ಅಪಹರತಿ ಮದಂ ಸಿಂಧುರಾಣಾಂ ಚ ವರ್ಣೇ (ರ್ಣಂ)
ಸ್ವಾದೇ ತಿಕ್ತಾ ಕಟುರ್ವಾ ಲಘುರಥ ತುಲಿತಾ ಮರ್ದಿತಾ ಚಿಕ್ಕಣಾಸ್ಯಾತ್।
ದಾಹಂ ಯಾ ನೈತಿ ವಹ್ನೌ ಶಿಮಿಶಿಮಿತಿ ಚಿರಂ ಚರ್ಮಗಂಧಾ ಹುತಾಶೇ
ಸಾ ಕಸ್ತೂರೀ ಪ್ರಶಸ್ತಾ ವರಮೃಗತನುಜಾ ರಾಜತೇ ರಾಜಭೋಗ್ಯಾ ॥ ೧೩೫ ॥

Rarest Archive

೧೩೨. ಪುಡಿಯಾದ ಕಸ್ತೂರಿಗೆ 'ಖರಿಕಾ' ಎಂಬುದಾಗಿಯೂ, ಎಳ್ಳಿನಾಕಾರದಲ್ಲಿರುವ ಕಸ್ತೂರಿಗೆ 'ತಿಲಕಾ' ಎಂದೂ, ಹುರುಳಿಯಂತಿರುವ ಕಸ್ತೂರಿಗೆ 'ಕುಲತ್ಥಿಕಾ' ಎಂದೂ, ಅದಕ್ಕಿಂತಲೂ ದಪ್ಪವಾಗಿದ್ದಲ್ಲಿ 'ಸಿದ್ಧಿಕಾ' ಎಂದೂ, ಬಹಳ ದಪ್ಪವಾಗಿದ್ದಲ್ಲಿ 'ನಾಯಿಕಾ' ಎಂದೂ ಹೆಸರುಳ್ಳದ್ದಾಗುತ್ತದೆ.

## ಪರೀಕ್ಷೆ ಮಾಡುವ ವಿಧಾನ :

೧೩೩. ಯಾವ ಕಸ್ತೂರಿಯು ಕಹಿಯಾಗಿದ್ದು, ಹಳದಿ ಕೆಂಪು ಬಣ್ಣದ್ದಾಗಿದ್ದು ತಾಳೆಯ ಹೂವಿನ ವಾಸನೆಯನ್ನು ಹೊಂದಿದ್ದು, ಹಗುರವಾಗಿದ್ದು ನೀರಿನಲ್ಲಿ ತೋಯ್ಸಿದರೂ ವಿಕಾರವನು ಹೊಂದುವುದಿಲ್ಲವೋ ಅದು ರಾಜರುಗಳ ಉಪಯೋಗಕ್ಕೂ ಪ್ರಶಸ್ತವಾದ ಕಸ್ತೂರಿಯು.

## ಮತ್ತು

೧೩೪. ತಾಳೆಯ ಹೂವಿನ ವಾಸನೆಯನ್ನು ಹೊಂದಿರುವ, ಆನೆಯ ಬಣ್ಣದಂತಿರುವ, ರುಚಿಯಲ್ಲಿ ಕಹಿಯೂ, ಖಾರವೂ ಆದ, ತೂಕವು ಕಡಿಮೆಯಾಗಿರುವ, ಉಜ್ಜಿದಲ್ಲಿ ಮೃದುವಾದ, ಸುಟ್ಟರೂ ಭಸ್ಮವಾಗದ ಬೆಂಕಿಯಲ್ಲಿ ಹಾಕಿದಲ್ಲಿ ಚರ್ಮಸುಟ್ಟ ವಾಸನೆಯು ಬರುವ ಕಸ್ತೂರಿಯು ಉತ್ತಮವಾದ ಮೃಗದಿಂದ ಹುಟ್ಟಿರುವುದರಿಂದ ರಾಜಯೋಗ್ಯವಾಗಿ ಇರುವುದಾಗಿರುತ್ತದೆ.

## ಪಾಠಾಂತರವು

೧೩೫. ಈ ಶ್ಲೋಕವು ಮೇಲಿನ ಶ್ಲೋಕದಿಂದ ಪದಗಳಲ್ಲಿ ಸ್ವಲ್ಪ ಬದಲಾವಣೆಯಾಗಿದ್ದರೂ ತಾತ್ಪರ್ಯಾರ್ಥದಲ್ಲಿ ೧೩೪ನೇ ಶ್ಲೋಕದ ಅರ್ಥವನ್ನೇ ಕೊಡುತ್ತದೆ.

ಕಸ್ತೂರೀ ಸೌರಭಾಢ್ಯಾ ಕಟುಕರಸ ಗುರುಕ್ಷಾರ ತಿಕ್ತೋಷ್ಣ
ಯುಕ್ತಾ ।
ಶೀತಾ ದೋಷಾಪಹಂತ್ರೀ ಕಫ ಪವನಹರಾ ಪಿತ್ತ ಕೃಚ್ಛ್ರಕೃಲಾ ಚ
ಸಂತಪ್ತೋಲ್ಲಾಸ ಹೇತುರ್ವಮತು (ಥು) ವಿಷಹರಾ ಗಾತ್ರ
ದೌರ್ಗಂಧ್ಯಹಂತ್ರೀ
ತೃಷ್ಣಾಂ ಪಿತ್ತಪ್ರಕೋಪಂ ಪ್ರಶಮಯತಿ ಭೃಶಂ ಹಂತಿ ಶೋಷಂ
ವಿಷಂ ಚ ॥ ೧೩೬ ॥

ಬಾಲೇ ಜರತಿ ಚ ಹರಿಣೇ ಕ್ಷೀಣೇ ರೋಗಿಣಿ ಚ ಮಂದಗಂಧಾ
(ಂಧಯುತಾ)।
ಕಾಮಾತುರೇ ಚ ತರುಣೇ ಕಸ್ತೂರೀ ಬಹು ಪರಿಮಲಾ ಭವತಿ
॥ ೧೩೭ ॥

ಕೃತಕಾ ।

ಕರತಲ ಜಲಮಧ್ಯೇ ಸ್ಥಾಪನೀಯಾ ಮಹದ್ಭಿಃ
ಪುನರಪಿ ತದವಶ್ಯಂ ಚಿಂತನೀಯಾ ಮುಹೂರ್ತಂ ।
ಯದಿ ಭವತಿ ಚ ರಕ್ತಂ ತಜ್ಜಲಂ ಪೀತವರ್ಣಂ
ನ ಭವತಿ ಮೃಗನಾಭಿಃ ಕೃತ್ರಿಮೋಽಯಂ ವಿಕಾರಃ॥೧೩೮॥

ಅಪಿಚ ।

ಯಾ ಸ್ನಿಗ್ಧಾ ಧೂಮಗಂಧಾ ದ (ವ) ಹತಿ ವಿನಿಹಿತಾ ಪೀತತಾಂ
ಯಾದ್ರಸೋಂತ (ಪಾಥಸೋಂಥ)
ನಿಃಶೇಷಂ ಯಾ ನಿವಿಷ್ಟಾ ಭವತಿ ಹುತವಹೇ ಭಸ್ಮಸಾದೇವ ಸದ್ಯಃ
ಯಾ ಚ ನ್ಯಸ್ತಾ ತುಲಾಯಾಂ ಕಲಯತಿ ಗುರುತಾಂ ಮರ್ದಿತಾ
ರೂಕ್ಷತಾಂ ಚ
ಜ್ಞೇಯಾ ಕಸ್ತೂರಿಕೇಯಂ ಖಲು ಕೃತಮತಿಭಿಃ ಕೃತ್ರಿಮಾ ಚೈವ
ಸದ್ಯಃ ॥ ೧೩೯ ॥

Rarest Archiver

೧೩೬. ಸುಗಂಧವಾಗಿರುವ ಕಸ್ತೂರಿಯು ಖಾರ, ಕಹಿ, ಉಪ್ಪು, ಈ ಮೂರು ರಸವುಳ್ಳದ್ದಾಗಿದ್ದು, ಶೈತ್ಯಸಂಬಂಧವಾದ ದೋಷಗಳನ್ನು ಕಳೆಯುತ್ತದೆ. ಕಫ, ವಾತಗಳನ್ನು ಕಳೆಯುತ್ತದೆ. ಪಿತ್ಥವನ್ನುಂಟು ಮಾಡುತ್ತದೆ. ಶುಕ್ರವನ್ನು ಕಡಿಮೆಮಾಡುತ್ತದೆ. ಆಯಾಸಗೊಂಡವರಿಗೆ ನೆಮ್ಮದಿಯನ್ನುಂಟುಮಾಡುತ್ತದೆ. ವಾಂತಿ, ವಿಷ, ದೇಹದುರ್ಗಂಧ ಬಾಯಾರಿಕೆ, ಪಿತ್ಥಪ್ರಕೋಪ, ಕ್ಷಯ, ಮತ್ತು ವಿಷವನ್ನು ಕಳೆಯುತ್ತದೆ.

೧೩೭. ಹುಡುಗನಲ್ಲಿಯೂ ಮುದುಕನಲ್ಲಿಯೂ ಕ್ಷಯರೋಗದವನಲ್ಲಿಯೂ ಸ್ವಲ್ಪವೇ ಗಂಧವು ತಿಳಿಯಲಾಗುತ್ತದೆ, ಕಾಮಾತುರನಾದ ತರುಣನಾದರೋ ಅದರ ಪರಿಮಳವನ್ನು ಸಂಪೂರ್ಣವಾಗಿ ತಿಳಿಯುತ್ತಾನೆ.

ಕಸ್ತೂರಿಯ ಪರೀಕ್ಷೆ :

೧೩೮. ಅಂಗೈಯ ನೀರಿನಲ್ಲಿ ಕಸ್ತೂರಿಯನ್ನು ಹಾಕಿದ ಸುಮಾರು ಒಂದು ಮೂಹೂರ್ತದ ತರುವಾಯ ಆ ನೀರು ಕೆಂಪಾದಲ್ಲಿ ಅಥವಾ ಹಳದಿಯಾದಲ್ಲಿ ಆ ಕಸ್ತೂರಿಯು ಕೃತ್ರಿಮವೆಂದು ತಿಳಿಯತಕ್ಕದ್ದು.

ಮತ್ತು

೧೩೯. ಯಾವುದು ಮೃದುವಾಗಿಯೂ, ಹೊಗೆ ವಾಸನೆಯುಳ್ಳದ್ದಾಗಿಯೂ, ನೀರಿನಲ್ಲಿ ಹಳದಿ ಬಣ್ಣವನ್ನು ಹೊಂದುವುದಾಗಿಯೂ, ಬೆಂಕಿಯಲ್ಲಿ ಭಸ್ಮವಾಗುವುದೂ, ಹೆಚ್ಚು ತೂಕವುಳ್ಳದ್ದೂ ಪುಡಿಮಾಡಿದಲ್ಲಿ ಒರಟಾಗಿರುವುದೊ ಆ ಕಸ್ತೂರಿಯು ಕೃತ್ರಿಮವು.

Rarest Archiver

ಶುದ್ಧೋ ವಾ ಮಲಿನ (ನೋ) ಸ್ತು ವಾ ಮೃಗಮದಃ ಕಿಂ ಜಾತ
ಮೇತಾವತಾ
ಕೋಽಪ್ಯಸ್ಯಾನವಧಿಶ್ಚ ಮತ್ಸ್ಪತಿನಿಧಿಃ ಸೌರಭ್ಯಮೇಕೋ ಗುಣಃ
ಯೇ ನಾಸೌಸ್ಯ (ಸ್ಯ) ರ ಮಂಡನೈಕ ವಸತಿ ರ್ಬಾಲೇ ಕಪೋಲೇ
ಗಲೇ
ದೋ ರ್ಮೂಲೇ ಕುಚ ಮಂಡಲೇ ಚ ಕುರುತೇ ಸಂಗಂ ಕುರಂಗೀ
ದೃಶಾಂ || ೧೪೦ ||

ಮುಸ್ತಾ ಚರಂತಿ ಕಾಶ್ಮೀರಾ ನೇಪಾಲಾ ಮಾಂಸ ಭಕ್ಷಿಣಃ
ಗ್ರಂಥಿಪರ್ಣ ಕೃತಾಹಾರಾಃ ಕಾಮರೂಪೋದ್ಭವಾಃ ಸ್ಮೃತಾಃ ||
|| ೧೪೧ ||

ಕಾಶ್ಮೀರೇ ಪಿಚ್ಛಲಚ್ಛಾಯಾ ನೇಪಾಲೇ ಚೈವಲೋಹಿತಾ ।
ಕಾಮರೊಪೋದ್ಭವಾ ಕೃಷ್ಣಾ ಕಸ್ತೂರೀ ತ್ರಿವಿಧಾಸ್ಮೃತಾ ||
|| ೧೪೨ ||

ಅಥ ಲತಾ ಕಸ್ತೂರೀ ।

ಲತಾ ಕಸ್ತೂರಿಕಾ ಜ್ಞೇಯಾ ಕಟುರ್ದಕ್ಷಿಣ ದೇಶಜಾ ।
ಲತಾ ಕಸ್ತೂರಿಕಾ ತಿಕ್ತಾಸ್ವಾದೀ ವೃಷ್ಯಾ ಹಿಮಾಲಘುಃ ।
ಚಕ್ಷುಷ್ಯಾ ಛೇದಿನೀ ಶ್ಲೇಷ್ಮ ತೃಷ್ಣಾಭಸ್ತ್ಯಾರ್ತಿರೋಗಜಿತ್ ||
|| ೧೪೩ ||

Rarest Archive

## ಕಸ್ತೂರಿಯ ಪ್ರಶಂಸೆಯು.

೧೪೦. ಕಸ್ತೂರಿಯು ಶುದ್ಧವಾಗಲೀ, ಕೃತ್ರಿಮವಾಗಲೀ ಚಮತ್ಕಾರವನ್ನುಂಟುಮಾಡುವ ಸುವಾಸನೆಯನ್ನು ಪಡೆದಿದ್ದಲ್ಲಿ ಅದು ಉತ್ತಮವಾದುದೆ. ಏಕೆಂದರೆ, ಕಾಮೋದ್ದೀಪನಗಳಲ್ಲಿ, ಕಸ್ತೂರಿ ಮುಖ್ಯ ಸಾಧನವಾಗಿರುವುದಲ್ಲದೆ, ಸ್ತ್ರೀಯರ ಹಣೆಯಲ್ಲಿಯೂ, ಕಪೋಲಗಳಲ್ಲಿಯೂ ಕುತ್ತಿಗೆಯಲ್ಲಿಯೂ, ಭುಜಮೂಲಗಳಲ್ಲಿಯೂ, ಸ್ತನಮಂಡಲದಲ್ಲಿಯೂ ಉಪಯೋಗವನ್ನು ಹೊಂದುತ್ತದೆ.

೧೪೧. ಕಾಶ್ಮೀರದೇಶದ ಕಸ್ತೂರಿಮೃಗಗಳು ಹುಲ್ಲುಗೆಡ್ಡೆಗಳನ್ನು ತಿನ್ನುತ್ತವೆ. ನೇಪಾಲದೇಶದ ಮೃಗಗಳು ಮಾಂಸವನ್ನು ತಿನ್ನುತ್ತವೆ. ಕಾಮರೂಪ ದೇಶದ ಮೃಗಗಳು ಮಾಚಿಪತ್ರೆಯನ್ನು ತಿನ್ನುತ್ತವೆ.

೧೪೨. ಕಾಶ್ಮೀರದಲ್ಲಿನ ಮೃಗಗಳು ಬಿಳುಪು ಮಿಶ್ರವಾದ ಕಪ್ಪು ಬಣ್ಣದ್ದಾಗಿರುತ್ತದೆ. ನೇಪಾಲ ದೇಶದ ಮೃಗಗಳು ಕೆಂಪಾಗಿರುತ್ತವೆ. ಕಾಮರೂಪದಲ್ಲಿರುವ ಮೃಗಗಳು ಕರ್ರಗಿರುತ್ತವೆ.

## ಲತಾ ಕಸ್ತೂರಿಯ ವಿಚಾರ.

೧೪೩. ಲತಾ ಕಸ್ತೂರಿಯು ದಕ್ಷಿಣ ದೇಶದಲ್ಲಿ ಹುಟ್ಟುತ್ತದೆ. ಖಾರವಾಗಿಯೂ, ಕಹಿಯಾಗಿಯೂ ಇದ್ದು, ಶುಕ್ರವೃದ್ಧಿಯನ್ನುಂಟು ಮಾಡುತ್ತದೆ. ಲಘುವಾಗಿರುತ್ತದೆ. ಕಣ್ಣಿಗೆ ಇಂಪನ್ನು ಉಂಟುಮಾಡುವುದಲ್ಲದೆ ಶ್ಲೇಷ್ಮ, ಬಾಯಾರಿಕೆ. ಕೆಳಹೊಟ್ಟೆಯ ರೋಗಗಳನ್ನು ಪರಿಹರಿಸುತ್ತದೆ.

Rarest Archive

ಇತಿ

## ಸುವರ್ಣದಲಗುಣಾಃ

ಶುದ್ಧಂ ಸ್ವರ್ಣದಲಂ ಸಮಸ್ತ ವಿಷ ಹೃಚ್ಛೂಲಾಮ್ಲ ಪಿತ್ತಾಪಹಂ
ಹೃದ್ಯಂ ಪುಷ್ಟಿಕರಂ ಕ್ಷಯವ್ರಣಹರಂ ಕಾಯಾಗ್ನಿಮಾಂದ್ಯಂ
ಜಯೇತ್
ಹಿಧ್ಮಾನಾಹ ನಿರಂತರಂ ಕಫ ಮರುನ್ನೃಣಾಂ ಹಿತಂ ಸರ್ವದಾ
ತತ್ತದ್ದೋಷಹರಾನುಪಾನ ಸಹಿತಂ ಸರ್ವಾಮಯ ಧ್ವಂಸನಂ ॥
॥ ೧೪೪ ॥

ಇತಿ ಯೋಗರತ್ನಂ ।

## ವೈದ್ಯಾಮೃತೇ ।

ನವನೀತ ಸಿತಾ ಮಧುಪ್ರಯುಕ್ತೋ ವರ್ಣೋ ಹೇಮಭವಃ
ಕ್ಷಯಂ ಕ್ಷಿಣೋತಿ ।
ವಿತಥಃ ಪ್ರಭವೇದಯಂ ಪ್ರಯೋಗೋ ಯದಿ ತನ್ಮೇ ಶಪಥಃ
ಸದಾಶಿವಸ್ಯ ॥ ೧೪೫ ॥

## ರೌಪ್ಯದಲ ಗುಣಾಃ

ಗುರು ಸ್ನಿಗ್ಧಂ ಮೃದು ಶ್ವೇತಂ ದಾಹೇ ಛೇದೇ ಚ ಯತ್ಕ್ಷಮಂ ।
ವರ್ಣಾಗ್ರ್ಯಂ ಚಂದ್ರವತ್ ಖಚ್ಛಂ ತಾರಾಪತ್ರ ಗುಣಾ ನವ ॥ ೧೪೬ ॥

## ಯೋಗರತ್ನೇ

ಕೃತ್ರಿಮಂ ಕಠಿನಂ ರೂಕ್ಷಂ ರಕ್ತ (ಕ್ತಂ) ಪಿತ್ತ (ಪೀತ) ದಲಂ ಲಘು
ದಾಹೇ ಛೇದೇ ಚ ಯನ್ನಷ್ಟಂ ರೂಪ್ಯೇದೋಷಾ ದಶಸ್ಮೃತಾಃ ॥
॥ ೧೪೭ ॥

ಇತಿ ಕೃತ್ರಿಮ ವರ್ಣ ಪರೀಕ್ಷಾ ಗುಣಾಃ ।

Rarest Archiver

## ಭಂಗಾರದ ವರಖಿನ ಗುಣಗಳು

೧೪೪. ಸುವರ್ಣದಲವು ಸಮಸ್ತ ವಿಷಗಳನ್ನೂ ಪರಿಹರಿಸುತ್ತದೆ. ಹೊಟ್ಟೆನೋವು, ಪಿತ್ತ ಇವುಗಳನ್ನು ಪರಿಹರಿಸುತ್ತದೆ. ಹೃದಯಕ್ಕೆ ಶಕ್ತಿಯನ್ನುಂಟುಮಾಡಿ, ಪುಷ್ಟಿಯನ್ನುಂಟು ಮಾಡುತ್ತದೆ, ಕ್ಷಯರೋಗವನ್ನು ವ್ರಣವನ್ನು ಕಡಿಮೆಮಾಡುತ್ತದೆ. ಶರೀರದ ಉಷ್ಣವನ್ನು ಹೆಚ್ಚಿಸುತ್ತದೆ. ಬಿಕ್ಕಳಿಕೆ. ಮಲಮೂತ್ರ ಕಟ್ಟುವಿಕೆಯನ್ನು ಕಡಿಮೆಮಾಡುತ್ತದೆ. ಕಫವನ್ನು ಕಳೆಯುತ್ತದೆ ಮತ್ತು ಆಯಾ ದೋಷಗಳನ್ನು ಪರಿಹರಿಸುವ ಅನುಪಾನದಿಂದ (ಜೊತೆಯಲ್ಲಿ ಸೇರಿಸುವ ಪದಾರ್ಥಗಳು ಕೂಡಿದಲ್ಲಿ) ಎಲ್ಲಾ ರೋಗಗಳನ್ನು ಕಳೆಯುತ್ತದೆ ಎಂದು ಯೋಗರತ್ನ ಗ್ರಂಥದಲ್ಲಿ ಹೇಳಿದೆ.

### ವೈದ್ಯಾಮೃತದಲ್ಲಿರುವುದು

೧೪೫. ಬೆಣ್ಣೆ, ಬಿಳಿಯಸಾಸಿವೆಎಣ್ಣೆ, ಮತ್ತು ಜೇನು ಇವುಗಳನ್ನು ಕೂಡಿಸಿ ಭಂಗಾರದ ತಗಡನ್ನು ಉಪಯೋಗಿಸಿದಲ್ಲಿ ಕ್ಷಯರೋಗದ ಪರಿಹಾರವಾಗುತ್ತದೆ. ಶ್ರೀ ಸದಾಶಿವನ ಆಣೆಯಾಗಿ ಈ ಪ್ರಯೋಗವು ಸುಳ್ಳಾಗುವುದಿಲ್ಲವೆಂದು ನಾನು ಶಪಥ ಮಾಡುತ್ತೇನೆ.

### ಬೆಳ್ಳಿಯ ವರಖಿನ ಗುಣಗಳು

೧೪೬. ಬೆಳ್ಳಿಯ ವರಖು ತೂಕವುಳ್ಳದ್ದಾಗಿಯೂ, ನುಣುಪಾಗಿಯೂ, ಮೆತ್ತಗಾಗಿಯೂ, ಬಿಳಿಯ ಬಣ್ಣವುಳ್ಳದ್ದಾಗಿಯೂ, ಬೆಂಕಿಯಲ್ಲಿ ಕರಗಿಸಲೂ, ಕತ್ತರಿಸಲೂ, ತಟ್ಟಲೂ, ಯೋಗ್ಯವಾಗಿದ್ದು, ಶ್ರೇಷ್ಠವಾದ ಬಣ್ಣವುಳ್ಳದ್ದೂ, ಕರ್ಪೂರದಂತೆ ಸ್ವಚ್ಛವಾದದ್ದೂ ಆಗಿರುತ್ತದೆ.

### ಯೋಗರತ್ನ ಗ್ರಂಥದಲ್ಲಿ

೧೪೭. ಕೃತ್ರಿಮವಾದದ್ದು, ಕಠಿಣವೂ. ರೂಕ್ಷವೂ (ತೀಕ್ಷ್ಣವೂ) ಕೆಂಪು ಮತ್ತು ಹಳದಿ ಬಣ್ಣವುಳ್ಳದ್ದೂ, ಬೆಂಕಿಯಲ್ಲಿ ಬೂದಿಯಾಗದ ಛೇದನದಲ್ಲಿಯೂ ಸಮರ್ಥವಲ್ಲದ ಬೆಳ್ಳಿಯು ದುಷ್ಟವಾದುದು ಎಂದು ತಿಳಿಯತಕ್ಕದ್ದು.

Rarest Archiver

ಭದ್ರಾವು ನಾವು ಗುಣಾಃ ।

ಈಷದ್ದೀರ್ಘಂ ಚ ವಾತಾಮಂ ಮಧುರಂ ಸ್ನಿಗ್ಧಮಜ್ಜಕಂ ।

ಮಿಶ್ರಃ

ವಾತಾದೋ ವಾತವೈರೀ ಸ್ಯಾನ್ ನೇತ್ರೋಪಮ ಫಲಸ್ತಥಾ ।
ವಾತಾದ ಉಷ್ಣ ಸುಸ್ನಿಗ್ಧೋ ವಾತಘ್ನಃ ಶುಕ್ರ ಕೃದ್ ಗುರುಃ ॥
॥ ೧೪೮ ॥

ವಾತಾದ ಮಜ್ಜಾ ಮಧುರೊ ವೃಷ್ಯ ಪಿತ್ತ ಮಲಾಪಹಃ ।
ಸ್ನಿಗ್ಧೋಷ್ಣಃ ಕಫ ಕೃಚ್ಛ್ರೇಷ್ಮೋ ರಕ್ತ ಪಿತ್ತ ವಿಕಾರಿಣಾಂ ॥
॥ ೧೪೯ ॥

ಕಂಕೋಲಂ ।

ಕಂಕೋಲಕಂ ಕೃತಫಲಂ ಕಂಕೋಲಂ (ಕೋಲಕಂ) ಕಟುಕಂ ಫಲಂ ।
ದ್ವೇಷ್ಯಂ ಸ್ಥೂಲ ಮರೀಚಂ ತು ಕಂಕೋಲಂ ಮಾದವೋಷಿತಂ
ಕೋಲಂ ಚ ಕಟ್ಫಲಂ ಪ್ರೋಕ್ತಂ ಮರೀಚಂ ರುದ್ರಸಮ್ಮಿತಂ ॥
॥ ೧೫೦ ॥

ಕಂಕೋಲಂ ಕಟುತಿಕ್ತೋಷ್ಣಂ ವಕ್ತ್ರಜಾಡ್ಯಹರಂ ಪರಂ ।
ದೀಪನಂ ಪಾಚನಂ ರುಚ್ಯಂ ಕಫ ವಾತಾರ್ತಿ ಕೃಂತನಂ ॥ ೧೫೧ ॥

ಕಂಕೋಲಂ ಲಘು ತಿಕ್ತೋಷ್ಣಂ ತೀಕ್ಷ್ಣಂ ಹೃದ್ಯಂ ರುಚಿಪ್ರದಂ
ಕಫಾನಿಲಸ್ಯ ದೌರ್ಗಂಧ್ಯ ಹೃದ್ರೋಗ ಕೃಮಿ ಮಾಂದ್ಯಜಿತ್ ॥
॥ ೧೫೨ ॥

Rarest Archive

## ಬಾದಾಮಿಯ ಗುಣಗಳು-ಮಿಶ್ರ

೧೪೮. ಉದ್ದವಾದದ್ದು ಮಧುರವೂ, ಜಿಡ್ಡನ್ನು ಹೆಚ್ಚಾಗಿ ಕೊಡುವ ಹಾಲುಳ್ಳದ್ದೂ ಆದ ಬಾದಾಮಿಗೆ 'ವಾತಾಮ' ಎಂದು ಹೆಸರು. 'ವಾತಾದ' ಅಥವಾ 'ವಾತವೈರಿ' ಎನ್ನುವುದಾಗಿ ಕಣ್ಣಿನಂತೆ ಇರುವ ಬಾದಾಮಿಗೆ ಹೆಸರು. 'ವಾತಾದ' ಎನ್ನುವ ಬಾದಾಮಿಯು ಉಷ್ಣಕರವಾಗಿಯೂ, ಹೆಚ್ಚಾಗಿ ಎಣ್ಣೆಯುಳ್ಳದ್ದೂ, ವಾಯುವನ್ನು ಕಳೆಯುವುದಾಗಿಯೂ, ಶುಕ್ರಾಭಿವೃದ್ಧಿಯನ್ನುಂಟುಮಾಡುವುದಾಗಿಯೂ, ತೂಕಹೆಚ್ಚಾಗಿ ಉಳ್ಳದ್ದಾಗಿಯೂ ಇರುತ್ತದೆ.

೧೪೯. 'ವಾತಾದ' ಎಂಬ ಬಾದಾಮಿಯ ಹಾಲು ಮಧುರವೂ, ಶುಕ್ರವೃದ್ಧಿಕಾರಿಯೂ, ಪಿತ್ತದೋಷವನ್ನು ಪರಿಹರಿಸುವುದಾಗಿಯೂ, ಆಗಿರುತ್ತದೆ. ಮತ್ತು ಹೆಚ್ಚಾಗಿ ಎಣ್ಣೆಯುಳ್ಳದ್ದೂ, ಉಷ್ಣಕಾರಕವೂ, ಕಫಕಾರಕವೂ ಆಗಿರುತ್ತದೆ. ಆದರೆ ರಕ್ತ, ಪಿತ್ತ, ಸಂಬಂಧವಾದ ರೋಗ ಉಳ್ಳವರಿಗೆ ಶ್ರೇಷ್ಠವಾದುದು.

### ತಕ್ಕೋಲವು

೧೫೦. ತಕ್ಕೋಲವು ಕಂಕೋಲಕ; ಕೃತಿಫಲ; ಕೋಲಕ; ಕಟುಕ; ದ್ವೇಷ್ಯ; ಸ್ಥೂಲಮರೀಚ; ಕಂಕೋಲ; ಮಾದವೋಷಿತ; ಕೋಲ; ಕಟ್ಫಲ; ಮರೀಚ; ರುದ್ರಸಮ್ಮಿತ; ಎನ್ನುವ ಹೆಸರುಗಳಿಂದ ಕರೆಯಲ್ಪಡುತ್ತದೆ.

೧೫೧. ಕಂಕೋಲವು ಕಹಿ, ಖಾರ ರಸವುಳ್ಳದ್ದೂ, ಉಷ್ಣಕಾರಕವೂ, ಬಾಯಿಯಲ್ಲಿರುವ ಜಾಡ್ಯವನ್ನು ಕಳೆಯುವುದೂ, ಮತ್ತು ದೀಪನ, ಪಾಚನ, ರುಚಿಗಳನ್ನು ವೃದ್ಧಿಪಡಿಸುವುದೂ ಅಲ್ಲದೆ, ಕಫ, ವಾಯುಗಳಿಂದುಂಟಾಗುವ ರೋಗಗಳನ್ನು ಪರಿಹರಿಸುತ್ತದೆ.

೧೫೨. ಕಂಕೋಲವು ಶರೀರವನ್ನು ಹಗುರವನ್ನಾಗಿಸಿ, ಹೃದಯಕ್ಕೆ ಬಲಕೊಡುವುದೂ. ರುಚಿ ಪ್ರದವೂ, ತೀಕ್ಷ್ಣೋಷ್ಣವೂ, ಅಲ್ಲದೆ ಕಫ, ವಾತ, ಬಾಯಿಯಲ್ಲಿನ ದುರ್ವಾಸನೆ, ಹೃದಯರೋಗ, ಕ್ರಿಮಿಗಳು ಮತ್ತು ಅಗ್ನಿಮಾಂದ್ಯ ಇವುಗಳನ್ನು ಕಡಿಮೆಮಾಡುತ್ತದೆ.

Rarest Archiver

## ತೃಣಕೇಸರಂ।

ತೃಣಕುಂಕುಮಂ ತೃಣಾಸ್ತೃಗ್ (ಸ್ರಂ) ಗಂಧಿ, ತೃಣಂ ಶೋಣಿತಂ
(ಚ) ತೃಣಪುಷ್ಪಂ।
ಗಂಧಾಧಿಕಂ ತೃಣೋತ್ಥಂ ತೃಣಗೌರಂ ಲೋಹಿತಂ ಚ ನವಸಂಜಂ॥
॥ ೧೫೩ ॥

ತೃಣಕುಂಕುಮಂ ಕಟೂಷ್ಣಂ ಕಫ ಮಾರುತ ಶೋಫನುತ್।
ಕಂಡೂರ್ತಿ(ತಿ)ಪಾಮಾ ಕುಷ್ಠಾಮದೋಷಘ್ನಂ ಭಾಸ್ಕರಂಪರಂ॥
॥ ೧೫೪ ॥

ತೃಣಕುಂಕುಮಂ ಕಾಶ್ಮೀರೇ ಪ್ರಸಿದ್ಧಂ। ಕುಂಕುಮಂ ಕೇಸರಂ।
ಜ್ಞೇಯುಂ ಕುಂಕುಮಮಗ್ನಿ ಶೇಖರಮಸ್ರುಕ್ ಕಾಶ್ಮೀರಜಂ
ಪೀತಕಂ।
ಕಾಶ್ಮೀರಂ ರುಧಿರಂ ವರಂ ಚ ಪಿಶುನಂ ರಕ್ತ ಶಠಂ ಶೋಣಿತಂ
ಬಾಹ್ಲೀಕಂ ಘು(ಘು)ಸೃಣಂ ವರೇಣ್ಯ ಮರುಣಂ ಕಾಲೇಯುಕಂ
ಜಾಗುಡಂ।
ಕಾಂತಿಂ ವಹ್ನಿ ಶಿಖಂ ಚ ಕೇಸರವರಂ ಗೌರಂ ಕರಾಕ್ಷೀರಿತಂ॥
॥ ೧೫೫ ॥

ಕುಂಕುಮಂ ಕಟುಕಂ ತಿಕ್ತಂ ವ್ರಣ್ಯಂ ವ್ರಣವಿಶೋಧನಂ
ಹಂತಿ ದೋಷತ್ರಯುಂ ಹಿದ್ಮಾಶಿರೊ(ರೋ)ಗವಮಿಕೃಮೀನ್॥
॥ ೧೫೬ ॥

ಕೌಂಕುಮಂ ಪುಷ್ಪಮಾರಕ್ತಂ ಗಂಧವತ್ ಸೂಕ್ಷ್ಮಕೇಸರಂ।
ಕಾಶ್ಮೀರೇಷು ಚ ಸಂಜಾತಂ ಪದ್ಮಗಂಧಿ ತದುತ್ತಮಂ ॥ ೧೫೭ ॥

ಅತಿ ಸ್ಥೂಲ ಲತಾ ರೂಪಂ ಮಧ್ಯಮಂ ಕಥಯಂತಿ ಹಿ।
ಅಪಾಂಡುರಂ ಖರಂ ಚೈನ ಸ್ಥೂಲಕೇಸರಮೇವಚ ॥ ೧೫೮ ॥

Rarest Archive

## ಕುಂಕುಮ ಕೇಸರಿ

೧೫೩. ತೃಣಕೇಸರವು, ತೃಣಕುಂಕುಮ, ತೃಣಾಸ್ರ; ಗಂಧಿತೃಣ; ಶೋಣಿತ; ತೃಣಪುಷ್ಪ; ಗಂಧಧಿಕ; ತೃಣೋತ್ಥ, ತೃಣಗೌರ, ಲೋಹಿತ; ಎನ್ನುವ ಒಂಬತ್ತು ಹೆಸರುಗಳುಳ್ಳದ್ದು.

೧೫೪. ಕುಂಕುಮ ಕೇಸರಿಯು ಖಾರವು, ಉಷ್ಣಕಾರಕವೂ, ಕಫ, ವಾತ, ಶೋಭೆ, ಇವುಗಳನ್ನು ಪರಿಹಾರಮಾಡುವುದು, ನವೆ, ತುರಿ, ಕುಷ್ಠ, ಆಮ, ದೋಷಗಳನ್ನು ಕಳೆಯುವುದಲ್ಲದೆ, ಶರೀರಕ್ಕೆ ಉತ್ತಮವಾದ ಕಾಂತಿಯನ್ನು ಕೊಡುತ್ತದೆ.

೧೫೫. ತೃಣಕುಂಕುಮವು ಕಾಶ್ಮೀರ ದೇಶದಲ್ಲಿ ಕುಂಕುಮ ಕೇಸರ ವೆಂದೂ ಮತ್ತು ಕುಂಕುಮ; ಅಗ್ನಿಶೇಖರ; ಅಸೃಕ್; ಕಾಶ್ಮೀರಜ; ಪೀತಕ ಕಾಶ್ಮೀರ; ರುಧಿರ; ವರ; ಪಿಶುನ; ರಕ್ತ; ಶಠ; ಶೋಣಿತ; ಬಾಹ್ಲೀಕ; ಘುಸೃಣ; ವರೇಣ್ಯ; ಅರುಣ; ಕಾಲೇಯುಕ, ಜೌಗುಡ; ಕಾಂತಿ; ವಹ್ನಿಶಿಖ; ಕೇಸರವರ; ಗೌರ; ಕರಾಕ್ಷೀರಿತ; ಎನ್ನುವ ಹೆಸರು ಗಳಿಂದಲೂ ಕರೆಯಲ್ಪಡುತ್ತದೆ.

೧೫೬. ಕುಂಕುಮ ಕೇಸರವು ಖಾರವಾಗಿಯೂ, ವ್ರಣವನ್ನು ಪರಿಹರಿಸತಕ್ಕದ್ದೂ, ದೋಷತ್ರಯಗಳನ್ನು ಪರಿಹರಿಸುವುದೂ ಅಲ್ಲದೆ, ಹಿಧ್ಮಾ (ಪಿತ್ತ), ತಲೆನೋವು, ವಾಂತಿ ಕಡಿಮೆಮಾಡುತ್ತದೆ.

೧೫೭. ಕುಂಕುಮ ಕೇಸರದ ಹೂವು ಕೆಂಪಾಗಿಯೂ, ಸುಗಂಧ ವಾಗಿಯೂ ಸೂಕ್ಷ್ಮವಾದ ಕೇಸರ ಉಳ್ಳದ್ದಾಗಿಯೂ, ಕಾಶ್ಮೀರದೇಶದಲ್ಲಿ ಹುಟ್ಟಿದುದೂ, ಪದ್ಮದಂತೆ ಗಂಧವುಳ್ಳದ್ದೂ, ಉತ್ತಮವಾದದ್ದು ಆಗಿ ರುತ್ತದೆ,

೧೫೮. ದಪ್ಪವಾಗಿಯೂ ಉದ್ದವಾಗಿಯೂ ಬಿಳುಪಾಗಿಯೂ ಮತ್ತು ಒರಟಾಗಿಯೂ ಇರುವ ಕುಂಕುಮಕೇಸರವನ್ನು 'ಮಧ್ಯಮ' ಎಂದು ಕರೆಯುತ್ತಾರೆ.

Rarest Archiver

ಮಧುಗಂಧಿ ಚ ವಿಜ್ಞೇಯಂ ಪಾರಸೀಕಂ ತು ಕುಂಕುಮಂ।
ಬಾಹ್ಲೀಕ ಜಾತಂ ವಿಜ್ಞೇಯಂ ಕುಂಕುಮಂ ಪಾಂಡುವರ್ಣಕಂ।
ಕೇತಕೀ ಗಂಧ ಸಂಯುಕ್ತಂ ಸೂಕ್ಷ್ಮಕೇಸರ ಶೋಭಿತಂ ॥ ೧೫೯ ॥

ಸ್ನಿಗ್ಧ ಚ್ಛಾಯೋಷ್ಣ ತೀಕ್ಷ್ಣಂ ಕಟುಸುರಭಿಗುಣಂ ಕುಂಕುಮಂವಾತ ರಕ್ತಂ।
ರಕ್ತಾದೀನೂರ್ಧ್ವ ಗಾತ್ರೇ ಪ್ರಬಲ ಬಹುರುಜೋ ನಾಶಯೇ ಜ್ಜಾಡ್ಯಹಾರಿ।
ತ್ವಗ್‌ಜಾನ್ ಕಂಡೂತಿಪಾಮಾ ಪ್ರಮುಖ ವಿಷಭವಾನ್ ಧ್ವಂಸ ಯತ್ಯುಗ್ರ ರೋಗಾನ್।
ಸೌವರ್ಣಂ ಕಾಂತಿಮಂಗೇ ವಿತರತಿ ಸತತಂ ಭಾಗ್ಯ ಸೌಭಾಗ್ಯ ಯೋಗಾನ್ ॥ ೧೬೦ ॥

ಕೇಸರಕುಂಕುಮ ಮತ್ರ ಪವಿತ್ರಂ ಮರ್ದನ ಚಾರು ವಪುಃ ಕುರುತೇ ಚ।
ಸೌರಭದೇಹಕರಂ ಚ ಸುಕಾಂತಂ ಪುಣ್ಯವಧೂತಿಲಕೇಷು ಚ ಶಸ್ತಂ ॥ ೧೬೧ ॥

ಇತಿ।

## ಜಾತಿಪತ್ರೀ

ಜಾತಿ ಪತ್ರೀ ಜಾತಿ ಕೋಶೀ ಸುಮನಾ(ನ) ಪತ್ರಿಕಾऽಪಿ ಸಾ।
ಮಾಲತೀ ಪತ್ರಿಕಾ ಪಂಚನಾಮ್ನಾ ಸೌಮನಸಾ ಇತಿ ॥ ೧೬೨ ॥

ಜಾತಿಪತ್ರೀ ಕಟುಸ್ತಿಕ್ತಾ ಸುರಭಿಃ ಕ್ರಿಮಿನಾಶಿನೀ।
ಭಕ್ತ್ರವೈಶದ್ಯ ಜನನೀ ಜಾಡ್ಯ ದೋಷ ನಿಕೃಂತನೀ ॥ ೧೬೩ ॥

ಮಾಲತೀ ಪತ್ರಿಕಾ ಜ್ಞೇಯಾ ಸುಮನಃ ಪತ್ರಿಕಾऽಪಿ ಚ।
ಜಾತಿಪತ್ರೀ ಜಾತಿಕೋಶಃ ತಥಾ ಸೌಮನ ಸಾಯನೀ ॥ ೧೬೪ ॥

Rarest Archiver

೧೫೯. ಪಾರಸೀಕ ದೇಶದಲ್ಲಿ ಹುಟ್ಟಿದ ಕೇಸರ ಕುಂಕುಮವು ಹೆಂಡದಂತೆ ವಾಸನೆಯುಳ್ಳದ್ದು; ಬಿಳಿಯ ಬಣ್ಣವಿರುವ ಕುಂಕುಮಕೇಸರವು ಬಾಹ್ಲೀಕ ದೇಶದ್ದೆಂದು ತಿಳಿಯಬೇಕು. ಅದು ತಾಳೆಯ ಹೂವಿನಂತೆ ಗಂಧವುಳ್ಳದ್ದೂ, ಸೂಕ್ಷ್ಮವಾದ ಕೇಸರದಿಂದ ಕೂಡಿರುವುದೂ ಆಗಿವೆ.

೧೬೦. ಉತ್ತಮವಾದ ಕಾಂತಿಯುಳ್ಳ, ಉಷ್ಣವೂ, ತೀಕ್ಷ್ಣವೂ, ಸುಗಂಧವೂ, ಉಳ್ಳ ಕುಂಕುಮಕೇಸರವು ವಾತ ರಕ್ತವನ್ನೂ, ಶರೀರದ ಮೇಲ್ಭಾಗದಲ್ಲಿ ಉಂಟಾಗುವ ರಕ್ತದೋಷಗಳನ್ನೂ, ಇನ್ನೂ ಪ್ರಬಲವಾದ ಅನೇಕ ರೋಗಗಳನ್ನೂ ನಾಶಮಾಡುವುದಲ್ಲದೆ ಒಳ್ಳೆಯ ಚಟುವಟಿಕೆಯನ್ನು ಕೊಡುತ್ತದೆ. ಚರ್ಮ ಸಂಬಂಧವಾದ ತುರಿ, ಕಜ್ಜಿ ಮುಂತಾದ ವಿಷಜನ್ಯವಾದ ಉಗ್ರರೋಗಗಳನ್ನು ಕಳೆಯುವುದರ ಮೂಲಕ ಶರೀರಕ್ಕೆ ಬಂಗಾರದಂತೆ ಉತ್ತಮವಾದ ಕಾಂತಿಯನ್ನು ಕೊಡುವುದಲ್ಲದೆ, ಸೌಂದರ್ಯವನ್ನೂ ಕೊಡುತ್ತದೆ.

೧೬೧. ಕುಂಕುಮ ಕೇಸರವು ಪವಿತ್ರವಾದುದು. ಅದರ ಲೇಪನದಿಂದ ಶರೀರಕ್ಕೆ ಗಂಧವನ್ನೂ, ಕಾಂತಿಯನ್ನೂ ಉಂಟುಮಾಡುತ್ತದೆ. ಭಾಗ್ಯವಂತರಾದ ಸ್ತ್ರೀಯರ ತಿಲಕಗಳಲ್ಲಿ ಅದರ ಉಪಯೋಗ ಪ್ರಶಸ್ತವಾದುದು.

## ಜಾಯಿಪತ್ರೆ

೧೬೨. ಜಾಯಿಪತ್ರೆಗೆ ಜಾತಿಕೋಶೀ; ಸುಮನಾಪತ್ರಿಕಾ; ಮಾಲತೀಪತ್ರಿಕಾ; ಸೌಮನಸಾ; ಜಾತೀಪತ್ರೀ, ಎಂದು ಐದು ಹೆಸರುಗಳಿವೆ.

೧೬೩. ಜಾತೀಪತ್ರೆಯು ಖಾರವಾಗಿಯೂ, ಕಹಿಯಾಗಿಯೂ, ಸುಗಂಧವಾಗಿಯೂ ಇರುತ್ತದೆ. ಅದು ಕ್ರಿಮಿಗಳನ್ನು ನಾಶಮಾಡುತ್ತದೆ. ಬಾಯಿ ನೈರ್ಮಲ್ಯವನ್ನುಂಟುಮಾಡುತ್ತದೆ. ಮತ್ತು ದೇಹಕ್ಕೆ ಲವಲವಿಕೆಯನ್ನುಂಟುಮಾಡುತ್ತದೆ.

೧೬೪. ಈ ಜಾತಿಪತ್ರೆಯನ್ನು ಮಾಲತೀ ಪತ್ರಿಕಾ, ಸುಮನಪತ್ರಿಕಾ, ಜಾತಿಕೋಶ; ಸೌಮನಸಾಯನೀ, ಎಂದೂ ಕರೆಯುತ್ತಾರೆ.

Rarest Archive

ಜಾತಿಪತ್ರೀ ಕಟುಸ್ತಿಕ್ತಾ ಲಘೂಷ್ಣಾ ರುಚಿ ವರ್ಣಕೃತ್।
ಕಫ ಕಾಸ ವಮಿಶ್ವಾಸ ತೃಷ್ಣಾ ಕೃಮಿ ವಿಷಾಪಹಾ ॥ ೧೬೫ ॥

## ಜಾಯಫಲಂ।

ಜಾತೀಫಲಂ ಜಾತಿಸಸ್ಯಂ ಶಾಲೂಕಂ ಮಾಲತೀ ಫಲಂ।
ಮಜ್ಜಾಸಾರಂ ಜಾತಿಸಾರಂ ಪುಟಮ್ ಚ ಸುಮನಃ ಫಲಮ್॥
॥ ೧೬೬ ॥

ಮದೇ ಶೌಂಡಂ ಜಾತಿ ಸುತಂ ಪುಟಂ ಸೌಮನಸಂ ಫಲಂ।
ಜಾತೀ ಫಲಂ ಕಷಾಯೋಷ್ಣಂ ಕಟು ಕಂಠಾಮಯಾರ್ತಿನುತ್॥
॥ ೧೬೭ ॥

ವಾತಾತಿಸಾರ ದೋಷಘ್ನಂ ವೃಷ್ಯಂ ದೀಪನದಂ ಲಘು।
ಜಾತೀಫಲಂ ರಸೇತಿಕ್ತಂ ತೀಕ್ಷ್ಣೋಷ್ಣಂ ರೋಚನಂ ಲಘು॥
॥ ೧೬೮ ॥

ಕಟುಕಂ ದೀಪನಂ ಹೃದ್ಯಂ ಸ್ವರ್ಯಂ ಶ್ಲೇಷ್ಮನಿಲಾಪಹಂ।
ನಿಹಂತಿ ಮುಖವೈರಸ್ಯಂ ಮಲದೌರ್ಗಂಧ್ಯ ಕೃಷ್ಣತಾಂ।
ಕೃಮಿಕಾಸವಮಿಶ್ವಾಸ ಶೋಷ ಪೀನಸ ಹೃದ್ರುಜಃ ॥ ೧೬೯ ॥

## ಸೂಕ್ಷ್ಮೈಲಾ।

ಸೂಕ್ಷ್ಮೈಲಾ ಮೂತ್ರಕೃಚ್ಛ್ರಾರ್ಶ(ಃ) ಶ್ವಾಸ ಕಾಸ ಕಫಾಪಹಾ।
ಏಲಾತಿಕ್ತಾ ಚ ಲಘ್ವೀ ಸ್ಯಾತ್ ಕಫವಾತ ವಿಷವ್ರಣಾನ್।
ಭಸ್ತಿ ಕಂಠರುಜೋ ಹಂತಿ ಮುಖ ಮಸ್ತಕ ಶೋಧನೀ ॥ ೧೭೦ ॥

Rarest Archive

೧೬೫. ಜಾತಿಪತ್ರಿಯು ಖಾರ ಕಹಿಯಾಗಿರುವುದಲ್ಲದೆ ಲಘು ಮತ್ತು ಉಷ್ಣವಾಗಿಯೂ ರುಚಿ ಮತ್ತು ಕಾಂತಿಯನ್ನು ಕೊಡುವುದಾಗಿಯೂ, ಕಫ, ಶ್ವಾಸ ವಿಕಾಸಗಳು, ವಾಂತಿ, ಬಾಯಾರಿಕೆ, ಕ್ರಿಮಿ, ವಿಷ ಇವುಗಳನ್ನು ಪರಿಹರಿಸತಕ್ಕುದಾಗಿಯೂ ಇರುತ್ತದೆ.

ಜಾಯಿಕಾಯಿ

೧೬೬. ಜಾತೀಫಲವು ಜಾತಿ ಸಸ್ಯ : ಶಾಲೂಕ ; ಮಾಲತೀ ಫಲ, ಮಜ್ಜಾಸಾರ ; ಜಾತಿಸಾರ ; ಪುಟ ; ಸುಮನ ಫಲ ಎಂಬುದಾಗಿ ಹೆಸರುಗಳು ಉಳ್ಳದ್ದಾಗಿದೆ.

೧೬೭. ಮದವನ್ನು ಕೊಡುವುದರಿಂದ ಜಾತೀಫಲವನ್ನು ಮದೇಶೌಂಡ, ಜಾತಿ ಸುತ ; ಪುಟ ; ಸೌಮನಸ ಫಲ ; ಎಂದೂ ಕರೆಯುತ್ತಾರೆ ಮತ್ತು ಈ ಜಾತಿಫಲವು ಖಾರ, ವಗರು ರಸವುಳ್ಳದ್ದೂ ಉಷ್ಣವೂ ಕಂಠದಲ್ಲಿನ ದೋಷವನ್ನು ಪರಿಹಾರಮಾಡುವುದೂ ಆಗಿರುತ್ತದೆ.

೧೬೮. ವಾತ ಮತ್ತು ಅತಿಸಾರ ದೋಷಗಳನ್ನು ಪರಿಹರಿಸುತ್ತದೆ ಲಘುವೂ ಜೀರ್ಣಕಾರಿಯೂ ಆಗಿರುತ್ತದೆ. ವೀರ್ಯವನ್ನು ಅಭಿವೃದ್ಧಿಗೊಳಿಸುತ್ತದೆ. ಹೆಚ್ಚಾದ ಉಷ್ಣಕಾರಿಯೂ ರುಚಿಯನ್ನುಂಟುಮಾಡುವುದೂ ಆಗಿರುತ್ತದೆ.

೧೬೯. ಖಾರವಾಗಿಯೂ, ದೀಪಕವಾಗಿಯೂ, ಹೃದ್ರೋಗವನ್ನು ಕಳೆಯುವುದೂ ಅಲ್ಲದೆ, ಬಾಯಾರಿಕೆಯನ್ನೂ, ಮದ್ಯವನ್ನು ಕುಡಿಯುವುದರಿಂದ ಉಂಟಾಗುವ ದುರ್ವಾಸನೆಯನ್ನೂ ಕಳೆಯುವುದಲ್ಲದೇ ಕ್ರಿಮಿ, ಕಾಸ, ಶ್ವಾಸ, ವಾಂತಿ, ಕ್ಷಯ, ಪೀನಸ : ಹೃದಯ ಸಂಬಂಧವಾದ ರೋಗ ಮುಂತಾದುವುಗಳನ್ನು ಕಳೆಯುತ್ತದೆ.

ಸೂಕ್ಷ್ಮವಾದ ಯಾಲಕ್ಕಿ

೧೭೦. 'ಸೂಕ್ಷ್ಮೈಲಾ' ಎಂಬ ಯಾಲಕ್ಕಿಯು ಮೂತ್ರ ಸಂಬಂಧವಾದ ರೋಗ, ಮೂಲವ್ಯಾಧಿ, ಶ್ವಾಸ, ಕಾಸ, ಕಫ ಇವುಗಳನ್ನು ಪರಿಹರಿಸುತ್ತದೆ. ಮತ್ತು ಕಹಿಯೂ, ಹಗುರವನ್ನುಂಟುಮಾಡುವುದೂ ಆಗಿದ್ದು ಕಫ, ವಾತ, ವಿಷ, ವ್ರಣ, ಇವುಗಳನ್ನೂ, ಕೆಳ ಹೊಟ್ಟೆಯ ಮತ್ತು ಕಂಠದ ರೋಗಗಳನ್ನೂ ಮುಖ ಮತ್ತು ಮೆದುಳಿನ ದೋಷವನ್ನೂ ಪರಿಹರಿಸುತ್ತೆ.

Rarest Archive

ಛರ್ದ್ಯೈಲಾ ಕಟುಕಾ ಪಾಕೇ ರಸೇಽಪಿ (ಚಾ) ಅಗ್ನಿ (ನಲ)
ಕೃಲ್ಲಘುಃ ॥ ೧೭೧ ॥

ರೂಕ್ಷೋಷ್ಣಾ ರೋಚನೀ ಶ್ವಾಸ ಕಫ ಪಿತ್ತಾಸ್ರಕಾಸಹಾ ।
ಹಂತಿ ಹೃಲ್ಲಾಸ ಹೃತ್ಕಂಡೂ ಶಿರೋಭತ್ವಾಸ್ಯರುಗ್ವಮಿಾನ್ ॥
॥ ೧೭೨ ॥

ಏಲಾದ್ವಯಂ ಛರ್ದಿಷು ಮೂತ್ರ ಕೃಚ್ಛ್ರೇ
ಮಂದೇಽನಲೇ ಪಥ್ಯಮರೋಚಕೇ ಚ ।
ಸ್ವಾದು ಸ್ಸುಶೀತೋ ಮಧುರಸ್ಯ (ಶ್ಚ) ಪಾಕೇ
ಅರೋಚಕಂ ಹಂತಿ ಚ ಜಾತಕೋಶಃ ॥ ೧೭೩ ॥

ಏಲಾದ್ವಯಂ ಶೀತಲ ತಿಕ್ತಮುಷ್ಣಂ (ಕ್ತಂ)
ಸುಗಂಧ (ಂಧಿ) ಪಿತ್ತಾರ್ತಿಕಫಾಪಹಾರೀ (ರಿ)।
ಕರೋತಿ ಹೃದ್ರೋಗ ಮಲಾರ್ತಿ ಭಸ್ತಿ—
ಪುಂಸ್ತ್ವಘ್ನಮತ್ರ ಸ್ಥವಿರೋ (ರಾ) ಗುಣಾಢ್ಯ : (ಢ್ಯಾ) ॥ ೧೭೪ ॥

## ಲವಂಗಂ

ಲವಂಗಂ ಶೀತಲಂ ತಿಕ್ತಂ ಚಕ್ಷುಷ್ಯಂ ಭುಕ್ತಲೋ (ರೊ) ಚನಂ।
ವಾತ ಪಿತ್ಥ ಕಫಘ್ನಂ ಚ ತೀಕ್ಷ್ಣಂ ಮೂರ್ಧರುಜಾಪಹಂ ॥೧೭೫॥

ಲವಂಗಂ ಸೋಷ್ಣಕಂ ತೀಕ್ಷ್ಣಂ ವಿಪಾಕೇ ಮಧುರಂ ಹಿಮಂ।
ವಾತ ಪಿತ್ತ ಕಫಾಮಘ್ನಂ ಕ್ಷಯ ಕಾಸಾಸ್ರ ದೋಷಜಿತ್॥ ೧೭೬ ॥

Rarest Archive

೧೬೧. 'ಭದ್ರೈಲಾ' ಎನ್ನುವ ಯಾಲಕ್ಕಿಯು, ಖಾರವಾಗಿಯೂ, ಪರಿಣಾಮದಲ್ಲಿ ಪಿತ್ತ, ಉಷ್ಣವನ್ನುಂಟುಮಾಡುವುದೂ, ಲಘುವೂ ಆಗಿರುತ್ತದೆ.

೧೬೨. ತೀಕ್ಷ್ಣವಾದ ಉಷ್ಣಕಾರಿಯೂ, ರೋಚಕವೂ, ಶ್ವಾಸ, ಕಾಸ, ಕಫ, ಪಿತ್ತ : ಇವುಗಳನ್ನೂ, ನವೆ, ತಲೆ ಮತ್ತು ಬಾಯಿಯಲ್ಲಿನ ರೋಗಗಳನ್ನೂ, ವಾಂತಿಯನ್ನೂ ಹೃದಯದಲ್ಲಿನ ರೋಗಗಳನ್ನೂ ಕಳೆಯುತ್ತದೆ.

೧೬೩. ಮೇಲೆ ಹೇಳಿದ ಎರಡೂ ವಿಧವಾದ ಯಾಲಕ್ಕಿಯು, ವಾಂತಿ, ಭೇದಿಗಳಲ್ಲಿಯೂ, ಮೂತ್ರ ಸಂಬಂಧವಾದ ರೋಗಗಳಲ್ಲಿಯೂ ಅಜೀರ್ಣ, ಬಾಯಿಕೆಟ್ಟಲ್ಲಿಯೂ ಹಿತವನ್ನುಂಟುಮಾಡುತ್ತದೆ ಮತ್ತು ಜಾಕಾಯಿಯೂ ಸಹ ಮಧುರವಾಗಿದ್ದು ರುಚಿಯನ್ನುಂಟುಮಾಡುತ್ತದೆ.

೧೬೪. ಈ ಎರಡು ಜಾತಿಯೂ ಶೀತಕಾರಿಯೂ, ಕಹಿಯಾಗಿಯೂ ಇರುತ್ತದೆ ಮತ್ತು ಸುವಾಸನೆಯುಳ್ಳದ್ದು ಪಿತ್ತ ಸಂಬಂಧವಾದ ರೋಗಗಳನ್ನು, ಕಫವನ್ನೂ, ಹೃದಯ ಸಂಬಂಧವಾದ ಮಲಸಂಬಂಧವಾದ ಮತ್ತು ಕೆಳಗೊಟ್ಟೆಯ ವ್ಯಾಧಿಗಳನ್ನೂ ಪರಿಹರಿಸುತ್ತದೆ. ವೀರ್ಯವನ್ನು ಅಧಿಕಮಾಡುತ್ತದೆ. ಹಳೆಯದಾದಲ್ಲಿ ಶ್ರೇಷ್ಠವಾದದ್ದು.

## ಲವಂಗವು

೧೬೫. ಲವಂಗವು ಶೀತಲವು, ಕಹಿರಸವುಳ್ಳದ್ದು, ಕಣ್ಣಿಗಿಂಪು ಮಾಡುವುದೂ, ಜೀರ್ಣಕಾರಿಯೂ, ವಾತ, ಪಿತ್ತ, ಕಫಗಳನ್ನು ಕಳೆಯುವುದೂ ಅಲ್ಲದೆ ಉಷ್ಣಕಾರಿಯೂ ಶಿರೋರೋಗಗಳನ್ನು ಪರಿಹರಿಸುವುದೂ ಆಗಿದೆ.

೧೬೬. ಲವಂಗವು ತೀಕ್ಷ್ಣೋಷ್ಣವಾದರೂ, ಪರಿಣಾಮದಲ್ಲಿ ಮಧುರವೂ ಶೀತಲವೂ ಆಗುತ್ತದೆ. ಮತ್ತು ವಾತ, ಪಿತ್ತ, ಕಫಗಳನ್ನೂ, ಕ್ಷಯ ಶ್ವಾಸ, ರಕ್ತದೋಷಗಳನ್ನೂ ಪರಿಹರಿಸುತ್ತದೆ.



Rarest Archiver

ಲವಂಗಂ ಕಟುಕಂ ತಿಕ್ತಂ ರೂಕ್ಷಂ ಹೃದ್ಯಂ ಹಿಮಂ ಲಘು ।
ಚಕ್ಷುಷ್ಯಂ ಪವನಂ ಹಂತಿ ಶೂಲಾನಾಹ ಕ್ಷತಕ್ಷಯಾನ್ ।
ಕಫಪಿತ್ತಾಸ್ರ ತುಟ್ ಕಾಸ ಶ್ವಾಸಾಧ್ಮಾ ವಿಷಪೀನಸಾನ್ ॥ ೧೭೭ ॥

ಪಿಪಾಸ (ಸಾ) ಯಾಮುನುತ್ ಕ್ಲೇಶೇ ಲವಂಗ ಸ್ಯಾಂಬು
ಶಸ್ಯತೇ ॥ ೧೭೮ ॥

## ಅಥ ಶುಂಠಾರ್ದ್ರಕಮ್ ।

ಯೇ ಗುಣಾಃ ಕಥಿತಾಃ ಶುಂಠ್ಯಾಸ್ತೇಪಿ ಸಂತ್ಯಾರ್ದ್ರಕೇಽಖಿಲಾ ।
ಭೋಜನಾಗ್ರೇ ಸದಾ ಪಥ್ಯಂ ಲವಣಾರ್ದ್ರಕಭಕ್ಷಣಂ ॥ ೧೭೯ ॥

ಅಗ್ನಿಸಂದೀಪನಂ ರುಚ್ಯಂ ಜಿಹ್ವಾಕಂಠ ವಿಶೋಧನಮ್
ಕುಷ್ಠೇ ಪಾಂಡ್ವಾಮಯೇ ಕೃಚ್ಛ್ರೇ ರಕ್ತ ಪಿತ್ತೇನವಜ್ವರೇ ।
ದಾಹೇ ನಿದಾಘೇ ಶರಧಿ ನೈವ ಪೂಜಿತಮಾರ್ದ್ರಕಂ ॥ ೧೮೦ ॥

## ಚಂದನಃ

ಭದ್ರಾಶ್ರಯಂ ಹಿಮಂ ತಿಕ್ತಂ ಹೃದ್ಯಮಾಹ್ಲಾದನಂ ಲಘು ।
ವರ್ಣ್ಯಂ ಭಲಾಸಪಿತ್ತಘ್ನಂ ತೃಷಾ ದಾಹ ವಿಷಪ್ರಣುತ್ ॥ ೧೮೧ ॥

Rarest Archive

೧೭೭. ಲವಂಗವು ಸಿಹಿ, ಕಹಿ, ರಸವುಳ್ಳದ್ದೂ, ಹೃದಯಕ್ಕೆ ಬಲವನ್ನು ಕೊಡುವುದೂ, ಶೀತಲವೂ, ಲವಲವಿಕೆಯನ್ನುಂಟುಮಾಡುವುದೂ, ಕಣ್ಣಿಗಿಂಪನ್ನುಂಟುಮಾಡುವುದೂ ಅಲ್ಲದೇ ವಾತ, ಮಲಮೂತ್ರ ಬಂಧ, ನೋವು, ವ್ರಣ, ಕ್ಷಯಗಳನ್ನು ಕಳೆಯುತ್ತದೆ. ಮತ್ತು ಕಫ, ಪಿತ್ಥ, ದಾಹ, ಶ್ವಾಸವಿಕಾಸ: ವಿಷ: ಪೀನಸರೋಗ, ಹೊಟ್ಟೆಯುಬ್ಬರಗಳನ್ನು ಕಳೆಯುತ್ತದೆ.

೧೭೮. ಬಾಯಾರಿದಾಗಲೂ, ಹೃದಯ ರೋಗವಾದಾಗಲೂ ಲವಂಗದ ಕಷಾಯವನ್ನು ಸೇವಿಸುವುದು, ಒಳ್ಳೆಯದು.

## ಹಸಿಶುಂಠಿಯು

೧೭೯. ಒಣಶುಂಠಿಯಲ್ಲಿರುವ ಎಲ್ಲ ಗುಣಗಳು ಹಸಿಶುಂಠಿಯಲ್ಲಿರುತ್ತವೆ. ಮತ್ತು ಭೋಜನವಾದಕೂಡಲೇ ಉಪ್ಪನ್ನು ಸೇರಿಸಿ ಹಸಿಶುಂಠಿಯನ್ನು ತಿನ್ನುವುದು ಒಳ್ಳೆಯದು. (ಪಥ್ಯವು)

೧೮೦. ಹಸಿಶುಂಠಿಯು ಉಷ್ಣಕಾರಕವೂ, ರುಚಿಕರವೂ, ನಾಲಿಗೆ, ಕಂಠಗಳಲ್ಲಿನ ದೋಷಗಳನ್ನು ಪರಿಹರಿಸುವುದಾದರೂ, ಕುಷ್ಠ, ಪಾಂಡುರೋಗ, ಮೂತ್ರರೋಗ, ರಕ್ತ ಪಿತ್ತ, ಹೊಸದಾದ ಜ್ವರ, ಬಾಯಾರಿಕೆ ಈ ರೋಗಳಿರುವಲ್ಲಿ ಪರಿತ್ಯಾಜ್ಯವು.

## ಶ್ರೀಗಂಧವು

೧೮೧. ಚಂದನವು ಶೀತಲವೂ, ಕಹಿಯೂ, ಹೃದ್ಯವೂ (ಆಹ್ಲಾದಕರವೂ) ಆಯಾಸಪರಿಹಾರಕವೂ, ಕಾಂತಿಯನ್ನು ಕೊಡುವುದೂ, ಪಿತ್ತವನ್ನು ಕಳೆಯುವುದೂ, ಬಾಯಾರಿಕೆ, ವಿಷ, ಶ್ಲೇಷ್ಮ ಇವುಗಳನ್ನು ಕಳೆಯುವುದೂ ಆಗಿರುತ್ತದೆ.

Rarest Archive

ಶ್ರೀಖಂಡಂ ಕಟುತಿಕ್ತ ಶೀತಲ ಗುಣಂ ಸ್ವಾದೇ ಕಷಾಯಂ ಕಿಯತ್
ಪಿತ್ತಭ್ರಾಂತಿ ವಮಿಜ್ವರ ಕೃಮಿತೃಷಾ ಸಂತಾಪ ಶಾಂತಿಪ್ರದಮ್ ।
ವೃಷ್ಯಂ ವಕ್ತ್ರರುಜಾಪಹಂ ಪ್ರತನುತೇ ಕಾಂತಿಂ ತನೌ ದೇಹಿನಾಂ
ಲಿಪ್ತಂ ಸುಪ್ತಮನೋಜ ಸಿಂಧುರಮುದಾರಂಭಾತಿ ಸೌರಭ್ಯದಂ
॥ ೧೮೨ ॥

ಸ್ವಾದೇ ತಿಕ್ತಂ ಕಷೇ ಪೀತಂ ಛೇದೇ ರಕ್ತಂ ತನೌ ಸಿತಂ ।
ಗ್ರಂಥಿಕೋಟರ ಸಂಯುಕ್ತಂ ಚಂದನಂ ಶ್ರೇಷ್ಠಮುಚ್ಯತೇ ॥ ೧೮೩ ॥

ಶ್ರೇಷ್ಠಂ ಕೋಟರ ಕರ್ಪರೋಪ ಕಲಿತಂ ಸುಗ್ರಂಥಿ ಸದ್ಗೌರವಂ ।
ವೇದೇ ರಕ್ತಮಯಂ ತಥಾ ಚ ವಿಮಲಂ ಪೀತಂ ಚಯದ್ ಘರ್ಷಣೇ ।
ಸ್ವಾದೇ ತಿಕ್ತಕಟುಃ ಸುಗಂಧಿ ಬಹುಲಂ ಶೀತಂ ಯದಲ್ಪೇ (ಲ್ಪಂ) ಗುಣೇ ।
ಕ್ಷೀಣಂ ಚಾಂದ್ರಿ (ರ್ದ) ಗುಣಾನ್ವಿತ ತು ಕಥಿತಂ ತಚ್ಚಂದನಂ ।
ಮಧ್ಯಮಂ ॥ ೧೮೪ ॥

ಶ್ರೇಷ್ಠಂ ಮಲಯ ಸಂಭೂತಂ ಯಾವನೇಷು ಚ ಮಧ್ಯಮಂ ।
ಭರ್ಭರೇಷ್ವಧಮಂ ಪ್ರೋಕ್ತಂ ಪಾಂಚಾಲ ಯವನಾದಿಷು ॥
॥ ೧೮೫ ॥

ಸರ್ವಾಣ್ಯೇತಾನಿ ತುಲ್ಯಾನಿ ರಸತೋ ವೀರ್ಯತಸ್ತಥಾ ।
ಅತ್ರಾಪಿ ಚೋತ್ತಮಂ ವಿದ್ಯಾದ್ ಗ್ರಂಥಿಕರ್ಪರ ಕೋಟರಂ
॥ ೧೮೬ ॥

Rarest Archive

೧೮೨. ಚಂದನದ ಗಂಧವು ಕಾರ, ಕಹಿಯಾಗಿಯೂ, ಶೀತಲ ವಾದ ಗುಣವುಳ್ಳದ್ದು ಆಗಿದ್ದು ಪಿತ್ಥ, ಭ್ರಾಂತಿ, (ತಲೆ ತಿರುಗುವಿಕೆ, ಅಥವಾ ಹುಚ್ಚು) ವಾಂತಿ, ಜ್ವರ, ಕೃಮಿಬಾಧೆ, ಬಾಯಾರಿಕೆ, ಇವುಗಳಿಗೆ ಶಾಂತಿ ಕೊಡುವುದಲ್ಲದೆ ಆಯಾಸವನ್ನು ಪರಿಹರಿಸುತ್ತದೆ. ವೀರ್ಯ ವೃದ್ಧಿಕರವಾದದ್ದು. ಬಾಯಿ ಹುಣ್ಣು ಮುಂತಾದುದನ್ನು ಕಳೆಯುವುದು ಶರೀರಕ್ಕೆ ಕಾಂತಿಯನ್ನು ಕೊಡುವುದು. ಶರೀರಕ್ಕೆ ಲೇಪನಮಾಡಿ ಕೊಂಡಲ್ಲಿ ಸುವಾಸನೆಯನ್ನು ಕೊಡುತ್ತದೆ. ಆನೆಗೆ ಮದಬಂದಂತೆ ಪುರುಷರಿಗೆ ಕಾಮವನ್ನು ಹೆಚ್ಚಿಸುತ್ತದೆ.

೧೮೩. ತಿಂದಲ್ಲಿ ಕಹಿಯಾಗಿಯೂ, ಉಜ್ಜಿದಲ್ಲಿ ಹಳದಿಯಾಗಿಯೂ ಕತ್ತರಿಸಿದಲ್ಲಿ ಕೆಂಪಾಗಿಯೂ, ಮೇಲೆ ಬೆಳ್ಳಗೂ ಆಗಿದ್ದು, ಗಂಟು ಮತ್ತು ಪೊಟರೆಗಳಿಂದ ಕೂಡಿದ ಚಂದನವು ಶ್ರೇಷ್ಠವಾದುದು.

೧೮೪. ಪೊಟರೆ ಮತ್ತು ಗ್ರಂಥಿಗಳಿಂದ ಕೂಡಿದ, ಮೇಲೆ ಹೇಳಿ ದಂತೆ ಉಜ್ಜಿದಲ್ಲಿ ಹಳದಿಯೂ, ಕತ್ತರಿಸಿದಲ್ಲಿ ಕೆಂಪಗೂ, ಸ್ವರೂಪದಲ್ಲಿ ಬೆಳ್ಳಗೂ, ರಸದಲ್ಲಿ ಕಹಿ, ಖಾರವಾದದ್ದೂ, ಶೀತಲವೂ, ಗಂಧ ಹೆಚ್ಚಾಗಿ ಉಳ್ಳದ್ದೂ, ಶ್ರೇಷ್ಠವೂ ಹಳೆಯದಾದಲ್ಲಿ ಅರ್ಧವೇ ಗುಣವಿರುವುದರಿಂದ ಮಧ್ಯಮವೆಂದು ಹೇಳಲ್ಪಡುತ್ತದೆ.

೧೮೫. ಮಲಯ ದೇಶದಲ್ಲಿ ಹುಟ್ಟಿದುದು ಉತ್ತಮವು. ಪವನ ದೇಶದ್ದು ಮಧ್ಯಮವು . ಬರ್ಬರ, ಪಾಂಚಾಲ, ಯವನದೇಶ ಮುಂತಾದ ದೇಶಗಳಲ್ಲಿ ಹುಟ್ಟಿದುದು ಅಧಮವು.

೧೮೬. ಮೇಲೆ ಹೇಳಿದ ಎಲ್ಲಾ ಚಂದನಗಳೂ ರಸದಿಂದಲೂ, ವೀರ್ಯದಿಂದಲೂ, ಸಮಾನವಾದವುಗಳೇ ಆದರೂ, ಗಂಟು ಪೊಟರೆ ಗಳಿಂದ ಕೂಡಿದ್ದಲ್ಲಿ ಉತ್ತಮವಾದುದು,

Rarest Archiver

ಆರ್ದ್ರಾಚ್ಛಿನ್ನಂ ಪಿತ್ತಹರಂ ಶುಷ್ಕಂ ಛಿನ್ನಂತು ವಾತನುತ್ ।
ಆರ್ದ್ರ ಶುಷ್ಕಂ ತು ಯುಚ್ಛಿನ್ನಂ ತಚ್ಚ ಶ್ಲೇಷ್ಮಹರಂ ಪರಂ ॥
॥ ೧೮೭ ॥

ಶ್ರೀಖಂಡಂ ಶಂಬರಂ ಪೀತಂ ಪತಂಗಂ ರಕ್ತಚಂದನಂ
ಬರ್ಬರಂ ಹರಿಗಂಧಂ ಚ ಚಂದನಂ ಸಪ್ತಧಾ ಸ್ಮೃತಂ ॥ ೧೮೮ ॥

ಇತಿ ಚಂದನಂ

## ನಾರಿಕೇರಫಲಂ

ನಾರಿಕೇಲೋ ರಸಫಲ: ಸುತುಂಗ: ಕೂರ್ಚಶೇಖರ : ।
ದೃಢನೀಲೋ ಮಿೂ (ನೀ)ಲ ತರು ಮಂಗಲ್ಯೋಚ್ಚ ತರುಸ್ತಥಾ
॥ ೧೮೯ ॥

ತೃಣರಾಜಸ್ಕಂದ ತರು ದಾರ್ಕ್ಷಿಣಾತ್ಯೋ ದುರಾರುಹ: ।
ಲಾಂಗಲೀ ತ್ರ್ಯಂಬಕ ಫಲಸ್ತಥಾ ದೃಢಫಲಸ್ತಿ (ಸ್ಥಿ) ಥಿಃ (ತಿ:)
॥ ೧೯೦ ॥

ಲತಾವೃಕ್ಷಃ ಚೋಚ ಇತಿ ।

ಚೋಚಸ್ಯ ಫಲಮತ್ರ್ಯಕ್ಷಂ ತೋಯಗರ್ಭಂ ಪುಟೋದಕಂ ।
ಜಲೇ ಜಲಕರಂಕೋಸ್ಯ ಕರಂಕಸ್ತು ಫಲಾಸ್ಥಿನಿ ॥ ॥ ೧೯೧ ॥

ನಾರಿಕೇರಂ ಹಿಮಂ ಸ್ನಿಗ್ಧಂ ಸ್ವಾದು ಪಾಕೇ ರಸಂ ಗುರು ।
ತರ್ಪಣಂ ಪಾಚನಂ ವೃಷ್ಯಂ ಬೃಂಹಣಂ ಭಲಮಾಂಸಕೃತ್ ॥
॥ ೧೯೨ ॥

ವಿಷ್ಟಂಭಿ ದುರ್ಜರಂ ಹೃದ್ಯಂ ಶ್ಲೇಷ್ಮಲಂ ಭಸ್ತಿಶೋಧನಂ ।
ದಾಹಕ್ಷತ ಕ್ಷಯಹರಂ ವಾತ ಪಿತ್ತಾಸ್ರ ನಾಶನಮ್ ॥ ೧೯೩ ॥

Rarest Archive

೧೮೭. ಹಸೀ ಚಂದನವು ಪಿತ್ತವನ್ನು ಪರಿಹರಿಸುತ್ತದೆ. ಒಣಗಿದ ಮರದ ಚಂದನವು ವಾತವನ್ನು ಕಳೆಯುತ್ತದೆ. ಹಸೀ ಮರದ ಚಂದನವನ್ನೇ ಒಣಗಿದ ತರುವಾಯ ಉಪಯೋಗಿಸಿದಲ್ಲಿ ಶ್ಲೇಷ್ಮವನ್ನು ಪರಿಹರಿಸುತ್ತದೆ.

೧೮೮. ಚಂದನವು, ಶ್ರೀಖಂಡ ; ಶಂಬರ ; ಪೀತ ; ಪತಂಗ ; ರಕ್ತ ಚಂದನ ; ಬರ್ಬರ, ಹರಿಗಂಧ ಎಂದು ಏಳು ಹೆಸರುಗಳಿಂದ ಕರೆಯಲ್ಪಡುತ್ತದೆ.

## ತೆಂಗಿನಕಾಯಿಯು

೧೮೯. (ತೆಂಗಿನಕಾಯಿಯು) ನಾರಿಕೇಲ, ರಸಫಲ, ಸುತುಂಗ, ಕೂರ್ಚ ಶೇಖರ ; ದೃಢನೀಲ ; ನೀಲತರು ; ಮಂಗಲ್ಯ ; ಉಚ್ಚತರು. (ಎಂದೂ)

೧೯೦. ತೃಣರಾಜಸ್ಕಂದತರು, ದಾಕ್ಷಿಣಾತ್ಯ : ದುರಾರುಹ : ಲಾಂಗಲೀ : ತ್ರ್ಯಂಬಕ ಫಲ ; ದೃಡ ಫಲಸ್ಥಿತಿ ; ಚೋಚ ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ.

೧೯೧. ಚೋಚಮ ವೃಕ್ಷದ ಫಲವನ್ನು 'ಅತ್ರ್ಯಕ್ಷ', 'ತೋಯಗರ್ಭ' 'ಪುಟೋದಕ' ಎಂದೂ, ಜಲವಿದ್ದಲ್ಲಿ (ಎಳನೀರನ್ನು) 'ಜಲಕರಂಕ'ವೆಂತಲೂ, ಚಿಪ್ಪನ್ನು 'ಕರಂಕ'ವೆಂದೂ ಕರೆಯುತ್ತಾರೆ.

೧೯೨. ತೆಂಗಿನಕಾಯಿಯು ಶೀತಕರವಾದದ್ದೂ, ಎಣ್ಣೆಯಳ್ಳದ್ದೂ, ರುಚಿಕರವೂ, ತೃಪ್ತಿಯನ್ನುಂಟುಮಾಡುವುದೂ, ಜಡತ್ವವನ್ನು ಕೊಡತಕ್ಕದ್ದೂ, ಜೀರ್ಣಕಾರಿಯೂ, ವೀರ್ಯವೃದ್ಧಿಮಾಡುವುದೂ, ಬಲವೃದ್ಧಿಮಾಡುವುದೂ ಆಗಿರುತ್ತದೆ.

೧೯೩. ಮತ್ತು (ಅತಿಯಾದಲ್ಲಿ) ಮಲಮೂತ್ರ ಕಟ್ಟುವಿಕೆಯನ್ನೂ, ಅಜೀರ್ಣವನ್ನೂ ಉಂಟುಮಾಡುವುದಾದರೂ, ಹೃದಯ ಬಲಕಾರಿಯೂ ಶ್ಲೇಷ್ಮವನ್ನುಕೊಡುವುದೂ, ಕೆಳ ಹೊಟ್ಟೆಯ ಕಾಯಿಲೆಗಳನ್ನೂ, ಸುಟ್ಟಗಾಯವನ್ನೂ, ವಾತ, ರಕ್ತಪಿತ್ತವನ್ನು ಹೋಗಲಾಡಿಸುವುದೂ ಆಗಿರುವುದು.

Rarest Archive

ಸ್ನಿಗ್ಧಂ ಸ್ವಾದುರಸಂ ವಿಪಾಕ ಮಧುರಂ ಹೃದ್ಯಂ ಜಡಂ ದುರ್ಜರಂ
ಪಿತ್ತಘ್ನಂ ಕೃಮಿವರ್ಧನಂ ಮದಕರಂ ವಾತಾಮಯ ಧ್ವಂಸನಂ।
ಆಮಶ್ಲೇಷ್ಮ ವಿಕೋಪನಂ ಪ್ರಶಮನಂ ವಹ್ನೇ ಶ್ರಮಧ್ವಂಸನಂ
ಕಂದರ್ಪಸ್ಯ ಬಲಂ ದದಾತಿ ನಿತರಾಂ ತನ್ನಾರಿಕೇಲೀ ಫಲಂ
॥ ೧೯೪ ॥

## ದಾಲಚಿನೀ (ತ್ವಕ್)

ತ್ವಚಂ ತ್ವಗ್ವಲ್ಕಲಂ ಭೃಂಗಂ ವರಾಂಗಂ ಮುಖಶೋಧನಂ ।
ಶಕಲಂ ಸಿಂಹಲಂ ವನ್ಯಂ ಸುರಸಂ ರಾಮವಲ್ಲಭಂ ॥ ೧೯೫ ॥

ಉತ್ಕಟಂ ಬಹುಗಂಧಂ ಚ ವಿಜು(ಜ್ಜು)ಲಂ ಯು(ಚ)ವನಪ್ರಿಯಂ ।
ಏಲಾ(ಲಾಟ)ಪರ್ಣಂ ಗಂಧವಲ್ಕಂ ವರಂ ಶೀತಂ ವಸುಕ್ಷಿತೀ
॥ ೧೯೬ ॥

ತ್ವಚಂ ಚ ಕಟುಕಂ ಶೀತಂ ಕಫಕಾಸ ವಿನಾಶನಮ್ ।
ಶುಕ್ರಾ(ಕ್ವಾ)ಮಶಮನಂ ಚೈವ ಕಂಠಶುದ್ಧಿಕರಂ ಲಘು ॥ ೧೯೭ ॥

ಗುಡತ್ವಗುತ್ಕಟಂ ಹೃದ್ಯಂ ತನುಕಂ ಸ್ವರ್ಣಭೂಮಿಕಂ ।
ಏಲಾಪರ್ಣಂಚ ಶಕಲಂ ತ್ವಕ್ಕೋಚಂ ವಲ್ಕಲಂತ್ವಚಂ ॥ ೧೯೮ ॥

ಘನಂ ರಾಮಪ್ರಿಯಂ ಭೃಂಗಂ ವರಾಂಗಂ ಸುರಸಂ ವರಂ ।
ವಲಾಂಗಂ ಕಟುಕಂ ತಿಕ್ತಂ ತೀಕ್ಷ್ಣೋಷ್ಣಂ ಮಧುರಂ ಲಘು
॥ ೧೯೯ ॥

ಪಿತ್ತಲಂ ಕಫವಾತಘ್ನಂ ಹೃದ್ಬಸ್ತಿಗದಜಂತುಜಿತ್ ।
ಪೀನಸಾರುಚಿಕಂಡ್ವಾಮವಾತದುರ್ನಾಮ ಶುಕ್ರಹೃತ್ ॥ ೨೦೦ ॥
ತಜ ದಾಲಚಿನೀ

Rarest Archive

೧೯೪. ಇದು ಎಣ್ಣೆಯುಳ್ಳದ್ದು, ಮಧುರವಾದ ರಸವುಳ್ಳದ್ದು, ಉಪಯೋಗಿಸಿದಲ್ಲಿ ರುಚಿಯಾದದ್ದು, ಹೃದಯ ಬಲಕಾರಿ, (ಹೆಚ್ಚಾದಲ್ಲಿ) ಅಜೀರ್ಣಕಾರಿ, ಪಿತ್ತವನ್ನು ಕಳೆಯುವುದು, ಕ್ರಿಮಿ ವರ್ಧಕ, ಮದಕಾರಕವು, ವಾತರೋಗವನ್ನು ಕಳೆಯುವುದು, ಆಮ ಮತ್ತು ಶ್ಲೇಷ್ಮಗಳನ್ನು ಕೆರಳಿಸುವುದು, ಉಷ್ಣವನ್ನೂ ಶ್ರಮವನ್ನೂ ಪರಿಹರಿಸುವುದು, ಅಲ್ಲದೆ, ಹೆಚ್ಚಾಗಿ ಕಾಮೋದ್ದೀಪನವನ್ನೂ ಉಂಟುಮಾಡುತ್ತದೆ.

ದಾಲ್ಚಿನ್ನಿಯು

೧೯೫. ದಾಲ್ಚಿನ್ನಿಗೆ ತ್ವಚ, ತ್ವಕ್ ವಲ್ಕಲ, ಭೃಂಗ, ವರಾಂಗ, ಮುಖಶೋಧನ, ಶಕಲ, ಸಿಂಹಲ, ವನ್ಯ, ಸುರಸ, ರಾಮವಲ್ಲಭ,

೧೯೬. ಉತ್ಕಟ; ಬಹುಗಂಧ; ಬಿಜ್ಜಲ; ಯುವನಪ್ರಿಯ; ಏಲಾ ಪರ್ಣ; ಗಂಧವಲ್ಕ; ವರ; ಶೀತ; ವಸುಕ್ಷಿತೀ ಎನ್ನುವ ಹೆಸರುಗಳಿವೆ.

೧೯೭. ದಾಲ್ಚಿನ್ನಿಯು ಖಾರವಾಗಿಯೂ, ಶೀತಲವಾಗಿಯೂ, ಕಫ ಕಾಸಗಳನ್ನು ನಾಶಮಾಡುವುದೂ, ವೀರ್ಯ, ಆಮಗಳನ್ನು ಕಳೆಯುವುದೂ, ಕಂಠಶುದ್ಧಿಮಾಡುವುದೂ ಆಗಿರುತ್ತದೆ,

೧೯೮. ಮತ್ತೆ ಕೆಲವೆಡೆಗಳಲ್ಲಿ 'ಗುಡತ್ವಕು'; ಉತ್ಕಟ; ಹೃದ್ಯ: ತನುಕ; ಸ್ವರ್ಣಭೂಮಿಕೆ; ಏಲಾ ಪರ್ಣ; ಶಕಲ; ತ್ವಕ್ಕೋಚ; ವಲ್ಕಲ; ತ್ವಚ.

೧೯೯. ಘನ, ರಾಮಾಪ್ರಿಯ; ಭೃಂಗ; ವರಾಂಗ; ಸುರಸ; ವರ; ಎಂದು ಕರೆಯಲ್ಪಟ್ಟಿದೆ. ದಾಲ್ಚಿನಿಯು ಕಹಿ, ಖಾರ, ಸಿಹಿ ರಸವುಳ್ಳದ್ದೂ, ಉಷ್ಣಕಾರಿಯೂ, ಮೈಹಗುರವನ್ನುಂಟುಮಾಡುವುದೂ ಆಗಿದೆ.

೨೦೦. ದಾಲ್ಚಿನಿಯು ಪಿತ್ತವನ್ನುಂಟುಮಾಡುವುದು, ಕಫ, ವಾತಗಳನ್ನು ಕಳೆಯುವುದು, ಹೃದಯ, ಕೆಳಹೊಟ್ಟೆಯ ರೋಗ ಮತ್ತು ಕ್ರಿಮಿಗಳನ್ನೂ ಕಳೆಯುತ್ತದೆ. ಪೀನಸ, ಅರುಚಿ, ನವೆ, ಆಮ, ವಾತ, ವೀರ್ಯ, ಇವುಗಳನ್ನೂ ಕಳೆಯುತ್ತದೆ.

Rarest Archive

## ಅಥ ಕರ್ಪೂರಃ ।

ಪೋತಾಸೋ ಭೀಮಸೇನಸ್ತದನು ಸಿತಕರಃ ಶಂಕರಾವಾಸ ಸಂಜಃ
ಪಾಂಶುಃ ಪಿಂಜೋಜ್ಜ್ವ(ಭ್ವ)ಸಾರಸ್ತದನು ಹಿಮಯುತಾ ವಾಲುಕಾ
ಜೂಟಿಕಾ ಚ ।
ಪಶ್ಚಾದಸ್ಯಾಸ್ತುಸಾರ(ತುಷಾರ)ಸ್ತದುಪರಿ ಸಹಿಮಃ ಶೀತಲ
ಪಚ್ಚಿ(ತ್ರಿ)ಕಾಖ್ಯಾ- ।
(ಖ್ಯಃ) ಕರ್ಪೂರಸ್ಯೇತಿ ಭೇದಾ ಗುಣರಸಸಹಿತಾ ವೈದ್ಯ-
ದೃಷ್ಟ್ವೈವ ದೃಶ್ಯಾಃ ॥ ೨೦೧ ॥

ಕರ್ಪೂರ : ಶಿಶಿರಸ್ತಿಕ್ತ : ಕಟು ಶ್ಲೇಷ್ಮಾಸ್ರ ಪಿತ್ತಜಿತ್ ।
ತೃಷಾವಿದಾಹೀ ಕಂಠಸ್ಥ ದೋಷಘ್ನೋಽಕ್ಷಿರುಜಾಪಹಃ ॥ ೨೦೨ ॥

## ಸಾಧಾರಣಃ ।

ಕರ್ಪೂರೋಃ ನೂತನಸ್ತಿಕ್ತಃ ಸ್ನಿಗ್ದಶ್ಚೋಷ್ಣೋಽಸ್ರದಾಹದಃ ।
ಚಿರಸ್ಥೋ ದಾಹ ಶೋಷಘ್ನಃ ಸಧೌತಃ ಶುಭಕೃತ್ ಪರಃ ॥
॥ ೨೦೩ ॥

ಶಿರೋಮಧ್ಯಂ ತಲಂಚೇತಿ ಕರ್ಪೂರಸ್ತ್ರಿವಿಧಃ ಸ್ಮೃತಃ ।
ಶಿರಃ ಸ್ತಂಭಾಗ್ರಜಂ (ಸಂಜ್) ಜಾತಂ ಮಧ್ಯಂಪರ್ಣ ತಲೇತಲಂ ॥
॥ ೨೦೪ ॥

ಭಾಸ್ವದ್ವಿಶದಂ ಪುಲಕಂ ಶಿರೋಜಾತಂ ತು ಮಧ್ಯಮಂ ।
ಸಾಮಾನ್ಯ ಪುಲಕಂ ಸ್ವಚ್ಛಂ ತಲೇ ಚೂರ್ಣಂ ತು ಗೌರವ
(ಕ) ವತ್ ॥ ॥ ೨೦೫ ॥

ಸ್ತಂಭಗರ್ಭಸ್ಥಿತಃ (ತಂ) ಶ್ರೇಷ್ಠಃ (ಷ್ಠಂ) ಸ್ತಂಭಬಾಹ್ಯೇ
ಚ ಮಧ್ಯಮಃ (ಮಂ)
ಸ್ವಚ್ಛಮೀಷದ್ದರಿದ್ರಾಭಂ ಶುಭ್ರಂ (ಭಂ) ತಂ (ತನ್)
ಮಧ್ಯಜಂ (ಮಂ) ಸ್ಮೃತಂ ॥
ಅದೃಢಂ ಶುಭ್ರರೂಕ್ಷಂ ತು ಪುಲಕಂ ಬಾಹ್ಯಜಂ ವದೇತ್ ॥ ೨೦೬ ॥

Rarest Archiver

## ಕರ್ಪೂರವು

೨೦೧. ಪೋತಾಸ; ಭೀಮಸೇನ; ಸಿತಕರ; ಶಂಕರಾವಾಸ; ಪ್ರಾಂಶು; ಪಿಂಜೋಜ್ಞಸಾರ; ಹಿಮವಾಲುಕಾ; ಜೂಟಕಾ; ಹಿಮಸಾರ; ಶೀತಲ; ಪತ್ರಕರ್ಪೂರ (ಪತ್ರಿಕಾ) ಎಂಬುದಾಗಿ ವಿವಿಧ ಗುಣರಸಗಳಿಂದ ಕೂಡಿದ ಕರ್ಪೂರದ ಪ್ರಭೇದಗಳನ್ನು ವೈದ್ಯನಿಂದಲೇ ತಿಳಿಯುವುದು.

೨೦೨. ಕರ್ಪೂರವು ಶೀತಲವೂ, ಕಹಿರಸವುಳ್ಳದ್ದೂ, ಶ್ಲೇಷ್ಮ ಪಿತ್ತಗಳನ್ನು ಕಳೆಯುವುದೂ, ಹೆಚ್ಚಿನ ದಾಹವನ್ನು ಕಳೆಯುವುದೂ, ಕಂಠದಲ್ಲಿನ ದೋಷಗಳನ್ನು ಕಳೆಯುವುದೂ, ಕಣ್ಣಿನ ರೋಗವನ್ನು ಪರಿಹರಿಸುವುದೂ ಆಗಿರುತ್ತವೆ.

೨೦೩. ಹೊಸದಾದ ಕರ್ಪೂರವು ಕಹಿಯೂ, ನುಣುಪೂ, ಉಷ್ಣಕಾರಿಯೂ, ರಕ್ತದಾಹವನ್ನು ಕೊಡತಕ್ಕದ್ದೂ ಆಗುತ್ತದೆ. ಹಳೆಯದಾದ ರೋಗದಾಹವನ್ನೂ ಶೋಭೆಯನ್ನೂ ಕಳೆಯುತ್ತದೆ. ಶುದ್ಧೀಕರಿಸಿದಲ್ಲಿ ಉತ್ತಮವೂ ದೋಷವಿಲ್ಲದ್ದೂ ಆಗುತ್ತದೆ.

೨೦೪. ಶಿರಸ್ಸು, ಮಧ್ಯ, ತಳ ಎನ್ನುವುದಾಗಿ ಕರ್ಪೂರವು ಮೂರು ವಿಧವಾದದ್ದೆಂದು ಹೇಳಲ್ಪಟ್ಟಿದೆ. ಕೊಂಬೆಗಳ ಕೊನೆಯಲ್ಲಿ ಹುಟ್ಟಿದ್ದು 'ಶಿರಸ್ಸಂ' ದೂ. ಕೊಂಬೆ ಮಧ್ಯದಲ್ಲಿ ಹುಟ್ಟಿದ್ದು 'ಮಧ್ಯ' ವೆಂದೂ, ತಳದಲ್ಲಿ ಹುಟ್ಟಿದುದು 'ತಳ' ವೆಂದೂ ಕರೆಯಲ್ಪಡುತ್ತದೆ.

೨೦೫. ಸೂರ್ಯನಂತೆ ಹೊಳೆಯುವ ಕರ್ಪೂರವು ಶಿರೋಜಾತವು ಮಧ್ಯಮವು ಸಾಮಾನ್ಯವಾದ ಸ್ವಚ್ಛತೆಯುಳ್ಳದ್ದು. ತಳಜಾತಿಯು ಕೇವಲ ಬೆಳ್ಳಗಿರುತ್ತದೆ.

೨೦೬. ಕೊಂಬೆಯ ಒಳಗಡೆಯಿಂದಾದದ್ದು ಶ್ರೇಷ್ಠವಾದುದು. ಕೊಂಬೆಗಳ ಹೊರಗಡೆ ಹುಟ್ಟುವುದು ಮಧ್ಯಮವು, ಸ್ವಚ್ಛವಾದ, ಹಳದಿ ಬಣ್ಣವುಳ್ಳ ಕರ್ಪೂರವು ಮಧ್ಯಮವು. ದಾರ್ಢ್ಯವಿಲ್ಲದೆ (ಲಘುವಾಗಿ) ಬೆಳ್ಳಗಿರುವ ಕರ್ಪೂರವು ಹೊರಗೆ ಹುಟ್ಟಿದ್ದು, ಮತ್ತು ಅಧಮವೆಂದು ತಿಳಿಯತಕ್ಕದ್ದು.

Rarest Archiver

## ಕರ್ಪೂರ ಲಕ್ಷಣಂ।

ಸ್ವಚ್ಛಂ ಭೃಂಗಾಭಪತ್ರಂ ಲಘುತರವಿಶದಂ ತೋಲನೇ ತಿಕ್ತಕಂ ಚೇತ್
ಸ್ವಾದೇ ಶೈತ್ಯಂ ಸಹೃದ್ಯಂ ಬಹುಲ ಪರಿಮಲಾಮೋದಸಂರಂಭ ದಾಯಿ
ನಿಃಸ್ನೇಹಂ ದಾರ್ಢ್ಯಪತ್ರಂ ಶುಭತರಮಿತಿ ಚೇದ್ರಾಜಯೋಗ್ಯಂ ಪ್ರಶಸ್ತಂ।
ಕರ್ಪೂರಂ ಚಾನ್ಯಥಾ ಚೇತ್ ಬಹುತರಮಶನೇ ಸ್ಫೋಟ ದಾಹ(ಯಿ) ವ್ರಣಸ್ಯ ॥ ೨೦೭॥

ಪೋತಾಸಃ।

ಚೀನಕಶ್ಚೀನ ಕರ್ಪೂರಃ ಕೃತ್ರಿಮೋ ಧವಲಃ ಪಟುಃ।
ಮೇಘಸಾರಸ್ತು ಷಾ ರಶ್ಚ ದೀಪ ಕರ್ಪೂರಜಃ ಸ್ಮೃತಃ ॥ ೨೦೮॥

ಚೀನಕಃ ಕಟುತಿಕ್ತೋಷ್ಣಾ ಈಷಚ್ಛೀತಃ ಕಫಾಪಹಃ।
ಕಂಠದೋಷಹರೋ ಮೇಧ್ಯಃ ಪಾವ(ಚ)ನಃ ಕ್ರಿಮಿನಾಶನಃ ॥ ೨೦೯ ॥

ಇತಿ ಚೀನಕರ್ಪೂರ

ಕರ್ಪೂರೋ ಮಧುರಸ್ತಿಕ್ತಃ ಸುರಭಿಃ ಶೀತಲೋ ಲಘುಃ।
ಚಕ್ಷುಷ್ಯೋ ಲೇಖನೋ ವೃಷ್ಯಃ ಕಫಮೇದೋ ವಿಷಾಪಹಃ ॥ ೨೧೦ ॥

ದಾಹತೃಷ್ಣಾಸ್ಯವೈರಸ್ಯ ಮಲದೌರ್ಗಂಧ(ಂಧ್ಯ)ನಾಶನಃ।
ಈಶಾವಾಸೊ ಹಿಮಸಂಜಃ ಪೋತಾಶ್ರಯ ಇತಿತ್ರಿಧಾ ॥ ೨೧೧ ॥

ಅಪಕ್ವೇ ಕಥ್ಯತೇ ಭೇದಃ ಕರ್ಪೂರೇ ತು ಭಿಷಗ್ವರೈಃ।
ಈಶಾವಾಸೊ ಭೃಶಂ ಶ್ವೇತೋ ಹಿಮಸಂಜಸ್ತು ಪಾಂಡುರಃ ॥ ೨೧೨ ॥

Rarest Archiver

## ಕರ್ಪೂರ ಲಕ್ಷಣವು

೨೦೭. ಕರ್ಪೂರವು ಶುಭ್ರವೂ, ತೂಕದಲ್ಲಿ ಹಗುರವೂ, ಕಹಿರಸವುಳ್ಳದ್ದೂ, ಶೈತ್ಯಕಾರಿಯೂ, ಹೃದಯಕ್ಕೆ ಬಲಕಾರಿಯೂ, ಬಹಳ ಸುವಾಸನೆಯುಳ್ಳದ್ದೂ, ಜಿಡ್ಡಿಲ್ಲದಿರುವುದೂ. ಗಟ್ಟಿಯಾದ ಪರೆವುಳ್ಳದ್ದೂ, ಶ್ರೇಷ್ಠವೆಂದೂ ರಾಜಯೋಗ್ಯವೆಂದೂ ಹೇಳುತ್ತಾರೆ. ಈ ಮೇಲಿನ ಗುಣಗಳಿಲ್ಲದ್ದನ್ನು ಸೇವಿಸಿದಲ್ಲಿ, ರಕ್ತಗಡ್ಡೆ, ಹುಣ್ಣು ಇವುಗಳನ್ನು ಹೆಚ್ಚಿಸುತ್ತದೆ.

### ಪೋತಾಸ ಕರ್ಪೂರವು

೨೦೮. ಚೀನದೇಶದ ಕರ್ಪೂರವು ಚೀನಕ, 'ಚೀನ ಕರ್ಪೂರ'ವೆಂಬ ಹೆಸರುಳ್ಳದ್ದೂ, ಕೃತ್ರಿಮವಾದುದೂ, ಬಿಳುಪಾದದ್ದೂ ಆಗಿರುತ್ತದೆ. ಅದಕ್ಕೆ, 'ಮೇಘಸಾರ, ತುಷಾರ, ದ್ವೀಪಕರ್ಪೂರ'ವೆಂದೂ ಹೆಸರು.

೨೦೯. ಚೀನಕರ್ಪೂರವು ಕಹಿ ರಸವುಳ್ಳದ್ದು. ಖಾರವಾಗಿಯೂ, ಉಷ್ಣಕಾರಿಯಾಗಿಯೂ, ಸ್ವಲ್ಪ ಶೈತ್ಯವುಳ್ಳದ್ದೂ, ಕಫವನ್ನು ಪರಿಹರಿಸುವುದೂ, ಕಂಠದೋಷವನ್ನು ಪರಿಹಾರಮಾಡುವುದೂ, ಬುದ್ಧಿಶಕ್ತಿಯನ್ನು ಹೆಚ್ಚಿಸುವುದೂ, ಜೀರ್ಣಕಾರಿಯೂ, ಕ್ರಿಮಿನಾಶಕವೂ ಆಗಿರುತ್ತದೆ.

೨೧೦. ಕರ್ಪೂರವು ಮಧುರವೂ, ಸಿಹಿಯೂ, ಕಹಿಯೂ, ಸುಗಂಧವೂ, ಶೀತಲವೂ, ಹಗುರವೂ, ಕಣ್ಣಿಗಿಂಪನ್ನುಂಟುಮಾಡುವುದೂ, ವೀರ್ಯವೃದ್ಧಿಯನ್ನುಂಟುಮಾಡುವುದೂ, ಕಫ, ಕೊಬ್ಬು ಮತ್ತು ವಿಷ ಇವುಗಳನ್ನು ಕಳೆಯುವುದೂ ಆಗಿರುತ್ತದೆ.

೨೧೧. ಮೈ ಉರಿ, ಬಾಯಾರಿಕೆ. ಬಾಯಿ ಒಣಗುವಿಕೆ ಮತ್ತು ಬಾಯಿಯಲ್ಲಿನ ದುರ್ವಾಸನೆಗಳನ್ನು ಕಳೆಯುತ್ತದೆ. ಕರ್ಪೂರವು, 'ಈಶಾವಾಸ', 'ಹಿಮ', 'ಪೋತಾಶ್ರಯ' ಎನ್ನುವುದಾಗಿ ಮೂರು ವಿಧಗಳಾಗಿರುತ್ತದೆ.

೨೧೨. ವೈದ್ಯರು ಅಪಕ್ವವಾದ ಕರ್ಪೂರಗಳ ಭೇದವನ್ನು ಈ ರೀತಿ ಹೇಳುತ್ತಾರೆ. ಈಶಾವಾಸವು ಬಹಳ ಬೆಳ್ಳಗಿರುತ್ತದೆ. ಹಿಮಸಂಜ ಎನ್ನುವ ಕರ್ಪೂರವು ಸಾಧಾರಣ ಬಿಳುಪುಳ್ಳದ್ದಾಗುತ್ತದೆ.

Rarest Archiver

ಶ್ವೇತಃ ಪೋತಾಶ್ರಯಃ ಸರ್ವೇ ರಸವೀರ್ಯವಿಪಾಕತಃ |
ಪ್ರಭಾವೇನಾಪಿ ತೈಃ (ತೇ) ಪೋಕ್ತಾಃ ಪೂರ್ವ ಪೂರ್ವ
ಗುಣಾಧಿಕಃ |
|| ೨೧೩ ||

ತತ್ರಾಪಿ ಯಶ್ಚ ಕ್ಷುದ್ರಸ್ತು ಸ್ಫಟಿಕಾಭಃ ಸ ಉತ್ತಮಃ |
ಈಶಾವಾಸೋ ಮದೋನ್ಮಾದಃ ಶ್ರಮ ತೃಷ್ಣಾಂಗದಾಹನುತ್ ||
|| ೨೧೪ ||

ಕೃಮಿ ಕಾಸಕ್ಷಯ ಸ್ವೇದಹರೋ ಭೇದೀ ವೃಷತ್ವಕೃತ್ |
ತೃಡ್‌ದಾಹ ಮೋಹಶಮನಃ ಸ್ವೇದನಃ ಕಟುಕೋರಸೇ
|| ೨೧೫ ||

ವೃಶ್ಯಶ್ಚ ಧವಲಃ ಶೀತಃ ಕರ್ಪೂರೋ ಹಿಮ ಸಂಜಕಃ |
ಪೋತಾಶ್ರಯಸ್ತು ಕರ್ಪೂರಃ ತೃಷಾದಾಹಾಸ್ರ ಪಿತ್ತನುತ್
|| ೨೧೬ ||

ಶ್ಲೇಷ್ಮಘ್ನಃ ಶೀತಲೋ ವೃಷ್ಯಃ ಸುಸ್ವಾದುಃ ಕಟುತಿಕ್ತಕಃ |
ಪಕ್ವಸ್ತು ದ್ವಿವಿಧಃ ಪ್ರೋಕ್ತಃ ಸದಲೋ ನಿರ್ದಲಸ್ತಥಾ || ೨೧೭ ||

ದೃಢಶ್ಚ ಪೀತವರ್ಣಶ್ಚ ವಿಶೇಷಾಲ್ಲಘುತಾಂ ಗತಃ |
ಭಾಸ್ಕರೋ ವಿಶದಃ ಶ್ಲೇಷ್ಮವಾತಘ್ನೋಷ್ಣಃ ಶ್ರಿಯಾವಹಃ
|| ೨೧೮ ||

Rarest Archiver

೨೧೩. 'ಪೋತಾಶ್ರಯ' ವು ಕಮ್ಮಿ ಬಿಳುಪಾಗಿರುತ್ತದೆ. ಈ ಮೂರುವಿಧವಾದ ಕರ್ಪೂರಗಳಲ್ಲಿ ರಸ, ವೀರ್ಯ ಮತ್ತು ಪ್ರಭಾವ ಇವುಗಳಿಂದ ಮೊದಮೊದಲಿನದು ಹೆಚ್ಚು ಗುಣವುಳ್ಳದ್ದಾಗುತ್ತದೆ. (ಪೋತಾಶ್ರಯಕ್ಕಿಂತ ಹಿಮವೂ, ಹಿಮಕ್ಕಿಂತ ಈಶಾವಾಸವೂ ಗುಣಕಾರಿ)

೨೧೪. ಇವುಗಳಲ್ಲೂ, ಯಾವುದು ತೂಕ ಕಡಿಮೆ ಇದ್ದು, ಸ್ಪಟಿಕದಂತೆ ಹೊಳೆಯುವುದೊ, ಅದೇ ಉತ್ತಮವಾದ ಕರ್ಪೂರವು. ಇದೇ 'ಈಶಾವಾಸ'ವು, ಇದು ಮದ, ಹುಚ್ಚು, ಶ್ರಮ, ಬಾಯಾರಿಕೆ, ಮೈ ಉರಿಯುವಿಕೆ, ಇವುಗಳನ್ನು ಕಳೆಯುತ್ತದೆ.

೨೧೫. ಮತ್ತು ಕ್ರಿಮಿ, ಕಾಸ, ಕ್ಷಯ, ಬೆವರು, ಭೇದಿ, ಇವುಗಳನ್ನು ಕಡಿಮೆಮಾಡುತ್ತದೆ. ವೀರ್ಯವನ್ನು ಹೆಚ್ಚಿಸುತ್ತದೆ. ರಸದಲ್ಲಿ ಖಾರವಾಗಿ, ಬಾಯಾರಿಕೆ, ದಾಹ, ಹುಚ್ಚು, ಬೆವರು, ಇವುಗಳನ್ನೂ ಕಳೆಯುವುದು.

೨೧೬. 'ಹಿಮ' ಎನ್ನುವ ಮಧ್ಯಮ ಕರ್ಪೂರವು ಬಣ್ಣದಲ್ಲಿ ಬೆಳ್ಳಗೂ, ಶೀತಲವೂ, ಆಗಿದ್ದು, ವೀರ್ಯವನ್ನು ಹೆಚ್ಚಿಸುತ್ತದೆ. 'ಪೋತಾಶ್ರಯ' ಎಂಬ ಕರ್ಪೂರವು ಬಾಯಾರಿಕೆ, ದಾಹ, ರಕ್ತ ಪಿತ್ತಗಳನ್ನು ಕಳೆಯುವುದು.

೨೧೭. ಮತ್ತು ಶೈತ್ಯವನ್ನೂ, ಶ್ಲೇಷ್ಮವನ್ನೂ ಕಳೆಯುತ್ತದೆ. ವೀರ್ಯವೃದ್ಧಿಗೊಳಿಸುತ್ತದೆ. ಸಿಹಿ, ಕಹಿ, ಖಾರ, ರಸವುಳ್ಳದ್ದೂ ಆಗಿರುತ್ತದೆ. ಪಕ್ವವಾದ ಕರ್ಪೂರವು 'ಸದಲ', 'ನಿರ್ದಲ' ಎಂದು ಎರಡು ವಿಧಗಳು ಇರುತ್ತದೆ.

೨೧೮. ಗಟ್ಟಿಯಾಗಿಯೂ, ಹಳದಿ ಬಣ್ಣವುಳ್ಳದ್ದೂ, ಹೆಚ್ಚು ತೂಕವಿಲ್ಲದ್ದೂ, ಆದ ಕರ್ಪೂರವು ಶರೀರಕ್ಕೆ ಉತ್ತಮವಾದ ಕಾಂತಿ ಕೊಡುವುದಲ್ಲದೆ, ಶ್ಲೇಷ್ಮ ವಾತಗಳನ್ನು ಕಳೆಯುತ್ತದೆ. ಶುಭಕರವಾದುದು.

Rarest Archiver

ಸಕಟುಃ ಕೃಮಿಕಂಡೂಘ್ನಃ ಸರೋ ಮೇಧವಿಷಾಪಹಃ ।
ಕಾಸಾಶ್ರೀವ (ಲಾಸ) (ಶ್ಲೀಲಾ) ಗಲಗ್ರಾಹ ಸುಪ್ತ ಜಿಹ್ವತ್ವ
ನಾಶನಃ
ಜಲಶ್ಯ (ಸ್ರು)ತಿಂ ಕೃಮೀನ್ ಹಂತಿ ದೀಪನಃ ಪಿತ್ತಕೋಪನಃ ॥
॥ ೨೧೯ ॥

ಉದಯಭಾಸ್ಕರ ಕರ್ಪೂರಃ । ಭರಾಸ ಇತಿ ಭಾಷಾಯಾಂ ಪ್ರಸಿದ್ಧಃ

ಶ್ರೀಮಲ್ಲಟೀಕಾಯಾಂ ।

ಅಥ ಗ್ರಂಥಾಂತರಾತ್ ಭರಾಸಕ್ರಿಯಾ ।

ಏಲಾ ಕಂಕೋಲಕಂ ವಾಲಂ ಕರ್ಷಾರ್ಧಂ ತು ಪೃಥಕ್ ಪೃಥಕ್ ।
ಚೂರ್ಣಂ ಸೂಕ್ಷ್ಮತರಂ ಕುರ್ಯಾತ್ ಕರ್ಪೂರಃ ಸೂರ್ಯಭಾಗಿಕಃ
॥ ೨೨೦ ॥

ಸ್ಥಾಲೀ ಮಧ್ಯೇ ವಿನಿಕ್ಷಿಪ್ಯ ತಸ್ಯೋಪರಿ ಚ ವಾಟಿಕಾಂ ।
ಸ್ಥಾಪಯಿತ್ವಾ ತತೋ ಮುದ್ರಾಂ ಗೋಧೂಮ ಪಿಷ್ಟಕೇನ ಚ ॥
॥ ೨೨೧ ॥

ವಾಟಿಕಾಯಾಂ ಜಲಂ ಕ್ಷಿಪ್ತ್ವಾ ವಹ್ನೌತ್ವಂಗಾರರೂಪಿಣೀ ।
ತಾವತ್ತಪ್ಯೆ (ಪೇ)ಜ್ವಲಂ ಯಾವದ್ಭವೇತ್ವಂಗ ಸಹಿಷ್ಣು ಚ ॥೨೨೨॥

ಕರ್ಪೂರರೇಣೋ ಪರಿಸ್ಥೇನ ತಚ್ಚೂರ್ಣಂ ತೇನ ಮೇಲಯೇತ್ ।
ತದಾ ಭವೇದಿದಂ ಸತ್ಯಂ ಕರ್ಪೂರಂ ಭೀಮಸೇನಕಮ್ ॥ ೨೨೩ ॥

॥ ಇತಿ ತಾಂಬೂಲ ಮಂಜರೀ ॥

---

Rarest Archiver

೨೧೯. ಖಾರವಾಗಿರತಕ್ಕ ಕರ್ಪೂರವು ಕ್ರಿಮಿ ಮತ್ತು ನವೆಗಳನ್ನು ಪರಿಹರಿಸಿ, ಭೇದಿ, ಕೊಬ್ಬು ಮತ್ತು ವಿಷಗಳನ್ನು ಕಳೆಯುತ್ತದೆ. ಕಾಸ, ರಕ್ತಸ್ರಾವ, ಗಂಟಲು ಕಟ್ಟುವಿಕೆ, ನಾಲಿಗೆಯ ಜಡತ್ವ, ಬೆವರುವಿಕೆ, ಇವುಗಳನ್ನು ಕಡಿಮೆ ಮಾಡುತ್ತದೆ. ಕ್ರಿಮಿಗಳನ್ನು ನಾಶಮಾಡುತ್ತದೆ. ಕಾಮೋದ್ದೀಪಕವೂ, ಪಿತ್ತವನ್ನು ಹೆಚ್ಚಿಸುವುದೂ ಆಗಿರುತ್ತದೆ.

ಉದಯಭಾಸ್ಕರ ಕರ್ಪೂರವು, 'ಭರಾಸ್' ಎಂದು ಉತ್ತರದೇಶ ದಲ್ಲಿ ಪ್ರಸಿದ್ಧವು :

## ತ್ರಿಮಲ್ಲ ಟೀಕೆಯಲ್ಲಿ

೨೨೦. ಗ್ರಂಥಾಂತರದಿಂದ ತೆಗೆದ ಭರಾಸ (ಭೀಮಸೇನ) ಕರ್ಪೂರ ಪಾಕ ಕ್ರಮವು ;—ಯಾಲಕ್ಕಿ, ತಕ್ಕೋಲ, ಜಾಪಾಳ ಇವುಗಳ ಒಂದು ತೊಲವನ್ನು ಚೆನ್ನಾಗಿ ಪುಡಿಮಾಡಿ ಇಟ್ಟುಕೊಳ್ಳತಕ್ಕದ್ದು, ಹನ್ನೆರಡು ಭಾಗದಷ್ಟು ಕರ್ಪೂರವನ್ನು....

೨೨೧. ಒಂದು ಮಡಿಕೆಯಲ್ಲಿ ಹಾಕಿ, ಆದರಮೇಲೆ ಒಂದು ಸಣ್ಣ ಮಡಿಕೆಯನ್ನಿಟ್ಟು, ಗೋಧಿ ಹಿಟ್ಟಿನಿಂದ ಎರಡು ಮಡಿಕೆಗಳ ಮಧ್ಯೆ ರಂಧ್ರವಿಲ್ಲದಂತೆ ಮುಚ್ಚಬೇಕು.

೨೨೨. ಮೇಲಿನ ಮಡಕೆಯಲ್ಲಿ ನೀರು ತುಂಬಿ ಆ ನೀರು ಮುಟ್ಟಲು ಸಾಧ್ಯವಾದಷ್ಟು ಬಿಸಿಯಾಗುವವರೆಗೆ ತಳಮಡಿಕೆಗೆ ಉರಿ ಹಾಕಿ, ಹಾಗಾದ ಕೂಡಲೆ ಉರಿಯನ್ನು ತೆಗೆಯಬೇಕು.

೨೨೩. ತಂಪಾದ ತರುವಾಯ ಮೇಲಿನ ಮಡಕೆಯನ್ನು ಮೆತ್ತಗೆ ಬಿಡಿಸಿದಲ್ಲಿ ಆದರ ತಳಭಾಗದಲ್ಲಿ ಕರ್ಪೂರವು ಸಿಗುತ್ತದೆ. ಆದಕ್ಕೆ ಮೇಲೆ ಹೇಳಲ್ಪಟ್ಟ ಚೂರ್ಣವನ್ನು ಮಿಶ್ರ ಮಾಡಿದಲ್ಲಿ ಭೀಮಸೇನ ಕರ್ಪೂರ (ಭರಾಸ) ವು ಆಗುತ್ತದೆ.

---


Rarest Archiver

# ಅನುಬಂಧ - ೧

**ಪ್ರಥಮೇ ಪೃಷ್ಠೇ ಲಿಖಿತಾಃ ಶ್ಲೋಕಾಃ ॥ ॥ ವಸಿಷ್ಠ ॥**

ಏಕಪೂಗಂ ಸುಖಾರೋಗ್ಯಂ ದ್ವಿಪೂಗಂ ನಿಷ್ಫಲಂ ಭವೇತ್ ।
ಅತಿ ಶ್ರೇಷ್ಠಂ ತ್ರಿಪೂಗಂತು ಅಧಿಕೇನೈವ ದುಃಖದಃ (ದಮ್) ॥೧॥

ಏಕ ದ್ವಿತ್ರಿ ಚತುಃ ಪಂಚ ಷಡ್ಭಿಃ ಪೂಗಫಲೈ (ಲೈಃ) ಕ್ರಮಾತ್
ಲಾಭೋಽಲಾಭಃ ಸುಖಂ ದುಃಖಂ ಆಯುರ್ಮರಣಮೇವಚ ॥ ೨ ॥

॥ ಭರದ್ವಾಜಃ ॥

ಕ್ರಮುಕಂ ಪಂಚನಿಷ್ಕಂ ಸ್ಯಾತ್ ತಾಂಬೂಲ್ಯಾಶ್ಚ ಫಲದ್ವಯಂ ।
ಗುಂಜಾದ್ವಯಂ ಚೂರ್ಣಮಾನಂ ತಾಂಬೂಲಕ್ರಮಮುತ್ತಮಂ ॥
॥ ೩ ॥

ಇಕ್ಷೋರ್ವಿಕಾರಾ ಮತಯಃ ಕವೀನಾಂ
ಗವಾಂ ರಸೋ ಬಾಲಕ ಭಾಷಣಾನಿ ।
ತಾಂಬೂಲ ಮನ್ನಂ ಯುವತೀ ಕಟಾಕ್ಷಾ
ಏತೇ ಪದಾರ್ಥಾ ನ ವಸಂತಿ ನಾಕೇ ॥ ೪ ॥

ತಾಂಬೂಲಂ ವ್ರತಿಯತಿ ದೀಕ್ಷಿತಾಃ ವ್ರತಸ್ಥಾಃ ।
ಸಾ ಜಹ್ಯಾತ್ ಪತಿರಹಿತಾ ಚ ಕಾಮಿನೀ ಯಾ ॥ ೫ ॥

ತಾಂಬೂಲಂ ಮಧುಕುಸುಮ ಸ್ರಜೋ ವಿಚಿತ್ರಾಃ ।
ಕಾಂತಾರಂ ಸುತರು ವನಂ ವಿಲಾಸವತ್ಯಃ ।
ಗೀತಾನಿ ಶ್ರವಣಹರಾಣಿ ಮಿಷ್ಟಮನ್ನಂ
ಕ್ಲೀಬಾನಾಮಪಿ ಜನಯಂತಿ ಪಂಚಬಾಣಾನ್ ॥ ೬ ॥

ಅತಿತರ ಬಲವತಿ ಶೀತೇ ಪುಂಭಿಃ ಸೇವ್ಯಸ್ತಕಾರ ಸಮುದಾಯಃ
ತಾಂಬೂಲಂ ತರುಣ ವಧೂಸ್ತೂಲಂ ತೈಲ ತನೂನಪಾತ್ ತರಣಿಃ
॥ ೭ ॥

Rarest Archiver

# ಅನುಬಂಧ - ೧

## ತಾಂಬೂಲ ಮಂಜರಿಯ ಇತರ ಶ್ಲೋಕಗಳು

### ವಸಿಷ್ಠರು ಹೇಳಿದುದು :

೧. ಒಂದು ಅಡಿಕೆಯು ಸುಖ ಆರೋಗ್ಯವನ್ನು ಕೊಡುತ್ತದೆ; ಎರಡು ಅಡಕೆಯು ನಿಷ್ಫಲವಾಗುತ್ತದೆ. ಮೂರು ಅಡಕೆಯು ಬಹಳ ಶ್ರೇಷ್ಠವಾದುದು. ಅದಕ್ಕಿಂತಲೂ ಹೆಚ್ಚಿಗೆ ಸೇವಿಸಿದಲ್ಲಿ ದುಃಖಕಾರಕವು.

೨. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಅಡಿಕೆಗಳನ್ನು ಸೇವಿಸಿದಲ್ಲಿ ಕ್ರಮವಾಗಿ ಲಾಭ, ಅಲಾಭ, ಸುಖ, ದುಃಖ, ಆಯುವೃದ್ಧಿ, ಮರಣ ಎನ್ನುವ ಫಲಗಳುಂಟಾಗುತ್ತವೆ.

### ಭರದ್ವಾಜರು ಹೇಳಿದುದು :

೩. ಐದು "ನಿಷ್ಕ" ತೂಕವುಳ್ಳ ಅಡಿಕೆ, ಎರಡು "ಫಲ" ವಿಳ್ಯೇದೆಲೆ: ಎರಡು ಗುಂಜಿ ತೂಕ ಸುಣ್ಣ, ಇವುಗಳಿಂದ ಕೂಡಿದ ವೀಳ್ಯವು ಶ್ರೇಷ್ಠವು.

೪. ಕಬ್ಬಿನ ವಿಕಾರ (ಕಲ್ಲುಸಕ್ಕರೆ, ಬೆಲ್ಲ, ಕಬ್ಬಿನ ಹಾಲು, ಇವುಗಳು) ಕವಿಗಳ ಪ್ರತಿಭೆಯು, ಹಾಲು, ಬೆಣ್ಣೆ ಮುಂತಾದ ಗೋವಿನ ರಸಗಳು, ಎಳೆಯ ಮಕ್ಕಳ ತೊದಲು ನುಡಿಗಳು, ತಾಂಬೂಲ, ಅನ್ನ, ಯುವತಿಯ ಕಟಾಕ್ಷಗಳು, ಇವು ಸ್ವರ್ಗದಲ್ಲಿಯೂ ದೊರೆಯಲಾರವು.

೫. ಸಂನ್ಯಾಸಿಗಳು, ವ್ರತಿಗಳು (ದೀಕ್ಷಿತರು), ತಾಂಬೂಲ ಸೇವನೆಯನ್ನು ಬಿಡತಕ್ಕದ್ದು, ವಿಧವೆಯರಿಗೆ ಸಹಾ ತಾಂಬೂಲ ಚರ್ವಣವು ನಿಷೇಧವು.

೬. ತಾಂಬೂಲ, ಮಧು (ಮದ್ಯ), ವಿಚಿತ್ರವಾದ ಹೂವಿನ ಹಾರಗಳು, ಒಳ್ಳೆಯ ಗಿಡಗಂಟೆಗಳಿರುವ ಕಾಡು; ವಿಲಾಸಿನಿಯರು; ಮನೋಹರವಾದ ಸಂಗೀತ; ಶ್ರೇಷ್ಠವಾದ ಅನ್ನವು ನಪುಂಸಕರಿಗೂ ಕಾಮವನ್ನುಂಟುಮಾಡುತ್ತವೆ.

೭. ಒಳ್ಳೆಯ (ಹೆಚ್ಚಾದ) ಶೀತ ಕಾಲದಲ್ಲಿ (ಚಳಿಗಾಲದಲ್ಲಿ) ಪುರುಷರು, ತಾಂಬೂಲ; ತರುಣಿಯರು : ತೂಲ (ಒಳ್ಳೆಯ ಮೆತ್ತಗಿನ ಹಾಸಿಗೆ), ತೈಲ; ತನೂನಪಾತ್(ಅಗ್ನಿ), ತರಣಿ (ಸೂರ್ಯ), ಈ ಆರು 'ತ' ಕಾರಗಳನ್ನು ಸೇವಿಸತಕ್ಕದ್ದು.

Rarest Archiver

# ಅನುಬಂಧ - ೨

ಶ್ರೀ

## ತಾಂಬೂಲೋತ್ಪತ್ತಿ ವರ್ಣನಂ।

॥ ಸ್ಕಾಂದೇ ಮಹಾ ಪುರಾಣೇ ಷಷ್ಠೇ ನಾಗರ ಖಂಡೇ॥

ಅಧ್ಯಾಯಃ ೨೧೦ (ಪತ್ರಂ. ೨೪೧॥)

ವಿಶ್ವಾಮಿತ್ರ ಉವಾಚ

ತತ್ ಶ್ರುತ್ವಾ ವಚನಂ ತಸ್ಯ ದೇವರ್ಷೇರ್ನಾರದಸ್ಯ ಚ।
ಸಿದ್ಧಸೇನೊ ಮಹೀಪಾಲಃ ಪ್ರಾಪ್ಯ ತಂ ಯೋಗಮುತ್ತಮಂ ॥ ೧॥

ಮಾಧವೇ ಮಾಸಿ ಸಂಪ್ರಾಪ್ತೇ ಅಷ್ಟಮ್ಯಾಂ ಸೂರ್ಯವಾಸರೇ
ಸೂರ್ಯೋದಯೇ ತು ಸಂಪ್ರಾಪ್ತೇ ಯಾವತ್ ಸ್ನಾತ್ವಾರ್ಚಯೇದ್ರವಿಂ ॥ ೨॥

ತಾವತ್ ಕುಷ್ಠವಿನಿರ್ಮುಕ್ತಃ ಸಹಸಾ ಸಮಪದ್ಯತಾ।
ತತೋ ದಿವ್ಯ ವಪುರ್ಭೂತ್ವಾ ಸಂತೋಷಂ ಪರಮಂ ಗತಃ॥
॥ ೩॥

ಪ್ರಾಯಶ್ಚಿತ್ತಂ ತತಶ್ಚಕ್ರೇ ತಾಂಬೂಲಸ್ಯ ಚ ಭಕ್ಷಣಂ।
ಅಜ್ಞಾನೇನ ಕೃತಂ ಯಚ್ಚ ಚೂರ್ಣ ಪತ್ರ ಸಮನ್ವಿತಂ ॥ ೪॥

ತತಶ್ಚ ಪರಮಾಂ ಲಕ್ಷ್ಮೀಂ ಸಂಪ್ರಾಪ್ತಃ ಸ ಮಹೀಪತೇ।
ಪಿತೃ ಪೈತಾಮಹಂ ರಾಜ್ಯಂ ಸ ಪ್ರಚಕ್ರೇ ಯಥಾ ಪುರಾ ॥ ೫॥

ಏತತ್ತೇ ಸರ್ವಮಾಖ್ಯಾತಂ ಶಂಖತೀರ್ಥ ಸಮುದ್ಭವಂ।
ಮಾಹಾತ್ಮ್ಯಂ ಪಾರ್ಥಿವ ಶ್ರೇಷ್ಠ ಕಿಂ ಭೂಯಃ ಶ್ರೋತುಮಿಚ್ಛಸಿ
॥ ೬॥

Rarest Archiver

# ಅನುಬಂಧ - ೨

ಶ್ರೀ

## ತಾಂಬೂಲೋತ್ಪತ್ತಿ ಪ್ರಕರಣವು.
## ಸ್ಕಾಂದ ಮಹಾಪುರಾಣದ, ನಾಗರಖಂಡದಲ್ಲಿ.

### ಅಧ್ಯಾಯ : ೨೧೦ :

### ವಿಶ್ವಾಮಿತ್ರನು ಹೇಳಿದುದು.

೧. ದೇವರ್ಷಿಯಾದ ನಾರದನ ಆ ಮಾತನ್ನು ಕೇಳಿ ಸಿದ್ಧಸೇನ ನೆಂಬ ದೊರೆಯು ಆ ಉತ್ತಮವಾದ ಯೋಗವನ್ನು ಹೊಂದಿ.

೨. ಮಾಧವ (ಚೈತ್ರ, ವೈಶಾಖ) ಮಾಸದ ಪ್ರಾರಂಭದಲ್ಲಿ (ಪ್ರಾಪ್ತವಾದಲ್ಲಿ) ಅಷ್ಟಮೀ, ರವಿವಾರ, ಪ್ರಾತಃಕಾಲದಲ್ಲಿ ಸೂರ್ಯ ನನ್ನು ಪೂಜಿಮಾಡಿದನು.

೩. ಆದುದರಿಂದ ಆತನು ಕುಷ್ಠರೋಗದಿಂದ ತಕ್ಷಣ ಬಿಡುಗಡೆ ಯನ್ನು ಹೊಂದಿದನು. ಮತ್ತು ದೇವತಾ ಶರೀರವನ್ನುಪಡೆದು ಉತ್ತಮ ವಾದ ಸುಖವನ್ನು ಪ್ರಾಪ್ತಿಗೊಂಡನು.

೪. ತರುವಾಯ ಸುಣ್ಣದ ಎಲೆಯಿಂದ ಕೂಡಿದ ತಾಂಬೂಲವನ್ನು ತಿಂದುದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡನು.

೫. ತರುವಾಯು ಆ ದೊರೆಯು ಉತ್ತಮವಾದ ಐಶ್ವರ್ಯವನ್ನು ಹೊಂದಿದುದಲ್ಲದೆ ತಂದೆ, ತಾತನ ಕಾಲದಿಂದ ಬಂದ ರಾಜ್ಯವನ್ನು ಹೊಂದಿದನು.

೬. ಈ ಎಲ್ಲವೂ ನಿನಗೆ ಹೇಳಲಾಗಿದೆ. ಮತ್ತು ಶಂಖತೀರ್ಥನ ಮಾಹಾತ್ಮ್ಯವನ್ನು ಕೇಳಲು ಅಪೇಕ್ಷಿಸುತ್ತೀಯೇನು (ಎಂದು ಕೇಳಿದನು).

Rarest Archive

ಆನರ್ತ ಉವಾಚ।

ಅತ್ಯಾಶ್ಚರ್ಯ ಮಿದಂ ಬ್ರಹ್ಮನ್ ಯತ್ತ್ವಯಾ ಪರಿಕೀರ್ತಿತಂ।
ಯಲ್ಲಕ್ಷ್ಮೀಸ್ತಸ್ಯ ಸನ್ನಷ್ಟಾ ಚೂರ್ಣ ಪತ್ರಸ್ಯ ಭಕ್ಷಣಾತ್ ॥ ೭ ॥

ಕೀದೃಕ್ ತೇನ ಕೃತಂ ತಸ್ಯ ಪ್ರಾಯಶ್ಚಿತ್ತಂ ವಿಶುದ್ಧಯೇ
ಕೀದೃಕ್ ತೇನ ಕೃತಂ ತಚ್ಚ ನಿಜರಾಜ್ಯಂ ಯಥಾಪುರಾ ॥ ೮ ॥

ವಿಶ್ವಾಮಿತ್ರ ಉವಾಚ।

ಏಷಾ ಪುಣ್ಯತಮಾ ಮೇಧ್ಯಾ ನಾಗವಲ್ಲೀ ನರಾಧಿಪ।
ಅಯಥಾವತ್ ಕೃತಾವಕ್ತ್ರೇ ಬಹೂನ್ ದೋಷಾನ್ ಪ್ರಯಚ್ಛತಿ।
ತಸ್ಮಾದ್ಯತ್ನೇನ ಸಂಭಕ್ಷ್ಯಾ ದತ್ವಾ ಚೈವ ಸಶಕ್ತಿತಃ ॥ ೯ ॥

ಆನರ್ತ ಉವಾಚ।

ನಾಗವಲ್ಲೀ ಕಥಂ ಜಾತಾ ಕಸ್ಮಾದ್ದೋಷೋ ಮಹಾನ್ಸ್ಮೃತಃ।
ಅಯಥಾವದ್ಭಕ್ಷಣಾಚ್ಚ ತನ್ಮೇವಕ್ತು ಮಿಹಾರ್ಹಸಿ ॥ ೧೦ ॥

ವಿಶ್ವಾಮಿತ್ರ ಉವಾಚ।

ಪ್ರಶ್ನಭಾರೋ ಮಹಾನೇಷತ್ವಯಾ ಮೇ ಪರಿಕೀರ್ತಿತಃ।
ತಥಾಪಿ ಚ ವದಿಷ್ಯಾಮಿ ಯದಿತೇ ಕೌತುಕಂ ನೃಪ।
ಯಸ್ಮಾತ್ ಸಂಜಾಯತೇ ದೋಷಃ ಚೂರ್ಣಪತ್ರಸ್ಯ ಭಕ್ಷಣಾತ್
॥ ೧೧ ॥

ಅಮೃತಾರ್ಥಂ ಪುರಾದ್ಯೇವೈಃ ಮಥಿತಃ ಕಲಶೋ ದಧಿಃ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾತು ವಾಸುಕಿಂ
॥ ೧೨ ॥

ಮುಖದೇಶೇ ಬಲಿರ್ಲಗ್ನಃ ಪುಚ್ಛದೇಶೇಽಖಿಲಾಸುರಾಃ
ವಾಸುದೇವ ಮತೇನೈವ ಸಂದಧಾರಾಥ ಕಚ್ಛಪಃ ॥ ೧೩ ॥

Rarest Archive

## ಆನರ್ತನು ಹೇಳಿದನು.

೭. ಎಲೈ ವಿಶ್ವಾಮಿತ್ರ ಋಷಿಯೇ, ನಿನ್ನಿಂದ ಹೇಳಲ್ಪಟ್ಟ ಈ ಕಥೆಯು ಆಶ್ಚರ್ಯಕರವಾದುದು. ಆ ಸುಣ್ಣದೆಲೆಯನ್ನು ತಿಂದುದರಿಂದ ಸಿದ್ಧಸೇನನಿಗೆ ರಾಜ್ಯಭ್ರಷ್ಟವೇಕಾಯಿತು.?

೮. ಅವನು ಎಂತಹ ಪ್ರಾಯಶ್ಚಿತ್ತವನ್ನು ಮಾಡಿಕೊಂಡನು? ತನ್ನ ರಾಜ್ಯವನ್ನು ಪುನಃ ಯಾವರೀತಿ ಹೊಂದಿದನು ?

## ವಿಶ್ವಾಮಿತ್ರನು ಹೇಳಿದನು.

೯. ಎಲೈ ದೊರೆಯೇ (ಆನರ್ತನೇ), ಈ ವಿಳ್ಳೇದೆಲೆಯು ಪವಿತ್ರವೂ ಪುಣ್ಯಕರವೂ ಆಗಿರುತ್ತದೆ. ಆದರೂ ನಿಯಮವನ್ನು ಬಿಟ್ಟು (ತಿಂದಲ್ಲಿ) ಸೇವಿಸಿದಲ್ಲಿ ಬಹಳ ದೋಷಗಳನ್ನು ಕೊಡುತ್ತದೆ. ಆದ್ದರಿಂದ ಯತ್ನ ಮತ್ತು ಶಕ್ತ್ಯನುಸಾರವಾಗಿ ದಾನಮಾಡಿ ಸೇವಿಸಬೇಕು.

೧೦. ಆನರ್ತನು ನಾಗವಲ್ಲಿಯು ಹೇಗೆ ಹುಟ್ಟಿತು ? ವಿಧಿಯನ್ನು ಬಿಟ್ಟು ಸೇವಿಸಿದಲ್ಲಿ ಅಂತಹ ಮಹಾ ದೋಷವು ಹೇಗೆ ಆಗುತ್ತದೆ ಎಂಬುದನ್ನು ದಯವಿಟ್ಟು ತಿಳಿಸಿರಿ ಎಂದು ಕೇಳಿದನು.

## ವಿಶ್ವಾಮಿತ್ರನು ಹೇಳಿದನು.

೧೧. ನೀನು ಕೇಳಿದ ಪ್ರಶ್ನೆಯು ಬಹಳ ದೊಡ್ಡದು. ಸುಣ್ಣದೆಲೆಯನ್ನು ತಿನ್ನುವುದರಿಂದ ಆದ ದೋಷವನ್ನು ಕೇಳಲೇ ಬೇಕೆಂಬ ಆಸೆ ಇದ್ದಲ್ಲಿ ಹೇಳುತ್ತೇನೆ (ಕೇಳು).

೧೨. ಪೂರ್ವದಲ್ಲಿ ಕ್ಷೀರಸಮುದ್ರವು ಮಂಥರ ಪರ್ವತವನ್ನು ಕಡೆಗೋಲಾಗಿ ಮಾಡಿ, ವಾಸುಕಿಯನ್ನು (ಸರ್ಪರಾಜ) ಹಗ್ಗವನ್ನಾಗಿ ಮಾಡಿ, ದೇವಾಸುರರಿಂದ ಕಡೆಯಲ್ಪಟ್ಟಿತು.

೧೩. (ಸರ್ಪರಾಜನ) ಮುಖಭಾಗದಲ್ಲಿ ಬಲಿಚಕ್ರವರ್ತಿಯೂ, ಮತ್ತು ಅವನ ಅನುಯಾಯಿಗಳೂ, ಬಾಲವಿರುವ ಭಾಗದಲ್ಲಿ ಪರಮಾತ್ಮನ ಆಜ್ಞೆಯಂತೆ ಸಮಸ್ತ ದೇವತೆಗಳೂ ಇದ್ದರು. ಮತ್ತು ಪರಮಾತ್ಮನು ಆಮೆಯ ರೂಪವನ್ನು ಧರಿಸಿ, ಮಂದರ ಪರ್ವತವನ್ನು ಎತ್ತಿಕೊಂಡಿದ್ದನು.

Rarest Archiver

ಮಂಥರೇ ಭ್ರಮಮಾಣೇತು ಪ್ರಾಗೇವ ನೃಪಸತ್ತಮ ।
ಅನರ್ಥ ಸಹಸಾ ಜಾತಂ ರತ್ನತ್ರಿತಯಮೇವಚ ॥ ೧೪ ॥

ನೀಲಾಂಬರಧರಃ ಕೃಷ್ಣಃ ಪುರುಷೋ ವಕ್ರನಾಸಿಕಃ ।
ಕೃಷ್ಣದಂತಃ ಸ್ಥೂಲಶಿರಾ ದೀರ್ಘಗ್ರೀವೋ ಮಹೋದರಃ ।
ಶೂರ್ಪಾಕಾರಾಂಘ್ರಿರೇವಾಸೌ ಚಿಪಿಟಾಕ್ಷೋ ಭಯಾವಹಃ ॥ ೧೫ ॥

ತಥಾ ತದ್ರೂಪಿಣೀ ತಸ್ಯ ಕುಭಾರ್ಯಾ ರಾಕ್ಷಸೀ ಯಥಾ ।
ಶಿಶು ನಾಂಗುಲಿ ಲಗ್ನೇನ ಗರ್ಭಶ್ರಮ ಪರಾಯಣಾ ॥ ೧೬ ॥

ತತೋ ದೇವಗಣಾಃ ಸರ್ವೇ ದಾನವಾಶ್ಚ ವಿಶೇಷತಃ ।
ಮಂಥಾನಾಂ ತತ್ ಪರಿತ್ಯಜ್ಯ ತಾನ್ ಗೃಹೀತುಂ ಪ್ರಧಾವಿತಾಃ ॥ ೧೭ ॥

ಅಥ ತಾನ್ ವಿಕೃತಾನ್ ದೃಷ್ಟ್ವಾ ಸರ್ವೇ ಶಂಕಾ ಸಮನ್ವಿತಾಃ ।
ಜಗ್ರಹುಸ್ತೈವ ರಾಜೇಂದ್ರ ಜಪಸುಕ್ತ ಪರಸ್ಪರಂ ॥ ೧೮ ॥

ಅಥೋವಾಚ ಬಲಿರ್ದೈತ್ಯಃ ಕೃತಾಂಜಲಿ ಪುಟಸ್ಥಿತಃ ।
ಬ್ರಹ್ಮಾದಿ(ದಿಃ)ಯಲ್ಲಭೇತ್ ಸರ್ವಂ ಯತ್‌ಪುರಸ್ತಾತ್ತ್ವ
ಜಾಯತೇ ॥ ೧೯ ॥

ರತ್ನತ್ರಯ ಮೇತಾದ್ದಿ ತಸ್ಮಾತ್ ಗೃಹ್ಣಾತು ಪದ್ಮಜಃ ।
ಯೇನ ಸಿದ್ಧಿ ಭವೇತ್ ಅಸ್ಮಿನ್ ಮಂಥನೇ ಕಸ್ಯ ಚಾರ್ಪಣಾತ್ ॥
॥ ೨೦ ॥

ತದ್ವಾಕ್ಯಂ ವಿಷ್ಣುನಾ ತಸ್ಯ ಶಂಸಿತಂ ಶಂಕರೇಣ ತು ॥
ಇಂದ್ರಾದ್ಯೈಶ್ಚ ಸುರೈಃ ಸರ್ವೇ ದಾನವೈಶ್ಚ ವಿಶೇಷತಃ ॥ ೨೧ ॥

Rarest Archiver

೧೪. ಆ ಮಂಥರ ಪರ್ವತವು ತಿರುಗುವಾಗ, ಎಲ್ಲೆ ಅನರ್ತರ್ನೇ, ಮೂರು ರತ್ನಗಳು ಹುಟ್ಟಿದುವು.

೧೫. ನೀಲವಾದ ಬಟ್ಟೆಯನ್ನುಟ್ಟ, ಕರ್ರಗಿರುವ, ಸೊಟ್ಟವಾದ ಮೂಗು ಉಳ್ಳ, ಕರೀ ಹಲ್ಲು, ದಪ್ಪನಾದ ತಲೆ, ಉದ್ದವಾದ ಕತ್ತು, ದೊಡ್ಡದಾದ ಹೊಟ್ಟೆ, ಮರದಂತಿರುವ ಕಾಲುಳ್ಳ ಒಬ್ಬ ಪುರುಷನು,

೧೬. ಅಂತೆಯೇ, ಗರ್ಭಶ್ರಮದಿಂದಕೂಡಿದ, ಅದೇರೀತಿ ವಿಕಾರ ರೂಪವುಳ್ಳ, ಒಂದು ಮಗುವಿನಿಂದಕೂಡಿದ ರಾಕ್ಷಸಿಯು ಹುಟ್ಟಿದದು.

೧೭. ಕೂಡಲೇ ದೇವದಾನವರು ಕಡೆಗೋಲನ್ನುಬಿಟ್ಟು, ಅವನ್ನು ತೆಗೆದುಕೊಳ್ಳಲು ಓಡಿದರು.

೧೮. ಮತ್ತು ಆ ವಿಕಾರ ರೂಗಿಗಳನ್ನು ನೋಡಿ, ಭಯಗ್ರಸ್ತರಾಗಿ ಅವನ್ನು ಅಪಹಾಸ್ಯಮಾಡಿದರು.

೧೯. ತರುವಾಯ ಬಲಿರಾಜನು ಕೈಜೋಡಿಸಿದವನಾಗಿ, ನಮ್ಮೆಲ್ಲರಿಗೂ ಆದಿಭೂತನಾದವನು ಬ್ರಹ್ಮನು. ಆದುದರಿಂದ ಮೊದಲು ಯಾವುದು ಹುಟ್ಟುವುದೊ

೨೦. ಆ ಮೂರು ರತ್ನಗಳನ್ನು ಬ್ರಹ್ಮನೇ ತೆಗೆದುಕೊಳ್ಳಲಿ. ಆದರಿಂದ (ಇದನ್ನು ನಾವು ಬ್ರಹ್ಮಾರ್ಪಣ ಮಾಡುವುದರಿಂದ) ನಮಗೆ ಈಗಿನ ಈ ಮಂಥನ ಪ್ರಯತ್ನದಿಂದ ಕಾರ್ಯ ಸಿದ್ಧಿಯಾಗುವುದು ಎಂದನು.

೨೧. ಈ ರೀತಿಯಾದ ಬಲಿರಾಜನ ವಾಕ್ಯವನ್ನು ವಿಷ್ಣು, ಶಿವ, ಇಂದ್ರ ಆದಿಯಾಗಿ ದೇವತೆಗಳು ಎಲ್ಲರೂ ಹೊಗಳಿದರು.



Rarest Archive

ಏತಸ್ಮಿನ್ನಂತರೇ ಬ್ರಹ್ಮಾ ಜಗ್ರಾಹ ತ್ರಿತಯಂ ಚ ತತ್ ।
ದಾಕ್ಷಿಣ್ಯಾತ್ ಸರ್ವದೇವಾನಾಂ ಅನಿಚ್ಛನ್ನಪಿ ಪಾರ್ಥಿವ ।
ಮಮಂಥುಃ ಸಾಗರಂ ರಾಜನ್ ಪುನಸ್ತೇ ಯತ್ನಮಾಶ್ರಿತಾಃ ॥ ೨೨ ॥

ತತಶ್ಚ ವಾರುಣೀ ಜಾತಾ ದಿವ್ಯಗಂಧ ಸಮನ್ವಿತಾ ।
ಬಲಿನಾ ಸಂಗೃಹೀತಾ ಸಾ ಪ್ರತ್ಯಕ್ಷಂ ಬಲವಿದ್ವಿಷಃ ॥ ॥ ೨೩ ॥

ಆವರ್ತೇ ಚಾಪರೇ ಜಾತೇ ನಿಷ್ಕ್ರಾಂತಃ ಕೌಸ್ತುಭೋಮಣಿಃ ।
ಸ ಗೃಹೀತೋ ಮಹಾರಾಜ ವಿಷ್ಣುನಾ ಪ್ರಭವಿಷ್ಣುನಾ ॥ ೨೪ ॥

ಅಥಾಪರೇ ಸ್ಥಿತೇ ತತ್ರ ಮಹಾವರ್ತೇ ನಿಶಾಪತಿಃ ।
ಸಂಜಾತಃ ಸ ವೃಷಾಂಕೇನ ಸಂಗೃಹೀತಶ್ಚ ತತ್‌ಕ್ಷಣಾತ್ ॥ ೨೫ ॥

ಪಾರಿಜಾತಸ್ತತೋ ಜಾತೋ ದಿವ್ಯಗಂಧ ಸಮನ್ವಿತಃ ।
ಸ ಗೃಹೀತ್ವಾ ಸುರೈಃ ಸರ್ವೈಃ ಸ್ಥಾಪಿತೋ ನಂದನೇ ವನೇ ॥ ೨೬ ॥

ತಸ್ಯಾನಂತರ ಮೇವಾಥ ಸುರಭೀ ವತ್ಸ ಸಂಯುತಾ ।
ನಿಷ್ಕ್ರಾಂತಾ ವ್ಯೋಮ ಮಾರ್ಗೇಣ ಗೋಲೋಕಂ
ಸಮವಸ್ಥಿತಾ ॥ ೨೭ ॥

ತತೋ ಧನ್ವಂತರಿರ್ಜಾತೋ ಬಿಭ್ರದ್ಧಸ್ತೇ ಕಮಂಡಲುಮ್ ।
ಸಂಪೂರ್ಣ ಮಮೃತೇನೈವ ಸ ದೇವೈಃ ದಾನವೈಃ ನೃಪ ॥ ೨೮ ॥

ಗೃಹೀತೋ ಯುಗಪತ್ ಯುದ್ಧೈಃ ಪರಸ್ಪರ ಜಿಗೀಷಯಾ ।
ದೇವಾನಾಂ ಹಸ್ತಗೋ ವೈದ್ಯೋ ದೈತ್ಯಾನಾಂ ಚ
ಕಮಂಡಲುಃ ॥ ॥ ೨೯ ॥

ತತಸ್ತಂ ಲೋಭ ಸಂಯುಕ್ತಾ ಮಮಂಥುಃ ಸಾಗರಂ ನೃಪ ।
ಪದ್ಮ ಹಸ್ತಾತ್ರ ಸಂಜಾತಾ ತತೋ ಲಕ್ಷ್ಮೀ ಸಿತಾಂಬರಾ ॥ ೩೦ ॥

Rarest Archive

೨೨. ಈ ಮಧ್ಯದಲ್ಲಿ ಬ್ರಹ್ಮನು ತನಗೆ ಇಷ್ಟವಿಲ್ಲದಿದ್ದರೂ, ಸಮಸ್ತ ದೇವತೆಗಳ ದಾಕ್ಷಿಣ್ಯದಿಂದ ಆ ರತ್ನತ್ರಯಗಳನ್ನು ಸ್ವೀಕರಿಸಿದನು ಮತ್ತು ದೇವಾಸುರರು ಸಮುದ್ರವನ್ನು ಕಡೆಯಲು ತೊಡಗಿದರು.

೨೩. ತರುವಾಯ ದಿವ್ಯಗಂಧದಿಂದ ಕೂಡಿದ ಹೆಂಡವು ಹುಟ್ಟಿತು. ಬಲಿಚಕ್ರವರ್ತಿಯು, ಆ ಇಂದ್ರಾದಿದೇವತೆಗಳ ಎದುರಿನಲ್ಲಿಯೇ ಅದನ್ನು ತೆಗೆದುಕೊಂಡು ಬಿಟ್ಟನು.

೨೪. ಮತ್ತೊಂದು ಸಾರಿ ಕಡೆವಾಗ ಹುಟ್ಟಿದ ಕೌಸ್ತುಭ ಮಣಿಯನ್ನು ಪ್ರಭುವಾದ ವಿಷ್ಣುವು ಸ್ವೀಕರಿಸಿದನು.

೨೫. ಮುಂದೆ ಹುಟ್ಟಿದ ಚಂದ್ರನೆಂಬ ರತ್ನವು ಈಶ್ವರನಿಂದ ಸ್ವೀಕರಿಸಲ್ಪಟ್ಟಿತು.

೨೬. ತರುವಾಯ ಉತ್ತಮವಾದ ಸುವಾಸನೆಯುಳ್ಳ ಪಾರಿಜಾತ ವೃಕ್ಷವು ಹುಟ್ಟಿ ಸಮಸ್ತದೇವತೆಗಳಿಂದಲೂ ನಂದನವನದಲ್ಲಿ ಇಡಲ್ಪಟ್ಟಿತು

೨೭. ನಂತರ ಹುಟ್ಟಿದ ಕಾಮಧೇನುವು, ಕರುವಿನಿಂದ ಕೂಡಿದ್ದಾಗಿ, ಗೋಲೋಕವನ್ನು ಸೇರಿತು.

೨೮. ತರುವಾಯ ಅಮೃತದಿಂದ ಕೂಡಿದ ಕಮಂಡಲುವನ್ನು ಧರಿಸಿ ದನ್ವಂತರಿಯ ಅವತಾರವಾಯಿತು, ಆ ಧನ್ವಂತರಿಯು ದೇವ ದಾನವರಿಂದ....

೨೯. ತತ್‍ಕ್ಷಣದಲ್ಲಿ ಪರಸ್ಪರ ಜಯಿಸುವ ಅಪೇಕ್ಷೆಯಿಂದ ಹಿಡಿಯಲ್ಪಟ್ಟನು. ದೇವತೆಗಳ ಕೈಯಲ್ಲಿ ವೈದ್ಯನಾದ ಧನ್ವಂತರಿಯು, ದೈತ್ಯರ ಕೈಯಲ್ಲಿ ಅಮೃತದ ಕಮಂಡಲವೂ ಸೇರಿದುವು.

೩೦. ಪುನಃ ಲೋಭದಿಂದ ಕೂಡಿದವರಾಗಿ ಸಮುದ್ರವನ್ನು ಕಡೆದಾಗ ಬಿಳಿಯ ವಸ್ತ್ರವನ್ನೂ, ಕೈಯಲ್ಲಿ ಕಮಲವನ್ನೂ ಧರಿಸಿದ ಲಕ್ಷ್ಮಿಯು ಹುಟ್ಟಿದಳು.

Rarest Archive

ಸ್ವಯಮೇವ ವೃತೋ ವಿಷ್ಣುಃ ತಯಾಪಾರ್ಥಿವ ಸತ್ತಮ ।
ಮಥ್ಯಮಾನೇ ತತೋತೀವ ಸಮುದ್ರೇ ದೇವ ದಾನವೈಃ ॥ ೩೧ ॥

ಕಾಲಕೂಟಂ ಸಮುತ್ಪನ್ನಂ ಯೇನ ಸರ್ವೇ ಸುರಾಸುರಾಃ ।
ಸಂಪ್ರಾಪ್ತಾ ಪರಮಂ ಕಷ್ಟಂ ಪ್ರಭಗ್ನಾಶ್ಚ ದಿಶೋದಶ ॥ ೩೨ ॥

ತಂ ದೃಷ್ಟ್ವಾ ಭಗವಾಂ ಶಂಭುಸ್ತೀವ್ರಂ ತೀವ್ರ ಪರಾಕ್ರಮಃ ।
ಭಕ್ಷಯಾಮಾಸ ರಾಜೇಂದ್ರ ನೀಲಕಂತಸ್ತತೋಽಭವತ್ ॥ ೩೩ ॥

ಅಥ ಸಂತ್ಯಜ್ಯ ಮಂಥಾನಂ ಮಂಧರಂ ವಾಸುಕಿಂ ತಥಾ ।
ಅಮೃತಾರ್ಥೇಽಭವದ್ಯುದ್ಧಂ ದೈತ್ಯಾನಾಂ ವಿಬುಧೈಃ ಸಹ ॥ ೩೪ ॥

ಅಥ ಸ್ತ್ರೀ ರೂಪಮಾದಾಯ ವಿಷ್ಣುಃ ದೈತ್ಯಾನುವಾಚ ತಾನ್ ।
ತತೋ ಹೃಷ್ಟೋ ಬಲಿಸ್ತಸ್ಯೈ ದತ್ವಾ ಪೀಯೂಷ ಮೇವತತ್ ॥
॥ ೩೫ ॥

ವಿಶ್ವಾಸಂ ಪರಮಂ ಗತ್ವಾಯುದ್ಧಂ ಚಕ್ರೇ ಸುರೈ ಸ್ಸಹ ।
ತತೋ ವಿಷ್ಣುಃ ಪರಿತ್ಯಜ್ಯ ಸ್ತ್ರೀರೂಪಂ ಪುರುಷಾಕೃತಿಃ ॥ ೩೬ ॥

ತದೇವಾಮೃತಮಾದಾಯ ಯಯೌ ಯತ್ರ ದಿವೌಕಸಃ ।
ಅಬ್ರವೀತ್ತಾನ್ ಸುಹೃಷ್ಟಾತ್ಮಾ ಪಿಬಧ್ವಮಮೃತಂ ಸುರಾಃ ॥
॥ ೩೭ ॥

ಯೇನಾಮರತ್ವಮಾಸಾದ್ಯ ವ್ಯಾಪಾದಯತ ದಾನವಾನ್ ।
ತೇ ತಥೇತಿ ಪ್ರತಿಜ್ಞಾಯ ಪಪುಃ ಪೀಯೂಷಮುತ್ತಮಂ ॥ ೩೮ ॥

ಅಮರಾಶ್ಚ ತತೋ ಜಾತಾ ಜಘ್ನುಃ ಸಂಖ್ಯೇ ಮಹಾಸುರಾನ್ ॥
॥ ೩೯ ॥

ತೇಷಾಂ ಪಾನವಿಧೌತತ್ರ ವರ್ತಮಾನೇ ಮಹೀಪತೇ
ರಾಹುರ್ವಿಬುಧ ರೂಪೇಣ ಪಪೌಪೀಯೂಷ ಮುತ್ಸುಕಃ ॥ ೪೦ ॥

Rarest Archiver

೩೧. ಆಕೆಯು ತಾನಾಗಿಯೇ ಮಹಾವಿಷ್ಣುವನ್ನು ವರಿಸಿದಳು. ಪುನಃ ದೇವದಾನವರಿಂದ ಸಮುದ್ರವು ಮಥಿಸಲ್ಪಡಲು....

೩೨. ಕಾಲಕೂಟ ವಿಷವು ಹುಟ್ಟಿತು. ಅದರಿಂದ ಸಮಸ್ತದೇವ, ದಾನವರೂ, ಹತ್ತು ದಿಕ್ಕುಗಳೂ, ಪರಮ ದುಃಖವನ್ನು ಹೊಂದಿದರು.

೩೩. ಆ ತೀಕ್ಷ್ಣವಾದ ವಿಷವನ್ನು ಮಹಾ ಪರಾಕ್ರಮಿಯಾದ ಈಶ್ವರನು ತಿಂದು 'ನೀಲಕಂಠ'ನಾದನು.

೩೪. ತರುವಾಯವೇ ದೇವದಾನವರು ಆ ಅಮೃತಕ್ಕಾಗಿ ಹೊಡೆದಾಡಲಾರಂಭಿಸಿದರು.

೩೫. ವಿಷ್ಣುವು ಸ್ತ್ರೀರೂಪವನ್ನು ಧರಿಸಿ ಅವರನ್ನು ಕುರಿತು ಮಾತಾಡಲು, ಆ ಬಲಿಚಕ್ರವರ್ತಿಯು ತನ್ನಲ್ಲಿದ್ದ ಆ ಅಮೃತ ಕಮಂಡಲವನ್ನೂ ಆ ಸ್ತ್ರೀರೂಪಧಾರಿಯಾದ ವಿಷ್ಣುವಿನ ಕೈಯಲ್ಲಿ ಕೊಟ್ಟು,

೩೬. ನಂಬಿಕೆಯನ್ನು ಹೊಂದಿ, ದೇವತೆಗಳೊಡನೆ ಯುದ್ಧವಾಡಲಾರಂಭಿಸಿದನು. ತಕ್ಷಣವೇ ವಿಷ್ಣುವು ಸ್ತ್ರೀರೂಪವನ್ನು ಬಿಟ್ಟು ಸ್ವರೂಪವನ್ನು ಹೊಂದಿದನು.

೩೭. ಆ ಅಮೃತವನ್ನು ತೆಗೆದುಕೊಂಡು ದೇವತೆಗಳ ಕಡೆಗೆ ಹೋಗಿ ಅಮೃತಪಾನಮಾಡಲು ದೇವತೆಗಳಿಗೆ ಹೇಳಿದನು.

೩೮. ಇದನ್ನು ಕುಡಿಯುವುದರಿಂದ ಅಮರತ್ವವನ್ನು ಹೊಂದಿ (ಸಾವಿಲ್ಲದವರಾಗಿ) ದಾನವರನ್ನು ಸಂಹರಿಸಿ ಎಂದು ಹೇಳಿದನು. ಅವರು ಅದೇ ಪ್ರತಿಜ್ಞೆಯನ್ನು ಕೈಗೊಂಡು ಉತ್ತಮವಾದ ಅಮೃತಪಾನ ಮಾಡಿದರು.

೩೯. ಅದರಿಂದ ಮರಣವಿಲ್ಲದವರಾಗಿ ಯುದ್ಧದಲ್ಲಿ ಬಲಿಷ್ಠರಾದ ದೈತ್ಯರನ್ನೂ ಸಹ ಸಂಹರಿಸಿದರು.

೪೦. ಆ ದೇವತೆಗಳು ಕುಡಿಯುತ್ತಿರುವಲ್ಲಿ, ಆಶೆಯುಳ್ಳ ರಾಹುವೂ ಸಹ ದೇವತೆಗಳ ರೂಪದಿಂದ ಅಮೃತಪಾನಮಾಡಿದನು.


Rarest Archiver

ಸಲಕ್ಷಿತೋ ಮಹಾದೈತ್ಯಶ್ಚಂದ್ರಾರ್ಕಾಭ್ಯಾಂ ಚ ತತ್‌ಕ್ಷಣಾತ್ ।
ನಿವೇದಿತೊ ಹರೇ ರಾಜನ್ನಾಯಂ ದೇವೋ ಮಹಾಸುರಃ ॥ ೪೧ ॥

ತತ್‌ಶ್ರುತ್ವಾ ವಾಸುದೇವೇನ ತಸ್ಯ ಚಕ್ರಂ ಸುದರ್ಶನಂ ।
ವಧಾಯ ಪಾರ್ಥಿವ ಶ್ರೇಷ್ಠ ಮುಕ್ತಂ ವಜ್ರಸಮಪ್ರಭಂ ॥ ೪೨ ॥

ಯಾವನ್ಮಾತ್ರಂ ಶರೀರಂ ತತ್ ತಸ್ಯಾವ್ಯಾಪ್ತಂ ಮಹೀಪತೇ ।
ಅಮೃತೇನ ತತಃ ಕೃತ್ತಮಮೋಘೇನಾಪಿ ತತ್ ಶಿರಃ ॥ ೪೩ ॥

ತತೋಽಮರತ್ವಮಾಪನ್ನಃ ಸಯಾವತ್ ಸಿಂಹಿಕಾಸುತಃ ।
ತಾವತ್ ಪ್ರೋಕ್ತೋಽಚ್ಯುತೇನಾಥ ಸಾಮ್ನಾ ಪರಮವಲ್ಗುನಾ ॥
॥ ೪೪ ॥

ತ್ಯಜದೈತ್ಯಾನ್ ಮಹಾಭಾಗ ದೇವಾನಾಂ ಸಮ್ಮತೊ ಭವ ।
ಸಂಪ್ರಾಪ್ಸ್ಯಸಿ ಪರಾಂ ಪೂಜಾಂ ಸದಾ ತ್ವಂ ಗ್ರಹಮಂಡಲೇ ॥ ೪೫ ॥

ಸತಥೇತಿ ಪ್ರತಿಜ್ಞಾಯ ತ್ಯಕ್ತ್ವಾ ತಾನ್ ದೈತ್ಯಸತ್ತಮಾನ್ ।
ಪೂಜಾಂ ಪ್ರಾಪ್ನೋತಿ ಮರ್ತ್ಯಾನಾಂ ಸಂಸ್ಥಿತೋ ಗ್ರಹಮಂಡಲೇ॥
॥ ೪೬ ॥

ಏತಸ್ಮಿನ್ನಂತರೇ ದೈತ್ಯಾ ನಿರ್ಜಿತಾ ಸುರಸತ್ತಮೈಃ ।
ದಿಶೋ ಜಗ್ಮುಃ ಪರಿತ್ರಸ್ತಾಃ ಕೇಚಿನ್ ಮೃತ್ಯುಮುಪಾಗತಾಃ ॥
॥ ೪೭ ॥

ಪೀತಶೇಷಂ ಚ ಪೀಯೂಷಂ ಸ್ಥಾಪಿತಂ ನಂದನೇವನೇ ।
ನಾಗರಾಜಸ್ಯ ಯತ್ರೈವ ಸ್ಥಿತಮಾಲಾನಮೇವ ಚ ॥ ೪೮ ॥

ಅಹರ್ನಿಶಂ ಮದಸ್ರಾವೀ ಕರೀಂದ್ರ ಸ್ತೋಽಪಿ ಸಂಸ್ಥಿತಃ ।
ತತ್ಪ್ರಭಾವೈಃ ಪ್ರ ಭಿನ್ನಃ ಸ ಪೀಯೂಷಸ್ಯ ಕಮಂಡಲುಃ ॥ ೪೯ ॥

Rarest Archiver

೪೧. ಸೂರ್ಯ ಚಂದ್ರರಿಂದ, ಆ ಕ್ಷಣವಲ್ಲಿ ನೋಡಲ್ಪಟ್ಟ ಆ ರಾಹುವೆಂಬ ದೈತ್ಯನು, ವಿಷ್ಣುವಿಗೆ ಇವನು ದೈತ್ಯನೆಂದು ನಿವೇದಿಸಿದರು.

೪೨. ಆ ಮಾತನ್ನು ಕೇಳಿದ ನಾರಾಯಣನು ರಾಹುವನ್ನು ಕೊಲ್ಲುವುದಕ್ಕಾಗಿ ವಜ್ರಾಯುಧಕ್ಕೆ ಸಮಾನವಾದ ಚಕ್ರಾಯುಧವನ್ನು ಬಿಟ್ಟನು.

೪೩. ಆಗ, ಆ ಅಮೃತವು ರಾಹುವಿನ ಹೊಟ್ಟೆಯೊಳಗೆ ಹೋಗುವುದರೊಳಗೆ ಅವನ ತಲೆಯು ಆ ಚಕ್ರದಿಂದ ಕತ್ತರಿಸಲ್ಪಟ್ಟಿತು.

೪೪. ತರುವಾಯ ದೇವತ್ವವನ್ನು ಹೊಂದಿದ ಆ ರಾಹು (ಸಿಂಹಿಕಾಪುಗ) ವನ್ನು ಕುರಿತು ವಿಷ್ಣುವು ಸೌಮ್ಯ (ಸಾಮ) ವಚನದಿಂದ....

೪೫. ದೈತ್ಯರನ್ನು ಬಿಟ್ಟು, ದೇವತೆಗಳಿಗೆ ಸಮ್ಮತನಾಗಿರು. ನವಗ್ರಹಗಳಲ್ಲಿ ನೀನೂ ಒಬ್ಬನಾಗಿ ಪೂಜೆಯನ್ನು ಹೊಂದುತ್ತೀಯೆ ಎಂದನು.

೪೬. ಆ ರಾಹುವೂ ಸಹ ದೈತ್ಯರನ್ನು ಬಿಟ್ಟು ದೇವಸಮ್ಮತನಾದ್ದರಿಂದ ಗ್ರಹಮಂಡಲದಲ್ಲಿ ಇಂದಿಗೂ ಪೂಜೆಯನ್ನು ಹೊಂದುತ್ತಿದ್ದಾನೆ.

೪೭. ಈ ಮಧ್ಯದಲ್ಲಿ ದೇವತೆಗಳಿಂದ ಸೋತ ದೈತ್ಯರುಗಳು ದಿಕ್ಕಾಪಾಲಾದರು. ಮತ್ತು ಕೆಲವರು ಕೊಲ್ಲಲ್ಪಟ್ಟರು.

೪೮. ಅವರು (ದೇವತೆಗಳು) ಕುಡಿದು ಉಳಿದ ಅಮೃತವನ್ನು ನಂದನ ವನದಲ್ಲಿರುವ ಗಜರಾಜನ ಕಂಭದ ಸಮೀಪದಲ್ಲಿ ಇಟ್ಟರು.

೪೯. ಹಗಲಿರುಳೂ ಐರಾವತವೆಂಬ ಆನೆಯು ಮದಪ್ರದವಾಗಿದ್ದಿತು. ಅದರ ಪ್ರಭಾವದಿಂದ ಆ ಅಮೃತಕಲಶವು ಒಡೆದುಹೋಯಿತು.

Rarest Archive

ತತೋ ವಲ್ಲೀ ಸಮುತ್ಪನ್ನಾ ತಸ್ಮಾಚ್ಚೈವ ಕಮಂಡಲೋಃ ।
ತತ್ರಾಲಾನ ಸಮಾರೂಢಾ ವೃದ್ಧಿಂಚ ಪರಮಾಂಗತಾ ॥ ೫೦ ॥

ತದುದ್ಭವಾನಿ ಪತ್ರಾಣಿ ಗೃಹೀತ್ವಾ ಸುರಸತ್ತಮಾಃ ।
ಅಪೂರ್ವಾಣಿ ಸುಗಂಧೀನಿ ಮತ್ವಾತೇ ಭಕ್ಷಯಂತಿ ಚ ॥ ೫೧ ॥

ವಕ್ತ್ರಶುದ್ಧಿಕೃತೇ ರಾಜನ್ ವಿಶೇಷೇಣ ಪ್ರಹರ್ಷಿತಾಃ ॥ ೫೨ ॥

ಅಥ ಧನ್ವಂತರಿರ್ವೈದ್ಯಃ ಸ್ವಬುಧ್ಯಾ ಪೃಥಿವೀಪತೇ
ನಾಗಾಲಾನೇ ಯಥಾ ಜಾತಾ ನಾಗವಲ್ಲೀ ಭವಿಷ್ಯತಿ ॥ ೫೩ ॥

ಸದಾಸ್ಮರಸ್ಯ ಸಂಸ್ಥಾನಂ ಮಮವಾಕ್ಯಾತ್ ಭವಿಷ್ಯತಿ ।
ನಾಗವಲ್ಲೀತಿ ವೈ ನಾಮ ತಸ್ಯಾಶ್ಚಕ್ರೇ ತತಃ ಪರಂ ॥ ೫೪ ॥

ಸಂಯೋಗಂ ಚ ಚಕಾರಾಥ ತಾಂಬೂಲಂ ಜಾಯತೇ ಯಥಾ ।
ಪೂಗೀ ಫಲೇನ ಚೂರ್ಣೇನ ಖದಿರೇಣಾಪಿ ಪಾರ್ಥಿವ ॥ ೫೫ ॥

ಕಸ್ಯ ಚಿತ್ವಥ ಕಾಲಸ್ಯ ವ್ಯಾಣೀ ವತ್ಸರಕೋ ನೃಪಃ ।
ಪ್ರತೋಷಂ ನೀತವಾಂಚ್ಛಕ್ರಂ ತಪಸಾ ನಿರ್ಮಲೇನ ಚ ॥ ೫೬ ॥

ತತಸ್ತಪಸಾ ತುಷ್ಟ ಇಂದ್ರೋ ವಚನ ಮಬ್ರವೀತ್ ॥ ೫೭ ॥

ಇಂದ್ರ ಉವಾಚ ।

ಭೋ ಭೋ ಪಾರ್ಥಿವ ತುಷ್ಟೋಽಸ್ಮಿ ತಪಸಾನೇನ ಸಾಂಪ್ರತಂ ।
ಬ್ರೂಹಿ ಯತ್ತೇ ವರಂ ದದ್ಮಿ ಮನಸಾ ವಾಂಛಿತಂಸದಾ ॥ ೫೮ ॥

ಸೋಽಬ್ರವೀದ್ಯದಿ ಮೇ ತುಷ್ಟೋ ಯದಿ ದೇಯೊವರೋಮಮ ।
ವಿಮಾನಂ ಖೇಚರಂ ದೇಹಿ ಯೇನಾಗಚ್ಛಾಮಿ ತೇ ಗೃಹೇ ।
ನಿತ್ಯಮೇವಧರಾ ಪೃಷ್ಠಾದ್ವಂದನಾರ್ಥಂ ತವ ಪ್ರಭೋ ॥ ೫೯ ॥

Rarest Archive

೫೦. ಆದರಿಂದ ಆ ಕಮಂಡಲುವಿನಿಂದ ಹುಟ್ಟಿದ ನಾಗವಲ್ಲಿಯು ಅದೇ ಕಂಬವನ್ನು ಸುತ್ತಿಕೊಂಡು ಬೆಳೆಯಿತು.

೫೧. ಆ ಕಮಂಡಲುವಿನಿಂದ ಹುಟ್ಟಿದ ನಾಗವಲ್ಲಿಯ ಅಪೂರ್ವವೂ ಸುಗಂಧವೂ ಆದ ವಿಳ್ಳೇದೆಲೆಗಳನ್ನು ದೇವತೆಗಳು....

೫೨. (ದೇವತೆಗಳು) ಬಾಯಿಯ ನೈರ್ಮಲ್ಯಕ್ಕಾಗಿ ಹೆಚ್ಚು ಸಂತೋಷಗೊಂಡವರಾಗಿ ಸೇವಿಸುತ್ತಾರೆ.

೫೩. ತರುವಾಯ ವೈದ್ಯನಾದ ಧನ್ವಂತರಿಯು ಐರಾವತನ ಸ್ತಂಭದಲ್ಲಿ ಹುಟ್ಟಿದುದರಿಂದ ಆದಕ್ಕೆ ' ನಾಗವಲ್ಲೀ ' ಎನ್ನುವ ಹೆಸರನ್ನು ಕೊಟ್ಟನು. (ನಾಗ=ಆನೆ)

೫೪. ಮತ್ತು ನನ್ನ ಮಾತಿನಮೇಲೆ ಈ ವಿಳ್ಳೇದೆಲೆಯು ಕಾಮೋದ್ದೀಪನ ಉಂಟುಮಾಡುವುದಾಗಲಿ ಎಂಬುದಾಗಿ ' ನಾಗವಲ್ಲಿ ' ಎಂಬ ಹೆಸರನ್ನು ಕೊಟ್ಟನು, (ನಾಗ=ಮನ್ಮಥ)

೫೫. ಆ ನಾಗವಲ್ಲಿಯು ತಾಂಬೂಲವೆಂಬ ಹೆಸರನ್ನು ಪಡೆಯಲು ಆದರೊಡನೆ ಅಡಿಕೆ, ಸುಣ್ಣ, ಕಾಚು ಇವುಗಳನ್ನು ಸೇರಿಸಿದನು.

೫೬. ಕೆಲವು ಕಾಲದ ತರುವಾಯ ' ವಾಣಿವತ್ಸರಕ ' ಎನ್ನುವ ದೊರೆಯು, ಶುದ್ಧವಾದ ತಪಸ್ಸಿನಿಂದ ಇಂದ್ರನನ್ನು ಸಂತೋಷಗೊಳಿಸಿದನು.

೫೭. ಆ ತಪಸ್ಸಿನಿಂದ ಸಂತುಷ್ಟನಾದ ಇಂದ್ರನು ಆ ದೊರೆಯನ್ನು ಕುರಿತು ಹೀಗೆಂದನು.

## ಇಂದ್ರನು ಹೇಳಿದನು.

೫೮. ಎಲೈ ದೊರೆಯೇ, ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿರುವೆನು. ನಿನಗೆ ಇಷ್ಟವಾದ ವರವನ್ನು ಕೊಡುತ್ತೇನೆ ಕೇಳು.

೫೯. ಆಗ ವಾಣೀವತ್ಸರಕನು, ಎಲೈ ದೇವನೆ, ನೀನು ಸಂತುಷ್ಟನಾಗಿ ಇದ್ದಲ್ಲಿ, ಆಕಾಶದಲ್ಲಿ ಸಂಚರಿಸುವ ಒಂದು ವಿಮಾನವನ್ನು ನನಗೆ ಕೊಡು. ಆದರಿಂದ ನಾನು ಯಾವಾಗಲೂ ನಿನ್ನನ್ನು ನಮಸ್ಕರಿಸಲು ಭೂಮಿಯಿಂದ ಇಲ್ಲಿಗೆ ಬರುವೆನು.

Rarest Archive

ಸತಥೇತಿ ಪ್ರತಿಜ್ಞಾಯ ಹಂಸ ಬರ್ಹಿಣನಾದಿತಂ ।
ವಿಮಾನಂ ಪ್ರದದೌ ತಸ್ಮೈ ಮನೋಮಾರುತವೇಗಧೃಕ್ ॥ ೬೦ ॥

ಸತತ್ರ ನಿತ್ಯಮಾರುಹ್ಯ ಪ್ರಯಾತಿ ತ್ರಿದಶಾಲಯಂ ।
ಭಕ್ತ್ಯಾ ಪರಮಯಾಯುಕ್ತಃ ಸಹಸ್ರಾಕ್ಷಂ ಪ್ರವಂದಿತುಂ ॥ ೬೧ ॥

ತಸ್ಯ ಶಕ್ರಃ ಸ್ವಹಸ್ತೇನ ತಾಂಬೂಲಂ ಚ ಪ್ರಯಚ್ಛತಿ ।
ಸ ಚ ತದ್ಭಕ್ಷಯಾಮಾಸ ಪ್ರಹೃಷ್ಟೇನಾಂತರಾತ್ಮನಾ ॥ ೬೨ ॥

ವೃದ್ಧಭಾವೇಽಪಿ ಸಂಪ್ರಾಪ್ತೇ ತಸ್ಯ ಕಾಮೋಽತ್ಯವರ್ಧತ ।
ತಾಂಬೂಲಸ್ಯ ಪ್ರಭಾವೇನ ಸುಮಹಾನ್ ಪೃಥಿವೀಪತೇ ॥ ೬೩ ॥

ಅಥ ಶಕ್ರಮುವಾಚೇದಂ ಸ ರಾಜಾ ವಿನಯಾನ್ವಿತಃ ।
ನಾಗವಲ್ಲೀ ಪ್ರದಾನೇನ ಪ್ರಸಾದೋ ಮೇ ವಿಧೀಯತಾಂ ॥ ೬೪ ॥

ಮರ್ತ್ಯಲೋಕೇ ಸಮಾನೇತುಂ ಪ್ರಚಾರಂ ಯೇನ ಗಚ್ಛತಿ ।
ಸತಥೇತಿ ಪ್ರತಿಜ್ಞಾಯ ತಸ್ಮೈ ತಾಂ ಪ್ರದದೌ ತಥಾ ॥ ೬೫ ॥

ಗತ್ವಾ ನಿಜಪುರಂ ಸೋಽಪಿ ಸ್ವೋದ್ಯಾನೇ ಽ ಸ್ಥಾಪಯತ್ತದಾ ।
ತತಃ ಕಾಲೇನ ಮಹತಾ ಪ್ರಚಾರಂ ಸಾ ಗತಾಕ್ಷಿತೌ ॥ ೬೬ ॥

ಯಸ್ಯಾಸ್ವಾದನತೋ ಲೋಕಃ ಕಾಮಾತ್ಮಾ ಸಮಪದ್ಯತ ।
ನ ಕಶ್ಚಿತ್ ಯಜನಂ ಚಕ್ರೇ ಯಾಜನಂ ಚ ವಿಶೇಷತಃ ।
ಅನ್ಯಾ ಧರ್ಮಕ್ರಿಯಾ ಸರ್ವಾಃ ಪುನಶ್ಚಾಧರ್ಮ ಸಂಭವಃ ॥ ೬೭ ॥

ತತೋ ದೇವಗಣಾಃ ಸರ್ವೇ ಯಜ್ಞ ಭಾಗ ವಿವರ್ಜಿತಾಃ ಃ
ಪೀಡ್ಯಮಾನಾ ಕೃದಾವಿಷ್ಟಾ ಗತ್ವಾ ಪ್ರೋಚುಃ ಪಿತಾಮಹ ॥
॥ ೬೮ ॥

Rarest Archiver

೬೦. ಇಂದ್ರನು ಹಾಗೆಯೇ ಆಗಲೆಂದು, ಹಂಸಪಕ್ಷಿಯಂತೆ ರೆಕ್ಕೆಗಳುಳ್ಳ ಮನೋವೇಗವನ್ನೂ ಮೀರಿದ ವೇಗವುಳ್ಳ ವಿಮಾನವನ್ನು ಕೊಟ್ಟನು.

೬೧. ಆ ವಾಣೀವತ್ಸರಕನು ಉತ್ತಮವಾದ ಭಕ್ತಿಯಿಂದ ಇಂದ್ರನನ್ನು ಪ್ರತಿ ದಿವಸವೂ ನಮಸ್ಕರಿಸಲು ಆ ವಿಮಾನದಿಂದ ಸ್ವರ್ಗಕ್ಕೆ ಹೋಗುತ್ತಿದ್ದನು.

೬೨. ಆ ವಾಣೀವತ್ಸರಕನು ಸ್ವರ್ಗಕ್ಕೆ ಹೋದಾಗ, ಇಂದ್ರನಿಂದ ತನ್ನ ಕೈಯಿಂದಲೇ ಕೊಡಲ್ಪಡುವ ತಾಂಬೂಲವನ್ನು ಸೇವಿಸಿ ಬಹಳ ಸಂತೋಷಪಡುತ್ತಿದ್ದನು.

೬೩. (ಆದರಿಂದ) ವಾರ್ಧಿಕ್ಯದಲ್ಲಿಯೂ ಕೂಡ, ಆ ವಾಣೀವತ್ಸರಕನಿಗೆ ಹೆಚ್ಚಾಗಿ ಕಾಮವು ಅಭಿವೃದ್ಧಿಯನ್ನು ಹೊಂದಿತು.

೬೪. ಮುಂದೆ, ಆ ದೊರೆಯು ಬಹಳ ವಿನಯದಿಂದ ಕೂಡಿದವನಾಗಿ ಇಂದ್ರನನ್ನು ಕುರಿತು "ಈ ನಾಗವಲ್ಲಿಯನ್ನು ನನಗೆ ಅನುಗ್ರಹಿಸಬೇಕು"

೬೫. ಇದನ್ನು ಭೂಲೋಕದಲ್ಲಿಯೂ, ಸಹ ಪ್ರಚಾರಗೊಳಿಸುವೆನು" ಎಂದು ಕೇಳಿದನು. ಇಂದ್ರನೂ ಸಹ ಆಗ ನಾಗವಲ್ಲಿಯನ್ನು ಆ ದೊರೆಗೆ ಕೊಟ್ಟನು.

೬೬. ಆ ದೊರೆಯು ನಾಗವಲ್ಲಿಯನ್ನು ತಂದು ತನ್ನ ತೋಟದಲ್ಲಿ ಇಟ್ಟನು. ಮುಂದೆ ಕೆಲವು ಕಾಲದ ತರುವಾಯ ಆ ನಾಗವಲ್ಲಿಯು ಭೂಮಿಯಲ್ಲಿ ಹರಡಿತು.

೬೭. ಈ ಎಲೆಯ ಸೇವನೆಯಿಂದ ಜನರು ಕೇವಲ ಕಾಮ ಪರವಶರಾಗಿ ಯಜನ ಯಾಜನಾದಿ ಧರ್ಮಕ್ರಿಯೆಗಳನ್ನು ಮಾಡದೆ ಬಿಟ್ಟುಬಿಟ್ಟರು ಅಷ್ಟೇ ಅಲ್ಲ; ಲೋಕದಲ್ಲಿ ಧರ್ಮ ಕರ್ಮಗಳು ನಷ್ಟವಾದುವು,

೬೮, ಆದರಿಂದ ಯಜ್ಞಭಾಗಗಳು ಸಿಗದೆ ಕೋಪವನ್ನೂ ದುಃಖವನ್ನೂ ಹೊಂದಿದ ದೇವತೆಗಳು ಬ್ರಹ್ಮನನ್ನು ಕುರಿತು ಇಂತೆಂದರು,

Rarest Archive

ಮರ್ತ್ಯಲೋಕೇ ಸುರಶ್ರೇಷ್ಠ ನಷ್ಟಾ ಧರ್ಮಕ್ರಿಯಾ ಭೃಶಂ।
ಕಾಮಾಸಕ್ತೋ ಯತೋ ಲೋಕಸ್ತಾಂಬೂಲಸ್ಯ ಚ ಭಕ್ಷಣಾತ್।
ತಸ್ಮಾತ್ ಕುರು ಪ್ರಸಾದಂ ನೊ ಯೇನಾಸ್ಮಾಕಂ ಕ್ರಿಯಾಭವೇತ್ ॥
॥ ೬೯ ॥

ಏತಸ್ಮಿನ್ನೇವ ಕಾಲೇತು ಪುಷ್ಕರಸ್ಥಂ ಪಿತಾಮಹಂ।
ಯಜನಾರ್ಥೇ ಸಮಾಯಾಂತಂ ದರಿದ್ರೋ ವೀಕ್ಷ್ಯ
ಪಾರ್ಥಿವ ॥ ೭೦ ॥

ಪ್ರಣಿಪತ್ಯ ತತಃ ಪ್ರಾಹ ವಿನಯಾವನತಃ ಸ್ಥಿತಃ।
ನಿರ್ವಿಣ್ಣೋಹಂ ಸುರಶ್ರೇಷ್ಠ ಬ್ರಾಹ್ಮಣಾನಾಂ ಗೃಹೇಸ್ಥಿತಃ ॥ ೭೧॥

ತಸ್ಮಾತ್ ಕೀರ್ತಯ ಮೇ ಸ್ಥಾನಂ ಶ್ರೇಷ್ಠ ವಿತ್ತವತಾಂ ಹಿ ಯತ್
ತತ್ರ ಸಂಜಾಯತೇ ತೃಪ್ತಿಃ ಶಾಶ್ವತೀ ಪ್ರಚುರಾ ಪ್ರಭೋ ॥ ೭೨ ॥

ತಸ್ಯ ತದ್ವಚನಂ ಶ್ರುತ್ವಾ ಚಿರಂ ಧ್ಯಾತ್ವಾ ಪಿತಾಮಹಃ।
ಅಬ್ರವೀಚ್ಚ ದರಿದ್ರಂ ತಂ ಛಿದ್ರಾರ್ಥಂ ಧನಿನಾಮಿಹ ॥ ೭೩ ॥

ಚೂರ್ಣಪತ್ರೇ ತ್ವಯಾ ವಾಸಃ ಸದಾ ಕಾರ್ಯೋ ದರಿದ್ರ ಭೋಃ।
ತಾಂಬೂಲಸ್ಯ ತು ಪರ್ಣಾಗ್ರೇ ಭಾರ್ಯಯಾ ಮಮ ವಾಕ್ಯತಃ ॥
॥ ೭೪ ॥

ಪರ್ಣಾನಾಂ ಚೈವ ವೃಂತೇಷು ಸರ್ವೇಷು ತ್ವತ್‌ಸುತೇನ ಚ
ರಾತ್ರೌ ಖದಿರ ಸಾರೇ ಚ ತ್ವಂ ತಾಭ್ಯಾಂ ಸರ್ವದಾ ವಸ ॥ ॥ ೭೫ ॥

ಧನೀನಾಂ ಛಿದ್ರಕೃತ್ ಪ್ರೋಕ್ತಂ ಏತತ್ ಸ್ಥಾನಂ ಚತುಷ್ಟಯಂ
ಪಾರ್ಥಿವಾನಾಂ ವಿಶೇಷೇಣ ಮಮ ವಾಕ್ಯಾತ್‌ವ್ರಜದ್ರುತಂ ॥
॥ ೭೬ ॥

Rarest Archiver

೭೯. ಎಲೈ ದೇವಶ್ರೇಷ್ಠನೇ, ಭೂಲೋಕದಲ್ಲಿ ಜನರು ತಾಂಬೂಲ ಸೇವನೆಯಿಂದ ಕೇವಲ ಕಾಮಾಸಕ್ತರಾಗಿ, ಧರ್ಮಕಾರ್ಯಗಳನ್ನೇ ಬಿಟ್ಟು ಬಿಟ್ಟಿರುವರು, ಯಜ್ಞಯಾಗಾದಿಗಳು ಇಲ್ಲದ್ದರಿಂದ ನಮಗೆ ಯಾವ ಕೆಲಸಕಾರ್ಯಗಳೂ ಇಲ್ಲವಾಗಿವೆ.

೮೦. ಇದೇ ಕಾಲದಲ್ಲಿ ಕಮಲದಲ್ಲಿರುವ ಪಿತಾಮಹನನ್ನು ಕುರಿತು ದರಿದ್ರಾಧಿಪತಿಯಾದ ದೇವತೆಯು....

೮೧. ನಮಸ್ಕರಿಸಿ, ವಿನಯದಿಂದ ಕೂಡಿದವನಾಗಿ, "ಅಯ್ಯ ಪಿತಾಮಹನೇ, ಬ್ರಾಹ್ಮಣರ (ಬಡ ಬ್ರಾಹ್ಮಣರ) ಮನೆಯಲ್ಲಿ ವಾಸಮಾಡಿ ಸಾಕಾಗಿದೆ....

೮೨. ಧನಿಕರ ಮನೆಯಲ್ಲಿ ನನಗೆ ಒಂದು ಸ್ಥಾನವನ್ನು ಕಲ್ಪಿಸಿದಲ್ಲಿ, ಎಲೈ ಪ್ರಭುವೇ, ನನಗೆ ಶಾಶ್ವತವಾದ ತೃಪ್ತಿಯಾದೀತು" ಎಂದನು.

೮೩. ಆ ದರಿದ್ರ ದೇವತೆಯ ಮಾತನ್ನು ಲಾಲಿಸಿ, ಬ್ರಹ್ಮನು, ಧನಿಕರಿಗೂ ಸಹ ಛಿದ್ರವನ್ನುಂಟುಮಾಡಲು, ಆ ದರಿದ್ರನನ್ನು ಕುರಿತು ಈ ಮುಂದಿನ ಮಾತನ್ನು ಹೇಳಿದನು.

೮೪. ಎಲೈ ದರಿದ್ರ ದೇವತೆಯೇ, ನೀನು ಸುಣ್ಣದ ಎಲೆಯಲ್ಲಿ ವಾಸಿಸು. ಮತ್ತು ಎಲೆಯ ತುದಿಯಲ್ಲಿಯೂ ಸಹ ನಿನ್ನ ಭಾರ್ಯೆಯೊಡನೆ (ಹೆಂಡತಿ) ವಾಸಮಾಡು.

೮೫. ಎಲೆಯ ನರಗಳಲ್ಲಿ ನಿನ್ನ ಮಗನೊಡನೆ ಇರು. ರಾತ್ರಿಯ ಕಾಲದಲ್ಲಿ ನಿನ್ನ ಹೆಂಡತಿ, ಮಕ್ಕಳೊಡನೆ ಕಾಚಿನಲ್ಲಿರು.

೮೬. ಧನಿಕರಿಗೆ ಛಿದ್ರವನ್ನುಂಟುಮಾಡುವುವು ಈ ನಾಲ್ಕು ಸ್ಥಳಗಳು. ಆದರಲ್ಲಿಯೂ ದೊರೆಗಳಿಗೆ ವಿಶೇಷವಾಗಿ ಈ ಸ್ಥಳಗಳು ದಾರಿದ್ರ್ಯವನ್ನು ಕೊಡುವುದು. ನನ್ನ ಮಾತಿನಂತೆ ಬೇಗನೆ ಆ ಸ್ಥಾನಗಳನ್ನು ಆಕ್ರಮಿಸು ನಡೆ (ಎಂದನು).

Rarest Archive

ನಾರದ ಉವಾಚ।

ಏತತ್ತೆ ಸರ್ವಮಾಖ್ಯಾತಂ ಯತ್ಪೃಷ್ಟೋಽಸ್ಮಿ ನರಾಧಿಪ ॥ ೭೭॥

ತಾಂಬೂಲೋತ್ಥಾನಿ ಛಿದ್ರಾಣಿ ಯಥಾ ಸುಧನಿನಾಮಿಹ।
ತಾನಿ ಸರ್ವಾಣಿ ಚೀರ್ಣಾನಿ ತ್ವಯಾ ರಾಜನ್ನಜಾನತಾ।
ತೇನ ವೈ ವಿಭವೋಚ್ಛಿತ್ತಿಃ ಸಂಜಾತಾ ಸಹಸಾನ್ನೃಪ ॥ ೭೮॥

ರಾಜೋವಾಚ

ತದರ್ಥ ಮಪಿ ಮೇ ಬ್ರೂಹಿ ಪ್ರಾಯಶ್ಚಿತ್ತಂ ಮುನೀಶ್ವರ।
ಕದಾಚಿತ್ ಭಕ್ಷಣಂ ಮೇ ಸ್ಯಾತ್ತಾಂಬೂಲಸ್ಯ ತಥಾವಿಧಂ
॥ ೭೯॥

ಯೇನ ಸಂಜಾಯತೇ ಶುದ್ಧಿಃ ಕುತಾಂಬೂಲ ಸಮುದ್ಭವಾ॥
॥ ೮೦॥

ವಿಶ್ವಾಮಿತ್ರ ಉವಾಚ।

ಶೃಣು ರಾಜನ್ ಪ್ರವಕ್ಷ್ಯಾಮಿ ಪ್ರಾಯಶ್ಚಿತ್ತಂ ತು ಯಚ್ಚರೇತ್।
ಅಶ್ವಾಸನೇನ ಶುದ್ಧ್ಯರ್ಥಂ ಕುತಾಂಬೂಲಸ್ಯ ಭಕ್ಷಣಾತ್ ॥ ೮೧॥

ಪರ್ವಕಾಲಂ ಸಮುದ್ದಿಶ್ಯ ಸಮ್ಯಕ್ ಶ್ರದ್ಧಾ ಸಮನ್ವಿತಃ
ಆನಯೇತ್ ಬ್ರಾಹ್ಮಣಂ ರಾಜನ್ ವೇದವೇದಾಂಗ ಪಾರಗಂ
॥ ೮೨॥

ಪ್ರಕ್ಷಾಲ್ಯ ಚರಣಂ ತಸ್ಯ ವಾಸನೀ ಪರಿಧಾಪಯೇತ್।
ಸಂಪೂಜ್ಯ ಗಂಧ ಪುಷ್ಪಾದ್ಯೈಃ ತತಃ ಪತ್ರಂ ಹಿರಣ್ಮಯಂ॥
ಸಶಕ್ತ್ಯಾ ಕಾರಯಿತ್ವಾಥ ಚೂರ್ಣೇ ಮುಕ್ತಾಫಲಂ ನ್ಯಸೇತ್॥೮೩॥

ಪೂಗೀಫಲಂ ಚ ವೈಢೂರ್ಯಂ ಖದಿರಂ ರೂಪ್ಯಮೇವಚ।
ಮಂತ್ರೇಣಾನೇನ ವಿಪ್ರಾಯ ತಥೈವ ಸಮರ್ಪಯೇತ್ ॥ ೮೪॥

Rarest Archiver

ನಾರದನು ಹೇಳಿದನು.

೭೭. ತಾಂಬೂಲದಿಂದುಂಟಾಗುವ ದೋಷಗಳು ಹೇಗಾಗುವೆಂಬು ದನ್ನು ತಿಳಿ.

೭೮. ಆ ಎಲ್ಲ ದೋಷಗಳನ್ನೂ ಅಜ್ಞನಾದ ನೀನು ಮಾಡಿರುವೆ. ಆದ್ದರಿಂದ ನಿನ್ನ ಐಶ್ವರ್ಯವು ಇಷ್ಟು ಶೀಘ್ರದಲ್ಲಿಯೇ ಕಳೆದುಹೋಯಿತು.

ರಾಜನು (ಸಿದ್ಧಸೇನಾ) ಹೇಳಿದನು.

೭೯. ಆದುದರಿಂದ ಅದಕ್ಕೆ ಪ್ರಾಯಶ್ಚಿತ್ತವನ್ನೂ, ವಿಧಿವತ್ತಾದ ತಾಂಬೂಲ ಭಕ್ಷಣ ಕ್ರಮವನ್ನೂ ನನಗೆ ತಿಳುಹಿಸು ಮತ್ತು.

೮೦. ಯಾವ ವಿಧಿವತ್ತಾದ ತಾಂಬೂಲ ಸೇವನೆಯನ್ನು ಅರಿಯು ವುದರಿಂದ ಮೇಲಿನ ದುಷ್ಟವಾದ ದೋಷಗಳು ಉಂಟಾಗುವುದಿಲ್ಲವೋ (ಅದನ್ನೂ ತಿಳಿಸು).

ವಿಶ್ವಾಮಿತ್ರನು ಹೇಳುತ್ತಾನೆ.

೮೧. ಎಲ್ಲೆ ದೊರೆಯೇ (ಅನರ್ತನೇ), ಕುತ್ಸಿತವಾದ (ನಿಂದಿತ ವಾದ) ತಾಂಬೂಲವನ್ನು ಸೇವಿಸುವುದರಿಂದ ಉಂಟಾದ ದೋಷವನ್ನು ಕಳೆಯುವ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ, ಕೇಳು.

೮೨. ಪರ್ವ ಕಾಲದಲ್ಲಿ ಶ್ರದ್ಧೆಯಿಂದ ಕೂಡಿದವನಾಗಿ, ವೇದ ವೇದಾಂಗ ಪಾರಾಂಗತನಾದ ಬ್ರಾಹ್ಮಣನನ್ನು ಕರೆದುಕೊಂಡು ಬಾ.

೮೩. ಆತನಿಗೆ ಪಾದ ಪ್ರಕ್ಷಾಳನವನ್ನು ಮಾಡಿ, ವಸ್ತ್ರ, ಗಂಧ, ಪುಷ್ಪಾದಿಗಳನ್ನೂ, ಬಂಗಾರದ ವಿಳ್ಳೇದೆಲೆಯನ್ನೂ ಮಾಡಿ ಸುಣ್ಣದ ಸ್ಥಾನ ದಲ್ಲಿ ಮುತ್ತು (ಮುಕ್ತಾಫಲ) ಇಡು.

೮೪. ಅಡಿಕೆಯ ಸ್ಥಾನದಲ್ಲಿ ವೈಢೂರ್ಯವನ್ನೂ, ಕಾಚಿನ ಸ್ಥಾನ ದಲ್ಲಿ ಬೆಳ್ಳಿಯನ್ನೂ ಇಟ್ಟು ಈ ಮುಂದೆ ಹೇಳುವ ಮಂತ್ರದಿಂದ ಆತನಿಗೆ ದಾನಮಾಡು.

Rarest Archiver

ಯನ್ಮಯಾ ಭಕ್ಷಿತಂ ಪೂರ್ವಂ ವೃಂತಂ ಪತ್ರ ಸಮುದ್ಭವಂ ।
ಚೂರ್ಣಪತ್ರಂ ತಥೈವಾನ್ಯ ದ್ರಾತ್ರೌ ಖದಿರ ಮೇವ ಚ
॥ ೮೫ ॥

ತಸ್ಯ ಪಾಪಸ್ಯ ಶುದ್ಧ್ಯರ್ಥಂ ತಾಂಬೂಲಂ ಪ್ರತಿಗೃಹ್ಯತಾಂ ।
ತತಸ್ತು ಬ್ರಾಹ್ಮಣೋ ಮಂತ್ರಮೇವಂ ರಾಜನ್ನುದಾಹರೇತ್ ॥
॥ ೮೬ ॥

ಯಜಮಾನ ಹಿತಾರ್ಥಾಯ ಸರ್ವಪಾಪ ವಿಶುದ್ಧಯೇ ।
ಅಜ್ಞಾನಾತ್ ಜ್ಞಾನತೋ ವಾಪಿ ಕುತಾಂಬೂಲಂ ಪ್ರಭಕ್ಷಿತುಂ ॥
॥ ೮೭ ॥

ಭಕ್ಷಯಿಷ್ಯಸಿ, ಯಚ್ಚಾನ್ಯತ್ ಕದಾಚಿತ್ ಮೇ ಪ್ರಸಾದನಾತ್ ।
ತಸ್ಯ ದೋಷೋ ನತೇ ಭಾವೀ ಮಮ ವಾಕ್ಯಾದಸಂಶಯಃ॥ ೮೮ ॥

ಅನೇನ ವಿಧಿನಾ ದತ್ವಾ ತಾಂಬೂಲಂ ಶುದ್ಧಿಮಾಪ್ನುಯಾತ್ ।
ಕುತಾಂಬೂಲಸ್ಯ ದೋಷೇಣ ಗೃಹ್ಯತೇ, ನನರೋ ನೃಪಃ ॥ ೮೯ ॥

ತಸ್ಮಾತ್ವಂ ಹಿ ಮಹಾರಾಜ ವ್ರತಮೇತತ್ ಸಮಾಚರ ।
ಬಹು ಪುಣ್ಯತಮಂ ಹ್ಯೇತನ್ಮಹಾಭೋಗ ವಿವರ್ಧನಂ ॥ ೯೦ ॥

ಯಃ ಪ್ರಯಚ್ಛತಿ ರಾಜೇಂದ್ರ ವಿಧಿನಾನೇನ ಭಕ್ತಿತಃ ।
ಜನ್ಮಜನ್ಮಾಂತರೇ ವಾಪಿ ನ ತಾಂಬೂಲೇನ ಮುಚ್ಯತೇ ॥ ೯೧ ॥

ತಾಂಬೂಲಂ ಭಕ್ಷಯಿತ್ವಾ ಯೋ ನೈತದ್ದಾನಂ ಪ್ರಯಚ್ಛತಿ ।
ತಾಂಬೂಲ ವರ್ಜಿತಃ ಸೋಽತ್ರ ಭವೇತ್ ಜನ್ಮನಿ ಜನ್ಮನಿ ॥ ೯೨ ॥

ತಾಂಬೂಲ ವರ್ಜಿತಂ ಯಸ್ಯ ಮುಖಂ ಸ್ಯಾತ್ ಪೃಥಿವೀಪತೇ ।
ಕೃಪಣಸ್ಯ ದರಿದ್ರಸ್ಯ ತದ್ಬಿಲಂ ನಹಿ ತನ್ಮುಖಂ ॥ ೯೩ ॥

Rarest Archiver

೮೫. "ನಾನು ಪೂರ್ವದಲ್ಲಿ ವಿಳ್ಳೇದೆಲೆಯ ಮೇಲಿನ ತೊಟ್ಟು ಮುಂತಾದವುಗಳನ್ನೂ, ಸುಣ್ಣದ ಎಲೆಯನ್ನೂ, ರಾತ್ರಿಯ ಕಾಲದಲ್ಲಿ ಕಾಚನ್ನು ತಿಂದುದರಿಂದ ಉಂಟಾದ.

೮೬. ಪಾಪದ ಪರಿಹಾರಾರ್ಥವಾಗಿ ತಾಂಬೂಲವನ್ನು ತೆಗೆದುಕೋ." (ಈ ತಾಂಬೂಲದ ಜೊತೆಗೆ ಸರ್ವ ಪಾಪಗಳನ್ನೂ ತೆಗೆದುಕೋ ಎನ್ನುವುದೇ ಶಾಸ್ತ್ರ ದೃಷ್ಟಿಯಿಂದ ಸಿಗುವ ಅಂತರಾರ್ಥವು). ತರುವಾಯ ಎಲೈ ರಾಜನೇ, ಬ್ರಾಹ್ಮಣನೂ ಸಹ ಈ ಮುಂದಿನ ಮಂತ್ರವನ್ನು ಹೇಳತಕ್ಕದ್ದು.

೮೭. "ಯಜಮಾನನಾದ ನಿನ್ನ ಹಿತಕ್ಕಾಗಿಯೂ, ನಿನ್ನ ಪಾಪಗಳ ಶುದ್ಧಿಗಾಗಿಯೂ, ಜ್ಞಾನ ಅಥವಾ ಅಜ್ಞಾನದಿಂದ ಯಾವ ನಿಂದಿತವಾದ ತಾಂಬೂಲವನ್ನು ಸೇವಿಸುವುದರಿಂದ ಉಂಟಾದ ಪಾಪದ ಶುದ್ಧಿಗಾಗಿ,

೮೮. ಈಗ ನನ್ನನ್ನು ಸಂತೋಷಪಡಿಸುವುದರಿಂದ, ಆ ದೋಷವು ನನ್ನ ಈ ಮಾತಿನಿಂದ ನಿಸ್ಸಂಶಯವಾಗಿ ನಿನಗೆ ಉಂಟಾಗುವುದಿಲ್ಲವು."

೮೯. ಈ ವಿಧಿಯಿಂದ ತಾಂಬೂಲದಾನವನ್ನು ಮಾಡಿ ಶುದ್ಧಿಯನ್ನು ಹೊಂದುವನು. ನಿಂದಿತವಾದ ತಾಂಬೂಲ ಸೇವನೆಯಿಂದ ಉಂಟಾಗುವ ದೋಷದಿಂದ ಮುಕ್ತನಾಗುತ್ತಾನೆ.

೯೦. ಆದುದರಿಂದ ಎಲೈ ರಾಜನೆ ಪರಮೈಶ್ವರ್ಯವನ್ನು ಕೊಡುವ ಬಹಳ ಪುಣ್ಯವನ್ನುಂಟುಮಾಡುವಂತಹ ಇಂತಹ ವ್ರತವನ್ನು ಮಾಡು.

೯೧. ಯಾವಾತನು ಮೇಲೆ ಹೇಳಿದ ಕ್ರಮವನ್ನು ಅನುಸರಿಸಿ ಭಕ್ತಿಯಿಂದ ತಾಂಬೂಲ ದಾನಮಾಡುವನೋ (ತನ್ನ ಶಕ್ತ್ಯನುಸಾರವಾಗಿ) ಅತನು ಜನ್ಮ ಜನ್ಮಾಂತರದಲ್ಲಿಯೂ ತಾಂಬೂಲವನ್ನು ಹೊಂದುತ್ತಾನೆ.

೯೨. ತಾಂಬೂಲವನ್ನು ಸೇವಿಸುವವನಾದರೂ, ಯಾವಾತನು ದಾನವನ್ನು ಮಾಡುವುದಿಲ್ಲವೋ, ಅವನು ಜನ್ಮ ಜನ್ಮಾಂತರಗಳಲ್ಲೂ, ಎಲೆ ಅಡಿಕೆಯೂ ಇಲ್ಲದಿರುವಷ್ಟು ದರಿದ್ರನಾಗುವನು.

೯೩. ಎಲೈ ದೊರೆಯೇ, ತಾಂಬೂಲವನ್ನು ಸೇವಿಸದ ಲೋಭಿ, ದರಿದ್ರ ಮನುಷ್ಯನ ಬಾಯಿಯು ಬಾಯಿಯೇ ಅಲ್ಲವು. ಅದು ಬಿಲವೇ ಸರಿಯು.

Rarest Archiver

ತಾಂಬೂಲಂ ಬ್ರಾಹ್ಮಣೇಂದ್ರಾಯ ಯೋ ದತ್ವಾ ಪ್ರಾಕ್
ಪ್ರಭಕ್ಷಯೇತ್ ।
ಸುರೂಪೋ ಭಾಗ್ಯವಾನ್ ದಕ್ಷೋ ಭವೇತ್ ಜನ್ಮನಿ ಜನ್ಮನಿ ॥ ೯೪ ॥

ಏತತ್ತೇ ಸರ್ವಮಾಖ್ಯಾತಂ ಕುತಾಂಬೂಲಸ್ಯ ಭಕ್ಷಣಾತ್ ।
ಯತ್ಫಲಂ ಜಾಯತೇ ಪುಂಸಾಂ ಯದ್ದಾನೇನ ಮಹೀಪತೇ ॥ ೯೫ ॥

ಶಂಖಾದಿತ್ಯಾನುಷಂಗೇಣ ತಾಂಬೂಲಸ್ಯ ಚ ಭಕ್ಷಣೇ ।
ಯೇ ದೋಷಾ ಯೇ ಗುಣಾ ರಾಜನ್ ದಾನಂ ಚೈವ
ಪ್ರಭಕ್ಷಣೇ ॥ ೯೬ ॥

ಇತಿ ಶ್ರೀ ಸ್ಕಾಂದೇ ಪುರಾಣೇ ಏಕಾಶೀತಿ ಸಹಸ್ರ್ಯಾಂ ಸಂಹಿತಾಯಾಂ
ಷಷ್ಠೇ ನಾಗರ ಖಂಡೇ ಹಾಟಕೇಶ್ವರ ಕ್ಷೇತ್ರಮಾಹಾತ್ಮ್ಯೇ
ತಾಂಬೂಲೋತ್ಪತ್ತಿ
ತಾಂಬೂಲ ಮಾಹಾತ್ಮ್ಯ ವರ್ಣನಂ ನಾಮ ದಶೋತ್ತರ
ದ್ವಿಶತತಮೋಽಧ್ಯಾಯಃ

---

Rarest Archive

೯೪. ಯಾವಾತನು ಉತ್ತಮನಾದ ಬ್ರಾಹ್ಮಣನಿಗೆ ದಾನಮಾಡಿದ ತರುವಾಯ ತಾಂಬೂಲವನ್ನು ಸೇವಿಸುವನೋ ಅವನು ಜನ್ಮ ಜನ್ಮಾಂತರ ಗಳಲ್ಲಿ ಸುಂದರನೂ. ಭಾಗ್ಯವಂತನೂ, ಬುದ್ಧಿವಂತನೂ ಆಗುವನು.

೯೫, ಎಲ್ಲೈ ದೊರೆಯೇ, ನಿಂದಿತವಾದ ತಾಂಬೂಲ ಸೇವನೆಯಿಂದ ಯಾವ ದೋಷಗಳುಂಟಾಗುವುವೊ, ಶಕ್ತಿಯನ್ನು ಅನುಸರಿಸಿ ಭಕ್ತಿಯಿಂದ ತಾಂಬೂಲ ದಾನ ಮಾಡುವುದರಿಂದ ಯಾವ ಫಲವು ಸಿಗುವುದೋ ಅವೆಲ್ಲವನ್ನೂ ನಿನಗೆ ಹೇಳಿರುತ್ತೇನೆ.

೯೬. ಶಂಖತೀರ್ಥ ಮತ್ತು ಸೂರ್ಯ ಇವರ ಸಂಸ್ಕರಣ ಪೂರ್ವಕ ವಾಗಿ ತಾಂಬೂಲ ಭಕ್ಷಣ ಮಾಡುವುದರಿಂದ ಯಾವ ಗುಣಗಳು ಮತ್ತು ದೋಷಗಳು ಆಗುವುವೋ ಅವೆಲ್ಲವನ್ನೂ ಹೇಳಿರುವೆನು. ತಾಂಬೂಲ ದಾನವನ್ನು ಮಾಡುವುದರಿಂದ ಸಹ ಅಂತಹ ಗುಣದೋಷಗಳು ಉಂಟಾಗು ತ್ತವೆ.

ಸ್ಕಾಂದಪುರಾಣದಲ್ಲಿರುದ ‘ ತಾಂಬೂಲೋತ್ಪತ್ತಿ ’ ಮುಕ್ತಾಯವು.

---

Rarest Archiver

# ಅನುಬಂಧ ೩

## ತೂಕದ ವಿವರ

| | | |
|---|---|---|
| ೧೨ ಗುಂಜಗಳು | = | ೧ ಮಾಷ |
| ೪ ಮಾಷಗಳು | = | ೧ ನಿಷ್ಕ |
| ೨ ನಿಷ್ಕಗಳು | = | ೧ ತೊಲ |
| ೮ ಮಾಷಗಳು | = | ೧ ತೊಲ |
| ೨ ತೊಲಗಳು | = | ೧ ಕರ್ಷ |
| ೪ ಕರ್ಷಗಳು | = | ೧ ಪಲ |
| ೪ ಪಲಗಳು | = | ೧ ಕುರುವ |
| ೮ ಪಲಗಳು | = | ೧ ಸೇರು |
| ೨ ಸೇರುಗಳು | = | ೧ ಪ್ರಸ್ಥ |
| ೮ ಸೇರುಗಳು | = | ೧ ಪಾತ್ರ |
| ೩೨ ಸೇರುಗಳು | = | ೧ ದ್ರೋಣ |
| ೧೦೦ ಪಲಗಳು | = | ೧ ತುಲ |
| ೧೨೫ ಸೇರುಗಳು | = | ೧ ತುಲ |

ಉಷಾ ಪ್ರೆಸ್, ಮೈಸೂರು - 1

Rarest Archiver